Bennett & Coleman
THE TIMES OF INDIA
ಗುರುವಾರ,4 ಜೂನ್ 2026 | ಪುಟಗಳು: 16+4 | ಬೆಲೆ: ₹ 5.00
www.vijaykarnataka.com
c
ಸಂಪುಟ: 27 | ಸಂಚಿಕೆ: 154
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಡಿಕೆಶಿ ಪಟ್ಟಾಭಿಷೇಕ

ದೊಡ್ಡಾಲಹಳ್ಳಿ ಕೆಂಪೇಗೌಡ ಶಿವಕುಮಾರ್

ಜನಪ್ರಿಯ ಹೆಸರು: **ಡಿ.ಕೆ.ಶಿ / DKS**
ಹುಟ್ಟಿದ ದಿನಾಂಕ: **15 ಮೇ 1962**
ಹುಟ್ಟೂರು: **ದೊಡ್ಡಾಲಹಳ್ಳಿ, ಕನಕಪುರ, ಕರ್ನಾಟಕ**
ರಾಜಕೀಯ ಪಕ್ಷ: **ಭಾರತೀಯ ರಾಷ್ಟ್ರೀಯ ಕಾಂಗ್ರೆಸ್**

ಕುಟುಂಬ ಹಿನ್ನೆಲೆ

ಡಿ.ಕೆ. ಶಿವಕುಮಾರ್ ಅವರು ರೈತ ಕುಟುಂಬದಲ್ಲಿ ಜನಿಸಿದ್ದು, ತಂದೆ ಕೆಂಪೇಗೌಡ ಹಾಗೂ ತಾಯಿ ಗೌರಮ್ಮ. ಅವರ ಸಹೋದರ ಡಿ.ಕೆ.ಸುರೇಶ್ ಅವರು ಮಾಜಿ ಸಂಸದರಾಗಿದ್ದರು.

ಶಿಕ್ಷಣ ಮತ್ತು ಆರಂಭಿಕ ಜೀವನ

ಕನಕಪುರ ಹಾಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿದ ಅವರು ವಿದ್ಯಾರ್ಥಿ ಜೀವನದಲ್ಲೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡರು. ಕ್ರೀಡೆಯಲ್ಲಿ ಕೂಡ ಸಕ್ರಿಯರಾಗಿದ್ದು ಹಲವು ಗೌರವ ಪುರಸ್ಕಾರಗಳನ್ನು ಪಡೆದಿದ್ದಾರೆ.

ರಾಜಕೀಯ ಪಯಣ

- 1985ರಲ್ಲಿ ಸಾಥನೂರು ಕ್ಷೇತ್ರದಿಂದ ರಾಜಕೀಯ ಪ್ರವೇಶ
- 1989ರಲ್ಲಿ ಮೊದಲ ಬಾರಿ ಶಾಸಕರಾಗಿ ಆಯ್ಕೆ
- 8 ಬಾರಿ ಶಾಸಕರಾಗಿ ಜನರ ವಿಶ್ವಾಸ ಪಡೆದ ನಾಯಕ. ಇಂಧನ, ನಗರಾಭಿವೃದ್ಧಿ, ಜಲಸಂಪನ್ಮೂಲ ಮುಂತಾದ ಪ್ರಮುಖ ಖಾತೆಗಳ ಸಚಿವರಾಗಿ ಸೇವೆ
- 2020ರಲ್ಲಿ KPCC ಅಧ್ಯಕ್ಷರಾಗಿ ನೇಮಕ
- 2023ರಿಂದ ಕರ್ನಾಟಕ ಉಪ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಣೆ

ನಾಯಕತ್ವದ ವೈಶಿಷ್ಟ್ಯಗಳು

- ಕಾರ್ಯಕರ್ತರೊಂದಿಗೆ ನೇರ ಸಂಪರ್ಕ
- ಸಂಘಟನಾ ಸಾಮರ್ಥ್ಯ
- ಸಂಕಷ್ಟ ನಿರ್ವಹಣೆಯಲ್ಲಿ ಖ್ಯಾತಿ
- ತ್ವರಿತ ನಿರ್ಧಾರ ಕೈಗೊಳ್ಳುವ ನಾಯಕತ್ವ
- ಗ್ರಾಮೀಣ ನೆಲೆಯಿಂದ ರಾಷ್ಟ್ರಮಟ್ಟಕ್ಕೆ ಬೆಳೆದ ಜನನಾಯಕ.

ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಒಮ್ಮಿಂದೊಮ್ಮೆಲೇ ಒಲಿದು ಬಂದದ್ದಲ್ಲ. ಕಾಂಗ್ರೆಸ್ ಪಕ್ಷ ಕಂಡ ಅಪ್ರತಿಮ ನಾಯಕ ಅವರಾಗಿದ್ದು, ಪಕ್ಷ ಹಾಗೂ ಕಾರ್ಯಕರ್ತರನ್ನೇ ಉಸಿರಾಗಿಸಿಕೊಂಡವರು. ರಾಜ್ಯದಲ್ಲಿ ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದಾಗ ಕೆಪಿಸಿಸಿ ಅಧ್ಯಕ್ಷತೆ ವಹಿಸಿಕೊಂಡು ಅವರು ಪಕ್ಷವನ್ನು ಮುನ್ನಡೆಸಿ, ರಾಜ್ಯದಲ್ಲಿ ಅಧಿಕಾರಕ್ಕೆ ತಂದ ರೀತಿ ನಿಜಕ್ಕೂ ಮಾದರಿ ಮತ್ತು ಯುವನಾಯಕರಿಗೆ ಸ್ಫೂರ್ತಿ. ಮಾಸ್ ಲೀಡರ್ ಆಗಿರುವ ಡಿಕೆಶಿ ಅವರು ಸಿಎಂ ಆಗಿ ಅಧಿಕಾರ ಸ್ವೀಕರಿಸುತ್ತಿರುವ ಈ ಸಂದರ್ಭ ಪಕ್ಷದ ಕಾರ್ಯಕರ್ತರು ಮಾತ್ರವಲ್ಲ ನಾಯಕರಿಗೂ ಅವರ ಆಡಳಿತದ ಬಗ್ಗೆ ಕುತೂಹಲವಿದೆ. ರಾಜ್ಯದ ಸಮಗ್ರ, ಸರ್ವಸಮುದಾಯದ ಒಳಿತಿಗೆ ಒಳ್ಳೆಯ ಆಡಳಿತ ನೀಡುತ್ತಾರೆಂಬ ವಿಶ್ವಾಸ ನಮಗೆಲ್ಲರಿಗಿದೆ.

- ಶ್ರೀ ನಾಸೀರ್ ಹುಸೇನ್, ಪ್ರಧಾನ ಕಾರ್ಯದರ್ಶಿ, ಎಐಸಿಸಿ

9 ತಿಂಗಳ ಹಿಂದೆಯೇ ಡಿಕೆಗೆ ಸಿಎಂ ಟೈಟಲ್ !

ಮಂಗಳೂರು ದಸರಾ ಸಂದರ್ಭ ಪಿಲಿನಲಿಕೆ ಪ್ರತಿಷ್ಠಾನದಿಂದ ಆಯೋಜಿಸಲಾದ 10ನೇ ವರ್ಷದ ಪಿಲಿನಲಿಕೆ ಪಂಥಕ್ಕೆ ಆಗಮಿಸಿದ್ದ ಶ್ರೀ ಡಿ.ಕೆ. ಶಿವಕುಮಾರ್ ಅವರನ್ನು ಪಿಲಿನಲಿಕೆ ಪ್ರತಿಷ್ಠಾನದ ಅಧ್ಯಕ್ಷ, ಸಂಸ್ಥಾಪಕರು ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ಎಂ. ರೈ ಅವರು ಕರಾವಳಿಯ ಆರಾಧ್ಯ ದೇವತೆ ಕಟೀಲು ಶ್ರೀ ದುರ್ಗಾಪಮೇಶ್ವರೀ ಅಮ್ಮನವರ ಸ್ವರ್ಣದ ಸ್ಮರಣಿಕೆ ನೀಡುವ ವೇಳೆ ಅದರಲ್ಲಿ **CM of Karnataka** ಎಂದು 9 ತಿಂಗಳ ಹಿಂದೆಯೇ ನಮೂದಿಸಿದ್ದರು. ಪಿಲಿನಲಿಕೆ ವೇದಿಕೆಯಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಉದ್ದೇಶಿಸಿ ಮಾತನಾಡಿದ ಮಿಥುನ್ ರೈ ಅವರು, ಶ್ರೀ ಮಂಗಳಾದೇವಿ ಅನುಗ್ರಹದಲ್ಲಿ ಮುಂದಿನ ವರ್ಷದ ದಸರಾದ ವೇಳೆಗೆ ತಾವು ಸಿಎಂ ಆಗಿರುತ್ತೀರಿ. ಪಿಲಿನಲಿಕೆ ಎಂಬುವುದು ಕೇವಲ ಒಂದು ಕಲೆಯಲ್ಲ, ಅದು ದೇವಿಗೆ ಸಮರ್ಪಿಸುವ ಪವಿತ್ರ ಹರಕೆ. ವ್ರತಧಾರಿಗಳು ತಮ್ಮ ಭಕ್ತಿ, ಶ್ರದ್ಧೆ ಮತ್ತು ಸಂಕಲ್ಪವನ್ನು ಮಂಗಳಾದೇವಿಗೆ ಅರ್ಪಿಸುವ ಅತ್ಯುನ್ನತ ಹರಕೆಯ ರೂಪವೇ ಹುಲಿಕುಣಿತವಾಗಿದೆ. ನವರಾತ್ರಿ ಮಹೋತ್ಸವದ ಈ ಪರ್ವ ಕಾಲದಲ್ಲಿ ಮಂಗಳಾದೇವಿಯು ಡಿ.ಕೆ. ಸಾರ್ ಅವರನ್ನು ಈ ವೇದಿಕೆ ಮೂಲಕ ಕರೆಸಿಕೊಂಡಿದ್ದಾಳೆ ಎನ್ನುವುದು ನಮ್ಮ ನಂಬಿಕೆ. ಮುಂದಿನ ನವರಾತ್ರಿ ವೇಳೆಗೆ ನೀವು ಈ ರಾಜ್ಯದ 'ಮುಖ್ಯಮಂತ್ರಿಯಾಗಿ ರಾಜ್ಯದ ನೇತೃತ್ವ ವಹಿಸುವಂತೆ ದೇವಿ ಅನುಗ್ರಹಿಸಬೇಕೆಂದು ಈ ಪವಿತ್ರ ವೇದಿಕೆ ಮೂಲಕ ಪ್ರಾರ್ಥಿಸುತ್ತೇವೆ ಎಂದು ಶುಭ ಹಾರೈಸಿದ್ದರು. ಶ್ರೀ ದೇವಿಯ ಅನುಗ್ರಹ, ಅಭಿಮಾನಿಗಳ ಹಾರೈಕೆಯಿಂದ ಆ ಕನಸು ನನಸಾಗಿದೆ.

ಕರ್ನಾಟಕದ ನೂತನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ

ಶ್ರೀ ಡಿ.ಕೆ.ಶಿವಕುಮಾರ್

ಅವರಿಗೆ

ಹಾರ್ದಿಕ ಶುಭಾಶಯಗಳು

"ಸಾಮಾನ್ಯ ಕಾರ್ಯಕರ್ತನಿಂದ ರಾಜ್ಯದ ನಾಯಕತ್ವದ ಶಿಖರದ ವರೆಗೆ"

"ಬಲಿಷ್ಠ ಕರ್ನಾಟಕ – ಸಮೃದ್ಧ ಕರ್ನಾಟಕ"ದ ಕನಸಿಗೆ ಕಾರ್ಯರೂಪ

- ಅಭಿವೃದ್ಧಿಗೆ ಮಹತ್ವಾಕಾಂಕ್ಷಿ ಯೋಜನೆಗಳು
- ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ಆದ್ಯತೆ
- ಹೂಡಿಕೆ, ಉದ್ಯೋಗ ಮತ್ತು ಮೂಲಸೌಕರ್ಯ ವೃದ್ಧಿಗೆ ಬದ್ಧತೆ
- ಗ್ರಾಮೀಣ ಹಾಗೂ ನಗರಾಭಿವೃದ್ಧಿಗೆ ಸಮಾನ ಒತ್ತು

ಕರಾವಳಿ ನಾಡಿಮಿಡಿತ ಅರಿತ ನಾಯಕ

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರು ಮಂಗಳೂರು ಮತ್ತು ಕರಾವಳಿಯ ನಾಡಿಮಿಡಿತ ಅರಿತ ನಾಯಕ ಎನ್ನುವುದು ಅತಿಶಯೋಕ್ತಿಯಲ್ಲ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯವು 320 ಕಿ.ಮೀ. ಕಡಲ ತೀರ ಪ್ರದೇಶವನ್ನು ಹೊಂದಿದ್ದು, ಇದರ ಸಮಗ್ರ ಅಭಿವೃದ್ಧಿಗೆ ಯೋಜನೆ ಹಾಕಿದ್ದು, ಇದೀಗ ಇದಕ್ಕೆ ಪೂರಕವಾಗಿ ಮುಡಾ ಮಾಸ್ಟರ್ ಪ್ಲ್ಯಾನ್ ಮಾಡಿದೆ. ಕರಾವಳಿ ತೀರದುದ್ದಕ್ಕೂ ಕಾರಿಡಾರ್ ರಸ್ತೆ ನಿರ್ಮಿಸಿ ಆ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದು ಡಿ.ಕೆ. ಶಿವಕುಮಾರ್ ಅವರ ಕನಸಾಗಿದೆ. ಆ ಕನಸು ಸಾಕಾರಗೊಳ್ಳಲು ಇದೀಗ ಸುವರ್ಣಾವಕಾಶವಾಗಿದೆ.

ಕಡಲ ತೀರದಲ್ಲಿ ಸ್ಕೂಬಾ ಡೈವಿಂಗ್, ಸರ್ಫಿಂಗ್, ಪ್ಯಾರಾ ಸೈಲಿಂಗ್ ಉತ್ತೇಜನ ನೀಡುವುದು, ಪ್ರವಾಸೋದ್ಯಮ ಹಬ್ ಆಗಿ ಮಂಗಳೂರನ್ನು ರೂಪಿಸುವುದು, ಧಾರ್ಮಿಕ ಕೇಂದ್ರಗಳ ಸಂಪರ್ಕ ಜೋಡಣೆ, ಬೆಂಗಳೂರು-ಮಂಗಳೂರು ಮಧ್ಯೆ ಕಾರಿಡಾರ್ ನಿರ್ಮಾಣ, ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ರಿಂಗ್ ರೋಡ್ ಮತ್ತು ಹಿನ್ನೀರಿನ ಸೇತುವೆ ನಿರ್ಮಾಣ ಮುಂತಾದವು ಡಿ.ಕೆ. ಶಿವಕುಮಾರ್ ಅವರ ಪ್ರವಾಸೋದ್ಯಮ ಅಭಿವೃದ್ಧಿ ಕನಸಿನ ಯೋಜನೆಗಳಾಗಿವೆ.

"ಅಭಿವೃದ್ಧಿಯ ಪಯಣ ಮುಂದುವರಿಯಲಿ... ಕರ್ನಾಟಕ ಮತ್ತಷ್ಟು ಪ್ರಗತಿಪಥದಲ್ಲಿ ಸಾಗಲಿ..."

ನೂತನ ಸಚಿವರುಗಳಿಗೆ ಹಾರ್ದಿಕ ಶುಭಾಶಯಗಳು.

ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿ

ಶ್ರೀ ಕೆ.ಎಚ್. ಮುನಿಯಪ್ಪ


ಶ್ರೀ ಕೆ.ಜೆ. ಜಾರ್ಜ್

ಶ್ರೀ ಎಂ.ಬಿ. ಪಾಟೀಲ್

ಶ್ರೀ ರಾಮಲಿಂಗಾ ರೆಡ್ಡಿ

ಶ್ರೀ ಸತೀಶ್ ಜಾರಕಿಹೊಳಿ


ಶ್ರೀ ಕೃಷ್ಣ ಬೈರೇಗೌಡ

ಶ್ರೀ ಪ್ರಿಯಾಂಕ್ ಖರ್ಗೆ

ಶ್ರೀ ಯು.ಟಿ. ಖಾದರ್

ಶ್ರೀ ಈಶ್ವರ ಖಂಡ್ರೆ

ಡಾ. ಯತೀಂದ್ರ ಸಿದ್ದರಾಮಯ್ಯ

ಶ್ರೀ ಬೈರತಿ ಸುರೇಶ್


ಡಾ. ಶರಣ ಪ್ರಕಾಶ್ ಪಾಟೀಲ್

ದೃಢ ನಾಯಕತ್ವ | ಜನಪರ ಚಿಂತನೆ | ಅಭಿವೃದ್ಧಿಯ ಸಂಕಲ್ಪ

ಡಿಕೆಶಿ ಪಟ್ಟಾಭಿಷೇಕ

ದೊಡ್ಡಾಲಹಳ್ಳಿ ಕೆಂಪೇಗೌಡ ಶಿವಕುಮಾರ್

ಜನಪ್ರಿಯ ಹೆಸರು: **ಡಿ.ಕೆ.ಶಿ / DKS**
ಹುಟ್ಟಿದ ದಿನಾಂಕ: **15 ಮೇ 1962**
ಹುಟ್ಟೂರು: **ದೊಡ್ಡಾಲಹಳ್ಳಿ, ಕನಕಪುರ, ಕರ್ನಾಟಕ**
ರಾಜಕೀಯ ಪಕ್ಷ: **ಭಾರತೀಯ ರಾಷ್ಟ್ರೀಯ ಕಾಂಗ್ರೆಸ್**

ಕುಟುಂಬ ಹಿನ್ನೆಲೆ

ಡಿ.ಕೆ. ಶಿವಕುಮಾರ್ ಅವರು ರೈತ ಕುಟುಂಬದಲ್ಲಿ ಜನಿಸಿದ್ದು, ತಂದೆ ಕೆಂಪೇಗೌಡ ಹಾಗೂ ತಾಯಿ ಗೌರಮ್ಮ. ಅವರ ಸಹೋದರ ಡಿ.ಕೆ.ಸುರೇಶ್ ಅವರು ಮಾಜಿ ಸಂಸದರಾಗಿದ್ದರು.

ಶಿಕ್ಷಣ ಮತ್ತು ಆರಂಭಿಕ ಜೀವನ

ಕನಕಪುರ ಹಾಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿದ ಅವರು ವಿದ್ಯಾರ್ಥಿ ಜೀವನದಲ್ಲೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡರು. ಕ್ರೀಡೆಯಲ್ಲಿ ಕೂಡ ಸಕ್ರಿಯರಾಗಿದ್ದು ಹಲವು ಗೌರವ ಪುರಸ್ಕಾರಗಳನ್ನು ಪಡೆದಿದ್ದಾರೆ.

ರಾಜಕೀಯ ಪಯಣ

- 1985ರಲ್ಲಿ ಸಾಥನೂರು ಕ್ಷೇತ್ರದಿಂದ ರಾಜಕೀಯ ಪ್ರವೇಶ
- 1989ರಲ್ಲಿ ಮೊದಲ ಬಾರಿ ಶಾಸಕರಾಗಿ ಆಯ್ಕೆ
- 8 ಬಾರಿ ಶಾಸಕರಾಗಿ ಜನರ ವಿಶ್ವಾಸ ಪಡೆದ ನಾಯಕ. ಇಂಧನ, ನಗರಾಭಿವೃದ್ಧಿ, ಜಲಸಂಪನ್ಮೂಲ ಮುಂತಾದ ಪ್ರಮುಖ ಖಾತೆಗಳ ಸಚಿವರಾಗಿ ಸೇವೆ
- 2020ರಲ್ಲಿ KPCC ಅಧ್ಯಕ್ಷರಾಗಿ ನೇಮಕ
- 2023ರಿಂದ ಕರ್ನಾಟಕ ಉಪ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಣೆ

ನಾಯಕತ್ವದ ವೈಶಿಷ್ಟ್ಯಗಳು

- ಕಾರ್ಯಕರ್ತರೊಂದಿಗೆ ನೇರ ಸಂಪರ್ಕ
- ಸಂಘಟನಾ ಸಾಮರ್ಥ್ಯ
- ಸಂಕಷ್ಟ ನಿರ್ವಹಣೆಯಲ್ಲಿ ಖ್ಯಾತಿ
- ತ್ವರಿತ ನಿರ್ಧಾರ ಕೈಗೊಳ್ಳುವ ನಾಯಕತ್ವ
- ಗ್ರಾಮೀಣ ನೆಲೆಯಿಂದ ರಾಷ್ಟ್ರಮಟ್ಟಕ್ಕೆ ಬೆಳೆದ ಜನನಾಯಕ.

ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಒಮ್ಮಿಂದೊಮ್ಮೆಲೇ ಒಲಿದು ಬಂದದ್ದಲ್ಲ. ಕಾಂಗ್ರೆಸ್ ಪಕ್ಷ ಕಂಡ ಅಪ್ರತಿಮ ನಾಯಕ ಅವರಾಗಿದ್ದು, ಪಕ್ಷ ಹಾಗೂ ಕಾರ್ಯಕರ್ತರನ್ನೇ ಉಸಿರಾಗಿಸಿಕೊಂಡವರು. ರಾಜ್ಯದಲ್ಲಿ ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದಾಗ ಕೆಪಿಸಿಸಿ ಅಧ್ಯಕ್ಷತೆ ವಹಿಸಿಕೊಂಡು ಅವರು ಪಕ್ಷವನ್ನು ಮುನ್ನಡೆಸಿ, ರಾಜ್ಯದಲ್ಲಿ ಅಧಿಕಾರಕ್ಕೆ ತಂದ ರೀತಿ ನಿಜಕ್ಕೂ ಮಾದರಿ ಮತ್ತು ಯುವನಾಯಕರಿಗೆ ಸ್ಪೂರ್ತಿ. ಮಾಸ್ ಲೀಡರ್ ಆಗಿರುವ ಡಿಕೆಶಿ ಅವರು ಸಿಎಂ ಆಗಿ ಅಧಿಕಾರ ಸ್ವೀಕರಿಸುತ್ತಿರುವ ಈ ಸಂದರ್ಭ ಪಕ್ಷದ ಕಾರ್ಯಕರ್ತರು ಮಾತ್ರವಲ್ಲ ನಾಯಕರಿಗೂ ಅವರ ಆಡಳಿತದ ಬಗ್ಗೆ ಕುತೂಹಲವಿದೆ. ರಾಜ್ಯದ ಸಮಗ್ರ, ಸರ್ವಸಮುದಾಯದ ಒಳಿತಿಗೆ ಒಳ್ಳೆಯ ಆಡಳಿತ ನೀಡುತ್ತಾರೆಂಬ ವಿಶ್ವಾಸ ನಮಗೆಲ್ಲರಿಗಿದೆ.

- ಶ್ರೀ ನಾಸೀರ್ ಹುಸೇನ್, ಪ್ರಧಾನ ಕಾರ್ಯದರ್ಶಿ, ಎಐಸಿಸಿ

9 ತಿಂಗಳ ಹಿಂದೆಯೇ ಡಿಕೆಗೆ ಸಿಎಂ ಟೈಟಲ್ !

ಮಂಗಳೂರು ದಸರಾ ಸಂದರ್ಭ ಪಿಲಿನಲಿಕೆ ಪ್ರತಿಷ್ಠಾನದಿಂದ ಆಯೋಜಿಸಲಾದ 10ನೇ ವರ್ಷದ ಪಿಲಿನಲಿಕೆ ಪಂಥಕ್ಕೆ ಆಗಮಿಸಿದ್ದ ಶ್ರೀ ಡಿ.ಕೆ. ಶಿವಕುಮಾರ್ ಅವರನ್ನು ಪಿಲಿನಲಿಕೆ ಪ್ರತಿಷ್ಠಾನದ ಅಧ್ಯಕ್ಷ, ಸಂಸ್ಥಾಪಕರು ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ಎಂ. ರೈ ಅವರು ಕರಾವಳಿಯ ಆರಾಧ್ಯ ದೇವತೆ ಕಟೀಲು ಶ್ರೀ ದುರ್ಗಾಪಮೇಶ್ವರೀ ಅಮ್ಮನವರ ಸ್ವರ್ಣದ ಸ್ಮರಣಿಕೆ ನೀಡುವ ವೇಳೆ ಅದರಲ್ಲಿ **CM of Karnataka** ಎಂದು 9 ತಿಂಗಳ ಹಿಂದೆಯೇ ನಮೂದಿಸಿದ್ದರು. ಪಿಲಿನಲಿಕೆ ವೇದಿಕೆಯಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಉದ್ದೇಶಿಸಿ ಮಾತನಾಡಿದ ಮಿಥುನ್ ರೈ ಅವರು, ಶ್ರೀ ಮಂಗಳಾದೇವಿ ಅನುಗ್ರಹದಲ್ಲಿ ಮುಂದಿನ ವರ್ಷದ ದಸರಾದ ವೇಳೆಗೆ ತಾವು ಸಿಎಂ ಆಗಿರುತ್ತೀರಿ. ಪಿಲಿನಲಿಕೆ ಎಂಬುವುದು ಕೇವಲ ಒಂದು ಕಲೆಯಲ್ಲ, ಅದು ದೇವಿಗೆ ಸಮರ್ಪಿಸುವ ಪವಿತ್ರ ಹರಕೆ. ವ್ರತಧಾರಿಗಳು ತಮ್ಮ ಭಕ್ತಿ, ಶ್ರದ್ಧೆ ಮತ್ತು ಸಂಕಲ್ಪವನ್ನು ಮಂಗಳಾದೇವಿಗೆ ಅರ್ಪಿಸುವ ಅತ್ಯುನ್ನತ ಹರಕೆಯ ರೂಪವೇ ಹುಲಿಕುಣಿತವಾಗಿದೆ. ನವರಾತ್ರಿ ಮಹೋತ್ಸವದ ಈ ಪರ್ವ ಕಾಲದಲ್ಲಿ ಮಂಗಳಾದೇವಿಯು ಡಿ.ಕೆ. ಸಾರ್ ಅವರನ್ನು ಈ ವೇದಿಕೆ ಮೂಲಕ ಕರೆಸಿಕೊಂಡಿದ್ದಾಳೆ ಎನ್ನುವುದು ನಮ್ಮ ನಂಬಿಕೆ. ಮುಂದಿನ ನವರಾತ್ರಿ ವೇಳೆಗೆ ನೀವು ಈ ರಾಜ್ಯದ 'ಮುಖ್ಯಮಂತ್ರಿಯಾಗಿ ರಾಜ್ಯದ ನೇತೃತ್ವ ವಹಿಸುವಂತೆ ದೇವಿ ಅನುಗ್ರಹಿಸಬೇಕೆಂದು ಈ ಪವಿತ್ರ ವೇದಿಕೆ ಮೂಲಕ ಪ್ರಾರ್ಥಿಸುತ್ತೇವೆ ಎಂದು ಶುಭ ಹಾರೈಸಿದ್ದರು. ಶ್ರೀ ದೇವಿಯ ಅನುಗ್ರಹ, ಅಭಿಮಾನಿಗಳ ಹಾರೈಕೆಯಿಂದ ಆ ಕನಸು ನನಸಾಗಿದೆ.

ಕರ್ನಾಟಕದ ನೂತನ
ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ

ಶ್ರೀ ಡಿ.ಕೆ.ಶಿವಕುಮಾರ್

ಅವರಿಗೆ

ಹಾರ್ದಿಕ ಶುಭಾಶಯಗಳು

"ಸಾಮಾನ್ಯ ಕಾರ್ಯಕರ್ತನಿಂದ ರಾಜ್ಯದ ನಾಯಕತ್ವದ ಶಿಖರದ ವರೆಗೆ"

"ಬಲಿಷ್ಠ ಕರ್ನಾಟಕ — ಸಮೃದ್ಧ ಕರ್ನಾಟಕ"ದ ಕನಸಿಗೆ ಕಾರ್ಯರೂಪ

- ಅಭಿವೃದ್ಧಿಗೆ ಮಹತ್ವಾಕಾಂಕ್ಷಿ ಯೋಜನೆಗಳು
- ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ಆದ್ಯತೆ
- ಹೂಡಿಕೆ, ಉದ್ಯೋಗ ಮತ್ತು ಮೂಲಸೌಕರ್ಯ ವೃದ್ಧಿಗೆ ಬದ್ಧತೆ
- ಗ್ರಾಮೀಣ ಹಾಗೂ ನಗರಾಭಿವೃದ್ಧಿಗೆ ಸಮಾನ ಒತ್ತು

ಕರಾವಳಿ ನಾಡಿಮಿಡಿತ ಅರಿತ ನಾಯಕ

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರು ಮಂಗಳೂರು ಮತ್ತು ಕರಾವಳಿಯ ನಾಡಿಮಿಡಿತ ಅರಿತ ನಾಯಕ ಎನ್ನುವುದು ಅತಿಶಯೋಕ್ತಿಯಲ್ಲ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯವು 320 ಕಿ.ಮೀ. ಕಡಲ ತೀರ ಪ್ರದೇಶವನ್ನು ಹೊಂದಿದ್ದು, ಇದರ ಸಮಗ್ರ ಅಭಿವೃದ್ಧಿಗೆ ಯೋಜನೆ ಹಾಕಿದ್ದು, ಇದೀಗ ಇದಕ್ಕೆ ಪೂರಕವಾಗಿ ಮುಡಾ ಮಾಸ್ಟರ್ ಪ್ಲ್ಯಾನ್ ಮಾಡಿದೆ. ಕರಾವಳಿ ತೀರದುದ್ದಕ್ಕೂ ಕಾರಿಡಾರ್ ರಸ್ತೆ ನಿರ್ಮಿಸಿ ಆ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದು ಡಿ.ಕೆ. ಶಿವಕುಮಾರ್ ಅವರ ಕನಸಾಗಿದೆ. ಆ ಕನಸು ಸಾಕಾರಗೊಳ್ಳಲು ಇದೀಗ ಸುವರ್ಣಾವಕಾಶವಾಗಿದೆ.

ಕಡಲ ತೀರದಲ್ಲಿ ಸ್ಕೂಬಾ ಡೈವಿಂಗ್, ಸರ್ಫಿಂಗ್, ಪ್ಯಾರಾ ಸೈಲಿಂಗ್ ಉತ್ತೇಜನ ನೀಡುವುದು, ಪ್ರವಾಸೋದ್ಯಮ ಹಬ್ ಆಗಿ ಮಂಗಳೂರನ್ನು ರೂಪಿಸುವುದು, ಧಾರ್ಮಿಕ ಕೇಂದ್ರಗಳ ಸಂಪರ್ಕ ಜೋಡಣೆ, ಬೆಂಗಳೂರು-ಮಂಗಳೂರು ಮಧ್ಯೆ ಕಾರಿಡಾರ್ ನಿರ್ಮಾಣ, ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ರಿಂಗ್ ರೋಡ್ ಮತ್ತು ಹಿನ್ನೀರಿನ ಸೇತುವೆ ನಿರ್ಮಾಣ ಮುಂತಾದವು ಡಿ.ಕೆ. ಶಿವಕುಮಾರ್ ಅವರ ಪ್ರವಾಸೋದ್ಯಮ ಅಭಿವೃದ್ಧಿ ಕನಸಿನ ಯೋಜನೆಗಳಾಗಿವೆ.

"ಅಭಿವೃದ್ಧಿಯ ಪಯಣ ಮುಂದುವರಿಯಲಿ...
ಕರ್ನಾಟಕ ಮತ್ತಷ್ಟು ಪ್ರಗತಿಪಥದಲ್ಲಿ ಸಾಗಲಿ..."

ನೂತನ ಸಚಿವರುಗಳಿಗೆ ಹಾರ್ದಿಕ ಶುಭಾಶಯಗಳು.

ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿ

ಶ್ರೀ ಕೆ.ಎಚ್. ಮುನಿಯಪ್ಪ


ಶ್ರೀ ಕೆ.ಜೆ. ಜಾರ್ಜ್

ಶ್ರೀ ಎಂ.ಬಿ. ಪಾಟೀಲ್

ಶ್ರೀ ರಾಮಲಿಂಗಾ ರೆಡ್ಡಿ

ಶ್ರೀ ಸತೀಶ್ ಜಾರಕಿಹೊಳಿ


ಶ್ರೀ ಕೃಷ್ಣ ಬೈರೇಗೌಡ

ಶ್ರೀ ಪ್ರಿಯಾಂಕ್ ಖರ್ಗೆ

ಶ್ರೀ ಯು.ಟಿ. ಖಾದರ್

ಶ್ರೀ ಈಶ್ವರ ಖಂಡ್ರೆ

ಡಾ. ಯತೀಂದ್ರ ಸಿದ್ದರಾಮಯ್ಯ

ಶ್ರೀ ಬೈರತಿ ಸುರೇಶ್


ಡಾ. ಶರಣ ಪ್ರಕಾಶ್ ಪಾಟೀಲ್

ದೃಢ ನಾಯಕತ್ವ | ಜನಪರ ಚಿಂತನೆ | ಅಭಿವೃದ್ಧಿಯ ಸಂಕಲ್ಪ



ಡಿಕೆಶಿ ಯುಗಾರಂಭ

ವಿಜಯ ಕರ್ನಾಟಕ VK
www.vijaykarnataka.com
www.apps.vijaykarnataka.com

ರಾಜ್ಯದ 24ನೇ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ | 13 ಸಚಿವರ ಪದಗ್ರಹಣ | ಮಠಾಧೀಶರ ಆಶೀರ್ವಾದ, ಭೈರವ ಮಾಲೆಯ ಸತ್ಕಾರ; ಧಾರ್ಮಿಕ ವೈಭವದ ನಡುವೆ ಪಟ್ಟಾಭಿಷೇಕ | ದಿಗ್ಗಜರ ಸಮ್ಮುಖದಲ್ಲಿ ಸಾರಥ್ಯ: ಬಿಗಿದಪ್ಪಿ ಶುಭ ಹಾರೈಸಿದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ | ದಿಲ್ಲಿ ನಾಯಕರು, ನೆರೆರಾಜ್ಯಗಳ ಸಿಎಂಗಳ ದಂಡು | ಬೆಂಗಳೂರಿನಲ್ಲಿ ಮೇಳೈಸಿದ ಕಾಂಗ್ರೆಸ್ ಮಹಾಶಕ್ತಿ

ಡಿ.ಕೆ. ಶಿವಕುಮಾರ್ ಹೆಸರಿನ ನಾನು...

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಭವನದ ಗಾಜಿನ ಮನೆಯಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು, ಬೆಂಬಲಿಗರ ಮುಗಿಲು ಮುಟ್ಟಿದ ಹರ್ಷೋದ್ಗಾರ ಹಾಗೂ ಗಣ್ಯಾತಿಗಣ್ಯರ ಶುಭ ಹಾರೈಕೆಯೊಂದಿಗೆ ರಾಜ್ಯದ 24ನೇ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು. ತಾವು ನಂಬಿದ ನೊಣವಿನಕರೆ ಮಠದ ವೀರ ಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ ನಾಡಿನ ನಾನಾ ಭಾಗಗಳಿಂದ ಆಗಮಿಸಿದ ಧಾರ್ಮಿಕ ಮುಖಂಡರ ಉಪಸ್ಥಿತಿಯಲ್ಲಿ ಅವರು ಮುಖ್ಯಮಂತ್ರಿ ಗಾದಿ ಏರಿದರು.

ವಿಧಾನಸೌಧ ಬೃಹತ್ ಮೆಟ್ಟಿಲುಗಳ ಮೇಲೆ ಪ್ರಮಾಣ ವಚನ ಸ್ವೀಕರಿಸಲು ಸಾಧ್ಯವಾಗದಿದ್ದರೂ ಲೋಕಭವನದ ಗಾಜಿನ ಮನೆಯ ಹಿಂಬದಿಯನ್ನು 'ವಿಧಾನಸೌಧ ಮಾದರಿ'ಯಲ್ಲಿ ಚಿತ್ರಿಸಲಾಗಿತ್ತು. ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ 4 ಗಂಟೆ 14 ನಿಮಿಷಕ್ಕೆ ಸರಿಯಾಗಿ ಡಿ.ಕೆ.ಶಿವಕುಮಾರ್ ಅವರು ಭಾರತ ಸಂವಿಧಾನದ ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡು ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರು ಗಣ್ಯರ ಉಪಸ್ಥಿತಿಯ ವೇದಿಕೆಯಲ್ಲೇ ದೀರ್ಘದಂಡ ನಮಸ್ಕಾರ ಹಾಕಿ ನಾಡಿನ ಜತೆಗೆ ಧನ್ಯವಾದ ಅರ್ಪಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯ ಹಾಗೂ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು, ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಸೇರಿದಂತೆ ಹಲವು ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡರು. ಶಾಸಕರು, ಸಂಸದರು, ಸಿನಿಮಾ ನಟಿ ಹಾಗೂ ಮಾಜಿ ಸಂಸದೆ ರಮ್ಯಾ ಸೇರಿದಂತೆ ನಾನಾ ಕ್ಷೇತ್ರಗಳ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

4.14ಕ್ಕೆ ಡಿಕೆಶಿ ಪ್ರಮಾಣ

ನಂಬಿಕೆ

ಪ್ರಮಾಣ ವಚನ ಬೋಧನೆಗೆ ರಾಜ್ಯಪಾಲರ ಒಪ್ಪಿಗೆ ಪಡೆದ ಮುಖ್ಯ ಕಾರ್ಯದರ್ಶಿಗಳು 4 ಗಂಟೆ 14 ನಿಮಿಷಕ್ಕೆ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಿದರು. ತಕ್ಷಣ ವೇದಿಕೆಯಲ್ಲಿ ಇಡಲಾಗಿದ್ದ ಅಜ್ಜಯ್ಯರ ಫೋಟೋ ಬಳಿ ತೆರಳಿ ಪ್ರಾರ್ಥನೆ ಸಲ್ಲಿಸಿ ಪ್ರಮಾಣ ಸ್ವೀಕರಿಸಿದರು. 'ನನ್ನ ಅಜ್ಜ ವೀರ ಗಂಗಾಧರ ಅಜ್ಜ' ಎಂದು ಸಂಬೋಧಿಸಿ ಅದೇ ಹೆಸರಿನಲ್ಲಿ ಶ್ರದ್ಧಾಪೂರ್ವಕವಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಪಡೆದರು.

ಡಿಕೆಶಿ ಜತೆ 13 ಮಂದಿ ಪ್ರಮಾಣ

ಪ್ರಮಾಣ

ಮುಖ್ಯಮಂತ್ರಿಯಾಗಿ ಸಿಎಂ ಡಿ.ಕೆ. ಶಿವಕುಮಾರ್, ಡಿಸಿಎಂ ಆಗಿ ಡಾ.ಜಿ. ಪರಮೇಶ್ವರ ಅವರು ಪ್ರಮಾಣ ವಚನ ಸ್ವೀಕರಿಸಿದರು. ಸಂಪುಟ ದರ್ಜೆ ಸಚಿವರಾಗಿ ಕೆ.ಎಚ್. ಮುನಿಯಪ್ಪ, ಕೆ.ಜೆ.ಜಾರ್ಜ್, ಎಂ.ಬಿ.ಪಾಟೀಲ್, ರಾಮಲಿಂಗಾ ರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಯು.ಟಿ ಖಾದರ್, ಈಶ್ವರ್ ಖಂಡ್ರೆ, ಡಾ.ಯತೀಂದ್ರ ಸಿದ್ದರಾಮಯ್ಯ, ಬೈರತಿ ಸುರೇಶ್, ಡಾ.ಶರಣ ಪ್ರಕಾಶ್ ಪಾಟೀಲ್ ಅವರು ಪ್ರಮಾಣವಚನ ಸ್ವೀಕರಿಸಿದರು.

ಮಿಂಚಿದ ಡಿ.ಕೆ.ಸುರೇಶ್

ಸಡಗರ

ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಗರಿಗರಿಯಾದ ರೇಷ್ಮೆಯ ಶರ್ಟ್, ಪಂಚೆ ಮತ್ತು ಶಲ್ಯದೊಂದಿಗೆ ಮಿಂಚಿದರು. ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿ ಅವರನ್ನು ಬರಮಾಡಿಕೊಳ್ಳಲು ತೆರಳಿದ್ದ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಆಹ್ವಾನಿತರನ್ನು ಸುರೇಶ್ ಅವರೇ ಖುದ್ದು ನಿಂತು ಸ್ವಾಗತಿಸಿದರು. ಸುರೇಶ್ ಕಾರ್ಯಕ್ರಮಕ್ಕೆ ಬಂದ ಅತಿಥಿಗಳಿಗಾಗಿ ವಿಶೇಷವಾಗಿ ತಿರುಮಲದಿಂದ ಶ್ರೀವಾರು ಪ್ರಸಾದ ತರಿಸಿ ಹಂಚಿಸಿದರು.

ಮಾರ್ದನಿಸಿದ ಡಿ.ಕೆ, ಡಿ.ಕೆ ಘೋಷಣೆ

ಅಭಿಮಾನಿಗಳ ಹರ್ಷ

ರೇಷ್ಮೆ ವಸ್ತ್ರದ ಕಾಲರ್‌ಲೆಸ್ ಜುಬ್ಬಾ, ಪಂಚೆ ಹಾಗೂ ಶಲ್ಯ ಹಾಕಿಕೊಂಡು ಡಿ.ಕೆ.ಶಿವಕುಮಾರ್ ಅವರು ಮದುಮಗನಂತೆ ರಾಜಭವನದ ಗಾಜಿನ ಮನೆ ಪ್ರವೇಶಿಸುತ್ತಿದ್ದಂತೆ ಅಭಿಮಾನಿಗಳಿಂದ ಡಿ.ಕೆ.., ಡಿ.ಕೆ... ಉದ್ಗಾರವು ಮಾರ್ದನಿಸಿತು. ಹಸ್ತಾಲಾಘವ ಮಾಡಲು ಅಭಿಮಾನಿಗಳು ಮುಗಿಬಿದ್ದರು. ಪದಗ್ರಹಣಕ್ಕೆ ಮುನ್ನ ಶಿವಕುಮಾರ್ ಅವರು ಇಡೀ ಸಭಾಂಗಣವನ್ನು ಸುತ್ತಿ ಆಹ್ವಾನಿತರು, ಅಭಿಮಾನಿಗಳನ್ನು ಮಾತನಾಡಿಸಿದರು. ಸಭಾಂಗಣದ ಎರಡೂ ಬದಿಯಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ನೂತನ ಮುಖ್ಯಮಂತ್ರಿಗಳಿಗೆ ಹಸ್ತಲಾಘವ ಮಾಡಲು ಮುಗಿಬಿದ್ದರು. ಎಲ್ಲರಿಗೂ ನಗುಮುಖದಿಂದಲೇ ಪ್ರತಿಕ್ರಿಯಿಸುತ್ತಾ, ಅಭಿನಂದನೆ ಸ್ವೀಕರಿಸಿದರು.

ರಾಹುಲ್ ಜತೆ ಫ್ಯಾಮಿಲಿ ಫೋಟೊ

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪತ್ನಿ ಉಷಾ, ಪುತ್ರಿ ಐಶ್ವರ್ಯಾ, ಪುತ್ರ ಆಕಾಶ್ ಸೇರಿದಂತೆ ಕುಟುಂಬ ಸದಸ್ಯರು ಭಾಗಿಯಾದರು. ರಾಹುಲ್ ಗಾಂಧಿ ಜತೆಗೆ ಡಿ.ಕೆ.ಶಿವಕುಮಾರ್ ಒಟ್ಟಿಗೆ ಫೋಟೊ ತೆಗೆಸಿಕೊಂಡರು.

ಸಾಧು ಸಂತರ ಸಾಕ್ಷಿ

ಸಮಾರಂಭದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದ ನಾಥ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಕನಕ ಗುರುಪೀಠದ ಸ್ವಾಮೀಜಿ ನಿರಂಜನಾನಂದಪುರಿ, ಸಂತ ಸೇವಾಲಾಲ್ ಸ್ವಾಮೀಜಿ, ಮಾದರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದರ ಚನ್ನಯ್ಯ ಮಹಾಸ್ವಾಮಿ, ಆರ್ಚ್ ಬಿಷಪ್ ರೆವರೆಂಡ್ ಡಾ. ಪೀಟರ್ ಮಚಾಡೋ, ಭೋವಿ ಮಠದ ಹಿಮ್ಮಡಿ ಸಿದ್ದೇಶ್ವರ ಸ್ವಾಮೀಜಿ, ರಾಜಗುರು ದ್ವಾರಕನಾಥ ಗುರೂಜಿ, ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಗದುಗಿನ ತೋಂಟದಾರ್ಯ ಸ್ವಾಮೀಜಿ, ಸುಬ್ರಮಣ್ಯ ಕ್ಷೇತ್ರದ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ವಿನಯ್ ಗುರೂಜಿ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಖರ್ಗೆಗೆ ನಮಸ್ಕಾರ

ಭಾವುಕತೆ

ಸಮಾರಂಭಕ್ಕೆ ಆಗಮಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸ್ವಾಗತಿಸಿದ ಡಿ.ಕೆ. ಶಿವಕುಮಾರ್ ಬಾಗಿ ನಮಸ್ಕರಿಸಿದರು. ಬಳಿಕ ರಾಹುಲ್ ಗಾಂಧಿ ಅವರಿಗೆ ಹೂಗುಚ್ಛ ನೀಡಿ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ಡಿ.ಕೆ..ಶಿವಕುಮಾರ್ ಅವರನ್ನು ಬಿಗಿದಪ್ಪಿಕೊಂಡು ಅಭಿನಂದನೆ ಹೇಳಿದರು.

ಅಪ್ಪನ ಕಾಲಿಗೆ ಬಿದ್ದ ಯತೀಂದ್ರ

ರಾಜ್ಯಪಾಲರ ಒಂದು ಬದಿಗೆ ಡಿ.ಕೆ.ಶಿವಕುಮಾರ್ ಕುಳಿತಿದ್ದರೆ ಮತ್ತೊಂದು ಬದಿಯಲ್ಲಿ ಸಿದ್ದರಾಮಯ್ಯ ಅವರು ಆಸೀನರಾಗಿದ್ದರು. ಡಿ.ಕೆ.ಶಿವಕುಮಾರ್ ಹೂಗುಚ್ಛ ನೀಡಿ ಸಿದ್ದರಾಮಯ್ಯ ಅವರನ್ನು ಮೊದಲಿಗೆ ಸ್ವಾಗತಿಸಿದರು. ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ.ಯತೀಂದ್ರ ತಂದೆ ಸಿದ್ದರಾಮಯ್ಯ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಂಡರೆ, ಬೈರತಿ ಸುರೇಶ್ ಅವರೂ ಸಿದ್ದರಾಮಯ್ಯ ಕಾಲಿಗೆ ಬಿದ್ದರು.

ಮಧ್ಯದಲ್ಲೇ ನಿಂತ ನಾಡಗೀತೆ

ಸಮಾರಂಭದಲ್ಲಿ 3.55ಕ್ಕೆ ವೇದಿಕೆಗೆ ಗಣ್ಯರ ಆಗಮನವಾಯಿತು. ವಂದೇ ಮಾತರಂಗೆ ಎದ್ದು ನಿಲ್ಲುವಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿನಂತಿಸಿದರು. ಆದರೆ, ನಾಡಗೀತೆ ಶುರುವಾಯಿತು. ಎರಡು ಸಾಲು ನಾಡಗೀತೆ ಮೊಳಗಿತು. ತಕ್ಷಣ ನಿಲ್ಲಿಸಿ ವಂದೇ ಮಾತರಂ ಹಾಡಲಾಯಿತು. ಬಳಿಕ ಪೊಲೀಸ್ ಬ್ಯಾಂಡ್‌ನಲ್ಲಿ ರಾಷ್ಟ್ರಗೀತೆ ನುಡಿಸಿ ಅದಾದ ನಂತರ ನಾಡಗೀತೆಯನ್ನು ಹಾಕಲಾಯಿತು.

ವೇದಿಕೆಯಲ್ಲಿ ಅಜ್ಜಯ್ಯನ ಫಲ

ಸಾನ್ನಿಧ್ಯ

ವೇದಿಕೆಯಲ್ಲಿ ನೊಣವಿನಕೆರೆ ಮಠದ ಗಂಗಾಧರ ಅಜ್ಜಯ್ಯರ ಫೋಟೋವನ್ನು ಇಡಲಾಗಿತ್ತು. ಮಲ್ಲಿಗೆ ಹಾರ ಹಾಕಲಾಗಿತ್ತು. ವೇದಿಕೆಯಲ್ಲಿ ಅಜ್ಜಯ್ಯರ ಫೋಟೋಗೆ ಪುಷ್ಪ ಅರ್ಪಿಸಿ ಪ್ರಾರ್ಥನೆ ಸಲ್ಲಿಸಿದ ಬಳಿಕವಷ್ಟೇ ಡಿ.ಕೆ. ಶಿವಕುಮಾರ್ ಪ್ರಮಾಣ ವಚನ ಸ್ವೀಕಾರ ಮಾಡಿದರು.

ಕರಿಕಂಬಳಿ, ರುದ್ರಾಕ್ಷಿ ಕೊಡುಗೆ

ಲೋಕಭವನ ಪ್ರವೇಶಿಸುತ್ತಿದ್ದಂತೆ ಡಿ.ಕೆ. ಶಿವಕುಮಾರ್ ನೇರವಾಗಿ ನಾನಾ ಮಠಾಧೀಶರು ಹಾಗೂ ಧರ್ಮಗುರುಗಳು ಆಸೀನರಾಗಿದ್ದ ಕಡೆ ತೆರಳಿ ಎಲ್ಲರ ಆಶೀರ್ವಾದ ಪಡೆದುಕೊಂಡರು. ಈ ಸಂದರ್ಭದಲ್ಲಿ ಆದಿಚುಂಚನಗಿರಿ ಶ್ರೀಕ್ಷೇತ್ರದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಭೈರವ ಮಾಲೆಯನ್ನು ಹಾಕಿ ಆಶೀರ್ವದಿಸಿದರು. ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿಯವರು ಕರಿಕಂಬಳಿಯನ್ನು ಡಿ.ಕೆ.ಶಿವಕುಮಾರ್ ಅವರಿಗೆ ಹೊದಿಸಿ ಶುಭಕೋರಿದರು. ಕೆಲವು ಮಠಾಧೀಶರು ರುದ್ರಾಕ್ಷಿ ಸರ ತೊಡಿಸಿದರೆ ವಿದ್ಯಾಪ್ರಸನ್ನ ತೀರ್ಥರು ಮಂತ್ರಾಕ್ಷತೆ ಹಾಕಿ ಆಶೀರ್ವಾದ ಮಾಡಿದರು.

ಒಬ್ಬಂಟಿಯಾಗಿ ಜಮೀರ್ ನಿರ್ಗಮನ

ಬೇಸರ

ಜನಜಂಗುಳಿ ಮಧ್ಯೆಯೇ ಪ್ರಮಾಣವಚನ ಸ್ವೀಕಾರ ಸಮಾರಂಭ ವೀಕ್ಷಿಸುತ್ತಿದ್ದ ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಕೆಲಹೊತ್ತಿನಲ್ಲೇ ನಿರ್ಗಮಿಸಿದರು. ಸಚಿವರ ಪ್ರಮಾಣ ವಚನ ಸ್ವೀಕಾರ ನಡೆಯುತ್ತಿದ್ದಾಗಲೇ ಗುಂಪಿನ ಮಧ್ಯೆ ದಾರಿ ಮಾಡಿಕೊಂಡು ಹೊರಡಲು ಅಣಿಯಾದರು. ಆದರೆ, ಎಲ್ಲ ಕಡೆ ಮಾರ್ಗಗಳು ಬಂದ್ ಆಗಿದ್ದ ಕಾರಣ ಕೊನೆಗೆ ವೇದಿಕೆ ಸುತ್ತಿಕೊಂಡು ತೆರಳಿದರು.

ಮುಂಚೆ ಬಂದಿದ್ದ ಮೊಯಿಲಿ

ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಸುಮಾರು 2 ತಾಸು ಮುನ್ನವೇ ಸಮಾರಂಭಕ್ಕೆ ಆಗಮಿಸಿದರು. ವೇದಿಕೆಯ ಬಲಬದಿಯಲ್ಲಿ ಗಣ್ಯರಿಗಾಗಿ ಮೀಸಲಿಟ್ಟಿದ್ದ ಜಾಗದಲ್ಲಿ ಏಕಾಂಗಿಯಾಗಿ ಕುಳಿತಿದ್ದ ವೀರಪ್ಪ ಮೊಯಿಲಿ ಅವರನ್ನು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿಸಿ ಯೋಗಕ್ಷೇಮ ವಿಚಾರಿಸಿದರು. ಬಳಿಕ ಡಿ.ಕೆ.ಶಿವಕುಮಾರ್ ಖುದ್ದು ಮೊಯಿಲಿ ಬಳಿಗೆ ತೆರಳಿ ಹೂಗುಚ್ಛ ನೀಡಿ ನಮಸ್ಕರಿಸಿದರು.

ಮಹತ್ವಾಕಾಂಕ್ಷಿ ಮೇರು ಸಾಧನೆ

ದೊಡ್ಡ ಆಲಹಳ್ಳಿ ಕೆಂಪೇಗೌಡ ಶಿವಕುಮಾರ್

ಅಭಿಮಾನಿಗಳು ಕರೆಯುವುದು: ಡಿಕೆಶಿ, ಕನಕಪುರ ಬಂಡೆ
ಖಾತೆ: ಮುಖ್ಯಮಂತ್ರಿ | **ವಯಸ್ಸು:** 64
ವಿದ್ಯಾರ್ಹತೆ: ಎಂಎ | **ವೃತ್ತಿ:** ಕೃಷಿಕ, ಉದ್ಯಮಿ
ಜಾತಿ: ಒಕ್ಕಲಿಗ | **ಜಿಲ್ಲೆ, ಕ್ಷೇತ್ರ:** ರಾಮನಗರ, ಕನಕಪುರ
ಆಸ್ತಿ: ಸುಮಾರು 1,413 ಕೋಟಿ ರೂ.
ಶಾಸಕ: 8 ಬಾರಿ | **ಸಚಿವ:** 5 ಬಾರಿ
ಸಾಧನೆ: ಪಾವಗಡದಲ್ಲಿ ವಿಶ್ವದ ಅತಿ ದೊಡ್ಡ ಸೌರಶಕ್ತಿ ಪಾರ್ಕ್ ಸ್ಥಾಪನೆ
ಹವ್ಯಾಸ: ಆಧುನಿಕ ಕೃಷಿ ಪದ್ಧತಿಗಳ ಬಗ್ಗೆ ಆಸಕ್ತಿ
ಹೋರಾಟ: ಮೇಕೆದಾಟು ಯೋಜನೆ ಪಾದಯಾತ್ರೆ

ರಾಜಕೀಯ ಡಾಕ್ಟ್ರು

ಡಾ.ಜಿ.ಪರಮೇಶ್ವರ್

ಅಭಿಮಾನಿಗಳು ಕರೆಯುವುದು: ಡಾಕ್ಟ್ರು
ವಯಸ್ಸು: 75 | **ವಿದ್ಯಾರ್ಹತೆ:** ಅಗ್ರಿ ಬಿಎಸ್ಸಿ ಡಾಕ್ಟರೇಟ್
ವೃತ್ತಿ: ಶಿಕ್ಷಣ ಉದ್ಯಮಿ | **ಜಾತಿ:** ದಲಿತ (ಬಲಗೈ)
ಜಿಲ್ಲೆ, ಕ್ಷೇತ್ರ: ತುಮಕೂರು, ಕೊರಟಗೆರೆ
ಆದಾಯ: 21.27 ಕೋಟಿ ರೂ. | **ಶಾಸಕ:** 6 ಬಾರಿ
ಸಚಿವ: 6 ಬಾರಿ | **ಸಾಧನೆ:** ತುಮಕೂರು ವಿಶ್ವವಿದ್ಯಾಲಯ ಸ್ಥಾಪನೆ | **ಹವ್ಯಾಸ:** ಕ್ರೀಡೆ

ಅನ್ನಭಾಗ್ಯಕ್ಕೆ ಬಲ ತಂದವರು



ಕೆ.ಎಚ್.ಮುನಿಯಪ್ಪ

ಅಭಿಮಾನಿಗಳು ಕರೆಯುವುದು : ಕೆಎಚ್ಎಂ
ವಯಸ್ಸು : 78 | **ವಿದ್ಯಾರ್ಹತೆ :** ಬಿಎ, ಎಲ್ಎಲ್‌ಬಿ
ವೃತ್ತಿ : ವಕೀಲ | **ಜಾತಿ:** ದಲಿತ (ಎಡಗೈ)
ಜಿಲ್ಲೆ, ಕ್ಷೇತ್ರ : ಬೆಂಗಳೂರು ಗ್ರಾಮಾಂತರ, ದೇವನಹಳ್ಳಿ
ಆಸ್ತಿ: 59.63 ಕೋಟಿ ರೂ.
ಶಾಸಕ: 1 ಬಾರಿ ಎಂಎಲ್ಎ , 7 ಬಾರಿ ಎಂಪಿ
ಸಚಿವ: 3 ಬಾರಿ ಕೇಂದ್ರ, 1 ಬಾರಿ ರಾಜ್ಯದಲ್ಲಿ
ಸಾಧನೆ: ಅನ್ನಭಾಗ್ಯ ಯೋಜನೆಯ ಸಮರ್ಪಕ ಅನುಷ್ಠಾನ | **ಆಸಕ್ತಿಗಳು:** ಆಧ್ಯಾತ್ಮ, ಸಂಗೀತ

ಒದಿಗಿಂತಲೂ ಅನುಭವ ವಿಸ್ತಾರ

ಕೆ.ಜೆ.ಜಾರ್ಜ್

ವಯಸ್ಸು: 76 | **ವಿದ್ಯಾರ್ಹತೆ:** ಪಿಯುಸಿ
ವೃತ್ತಿ: ವ್ಯಾಪಾರ | **ಸಮುದಾಯ:** ಕ್ರಿಶ್ಚಿಯನ್
ಜಿಲ್ಲೆ, ಕ್ಷೇತ್ರ: ಬೆಂಗಳೂರು, ಸರ್ವಜ್ಞನಗರ
ಘೋಷಿತ ಆದಾಯ: 214.85 ಕೋಟಿ ರೂ.
ಶಾಸಕ: 6 ಬಾರಿ | **ಸಚಿವ:** 6 ಬಾರಿ |
ಹವ್ಯಾಸ: ಓದು, ಗಾಲ್ಫ್
ಸಾಧನೆ: ಕೈಗಾರಿಕಾ ಸಚಿವರಾಗಿ ರಾಜ್ಯಕ್ಕೆ ಹೂಡಿಕೆ ಹರಿವನ್ನು ಹೆಚ್ಚಿಸಿದ್ದಾರೆ. ಹಲವು ನಗರಗಳಲ್ಲಿ ಕಾರಿಡಾರ್ ಅಭಿವೃದ್ಧಿಪಡಿಸಿದ್ದಾರೆ. ಗೃಹ ಸಚಿವರಾಗಿ ಪೊಲೀಸ್ ಇಲಾಖೆ ಆಧುನಿಕರಣ ಜತೆಗೆ ನಗರದಲ್ಲಿ ಮಹಿಳೆಯರ ಸುರಕ್ಷತೆಗಾಗಿ 'ಪಿಂಕ್ ಹೊಯ್ಸಳ' ಪರಿಚಯಿಸಿದ್ದಾರೆ. ನವೀಕರಿಸಬಹುದಾದ ಇಂಧನಕ್ಕೆ ಒತ್ತು ನೀಡಿದ್ದು, ನಿರಂತರ ವಿದ್ಯುತ್ ಪೂರೈಕೆಗೆ ಗ್ರಿಡ್‌ಗಳನ್ನು ಬಲಪಡಿಸಿದ್ದಾರೆ.

ಬಯಲಿಗೆ ಬಣ್ಣ ತುಂಬಿದ ಭಗೀರಥ

ಮಲ್ಲನಗೌಡ ಬಸನಗೌಡ ಪಾಟೀಲ

ಅಭಿಮಾನಿಗಳು ಕರೆಯುವ ಹೆಸರು : ಎಂಬಿ ಗೌಡರು
ವಯಸ್ಸು : 62 | **ವಿದ್ಯಾರ್ಹತೆ:** ಬಿಇ, ಸಿವಿಲ್
ಜಾತಿ: ಲಿಂಗಾಯತ (ಕೂಡು ಒಕ್ಕಲಿಗ)
ವೃತ್ತಿ : ಬಿಎಲ್‌ಡಿಇ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಶಿಕ್ಷಣ ತಜ್ಞ
ಜಿಲ್ಲೆ, ಕ್ಷೇತ್ರ : ಬಬಲೇಶ್ವರ | **ಶಾಸಕ :** 6 ಬಾರಿ
ಸಚಿವ : ಈ ವರೆಗೆ 3 ಬಾರಿ
ಅತ್ಯುತ್ತಮ ಸಾಧನೆ : 2013ರಲ್ಲಿ ಸಿದ್ದರಾಮಯ್ಯ ಸರಕಾರದಲ್ಲಿ ನೀರಾವರಿ ಸಚಿವರಾಗುವ ಮೂಲಕ ಬರಪೀಡಿತ ವಿಜಯಪುರ ಜಿಲ್ಲೆಯನ್ನು ಹಸಿರಾಗಿಸುವ ಯೋಜನೆ ರೂಪಿಸಿದರು. ಜಿಲ್ಲೆಯಾದ್ಯಂತ 1 ಕೋಟಿ ಸಸಿ ನೆಟ್ಟು ಬೆಳೆಸಲಾಗಿದೆ.
ಹೋರಾಟ: ಲಿಂಗಾಯತ ಪ್ರತ್ಯೇಕ ಧರ್ಮದ ಮಾನ್ಯತೆಗಾಗಿ ನಡೆದ ಹೋರಾಟದಲ್ಲಿ ಮುಂಚೂಣಿ

ರಾಜಕೀಯ ಸಾವಯವ ಕೃಷಿಕ

ಕೃಷ್ಣ ಬೈರೇಗೌಡ

ವಯಸ್ಸು: 53 | **ವಿದ್ಯಾರ್ಹತೆ:** ಎಂಎ
ವೃತ್ತಿ: ಕೃಷಿಕ | **ಜಾತಿ:** ಒಕ್ಕಲಿಗ
ಜಿಲ್ಲೆ, ಕ್ಷೇತ್ರ: ಬೆಂಗಳೂರು, ಬ್ಯಾಟರಾಯನಪುರ
ಶಾಸಕ: 6 ಬಾರಿ | **ಸಚಿವ:** 4 ಬಾರಿ
ಘೋಷಿತ ಆದಾಯ: 16.70 ಕೋಟಿ ರೂ.
ಸಾಧನೆ: ಭೂ ಗ್ಯಾರಂಟಿ, ಪೋಡಿಮುಕ್ತ ಗ್ರಾಮ ಅಭಿಯಾನ, ಕಂದಾಯ ಸೇವೆಗಳಿಗೆ ಡಿಜಿಟಲ್ ಸ್ಪರ್ಶ



ಸೋಲರಿಯದ ಸರದಾರ

ರಾಮಲಿಂಗಾರೆಡ್ಡಿ

ವಯಸ್ಸು: 73
ವಿದ್ಯಾರ್ಹತೆ: ಬಿ.ಎಸ್ಸಿ, ಎಲ್ಎಲ್‌ಬಿ
ವೃತ್ತಿ: ವ್ಯಾಪಾರ
ಜಾತಿ/ಸಮುದಾಯ: ರೆಡ್ಡಿ
ಜಿಲ್ಲೆ, ಕ್ಷೇತ್ರ: ಬೆಂಗಳೂರು, ಬಿಟಿಎಂ ಕ್ಷೇತ್ರ
ಘೋಷಿತ ಆದಾಯ: 110.67 ಕೋಟಿ ರೂ.
ಶಾಸಕ: ಸತತ 8 ಬಾರಿ
ಸಚಿವ: 6 ಬಾರಿ | **ಹವ್ಯಾಸ:** ಓದು, ಕೃಷಿ
ಸಾಧನೆ: ಶಕ್ತಿ ಯೋಜನೆಯ ಮೂಲಕ 500 ಕೋಟಿಗೂ ಹೆಚ್ಚು ಮಹಿಳಾ ಪ್ರಯಾಣಿಕರ ಪ್ರಯಾಣ, ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್

ಅಬಕಾರಿ ಆದಾಯ ದಾಖಲೆವೀರ

ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ

ಅಭಿಮಾನಿಗಳು ಕರೆಯುವುದು: ಸಾಹುಕಾರ
ವಯಸ್ಸು: 64 ವರ್ಷ | **ವಿದ್ಯಾರ್ಹತೆ :** ಪಿಯುಸಿ
ವೃತ್ತಿ: ಕೃಷಿಕ, ಸಕ್ಕರೆ ಉದ್ಯಮಿ | **ಜಾತಿ:** ವಾಲ್ಮೀಕಿ
ಜಿಲ್ಲೆ, ಕ್ಷೇತ್ರ: ಬೆಳಗಾವಿ, ಯಮಕನಮರಡಿ
ಘೋಷಿತ ಆದಾಯ: 63 ಕೋಟಿ ರೂ.
ಶಾಸಕ: 4 ಬಾರಿ | **ಸಚಿವ :** 4 ಬಾರಿ
ಸಾಧನೆ: ಅಬಕಾರಿ ಸಚಿವರಾಗಿದ್ದಾಗ ರಾಜ್ಯ ಸರಕಾರಕ್ಕೆ ಅತಿ ಹೆಚ್ಚು ಆದಾಯ ತಂದುಕೊಟ್ಟಿರುವುದು.
ಹವ್ಯಾಸ: ಕೃಷಿ, ಪ್ರವಾಸ |
ಹೋರಾಟ: ಮೂಢನಂಬಿಕೆ ವಿರೋಧಿ ಅಭಿಯಾನ

ಬೆಸ್ಟ್ ಐಟಿಬಿಟಿ ಸಾಧಕ

ಪ್ರಿಯಾಂಕ್ ಖರ್ಗೆ

ವಯಸ್ಸು: 48 | **ವಿದ್ಯಾರ್ಹತೆ:** ಡಿಪ್ಲೊಮಾ
ವೃತ್ತಿ: ಈ ಮೊದಲು ಕಾರ್ಪೋರೇಟ್ ಕಂಪನಿ ಕೆಲಸ |
ಜಾತಿ: ದಲಿತ(ಬಲಗೈ)
ಜಿಲ್ಲೆ, ಕ್ಷೇತ್ರ: ಕಲಬುರಗಿ, ಚಿತ್ತಾಪುರ ಮೀಸಲು
ಘೋಷಿತ ಆದಾಯ: 11.16 ಕೋಟಿ ರೂ.
ಶಾಸಕ: 3 ಬಾರಿ | **ಸಚಿವ:** 3ನೇ ಬಾರಿ
ಸಾಧನೆ: ಅಧಿಕಾರ ವಿಕೇಂದ್ರೀಕರಣದಲ್ಲಿ ದೇಶದಲ್ಲೇ ರಾಜ್ಯ ನಂಬರ್ ಒನ್. ಬೆಸ್ಟ್ ಐಟಿಬಿಟಿ ಎಂದು ಕೇಂದ್ರದಿಂದ ಪ್ರಶಸ್ತಿ. ರಾಜ್ಯದಲ್ಲಿ ಗ್ರಾಪಂಗಳಲ್ಲಿ ಅತೀ ಹೆಚ್ಚು ಆಸ್ತಿ ತೆರಿಗೆ ಸಂಗ್ರಹ, ಐಟಿಬಿಟಿಯಲ್ಲಿ ಬೆಂಗಳೂರು ನಂಬರ್ ಒನ್ ಸ್ಥಾನಕ್ಕೆ ಏರಿಸಿದ್ದು. | **ಹವ್ಯಾಸ:** ಓದು, ಕೃಷಿ

ನಿಯಮ ಮೀರದ ನಿಷ್ಠಾವಂತ

ಯು.ಟಿ.ಖಾದರ್ ಫರೀದ್

ಅಭಿಮಾನಿಗಳು ಕರೆಯುವುದು: ಯುಟಿ
ವಯಸ್ಸು: 57 | **ವಿದ್ಯಾರ್ಹತೆ:** ಬಿಎ, ಎಲ್ಎಲ್‌ಬಿ
ಸಮುದಾಯ: ಮುಸ್ಲಿಂ/ಬ್ಯಾರಿ
ಜಿಲ್ಲೆ, ಕ್ಷೇತ್ರ: ದಕ್ಷಿಣ ಕನ್ನಡ, ಮಂಗಳೂರು
ಘೋಷಿತ ಆದಾಯ: 3.41 ಕೋಟಿ ರೂ.
ಶಾಸಕ: 5 ಬಾರಿ | **ಸಚಿವ:** 3 ಬಾರಿ
ಸಾಧನೆ: ಆರೋಗ್ಯ ಸಚಿವರಾಗಿ ತುರ್ತು ರೋಗಿಗಳಿಗೆ ಆಂಬ್ಯುಲೆನ್ಸ್, ಅಪಘಾತದಲ್ಲಿ ಗಾಯಗೊಂಡವರಿಗೆ ಸಾಂತ್ವನ ಯೋಜನೆ, ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ದಂತ ಭಾಗ್ಯ, ಸರಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೆಂಟರ್, ಹಿಮೋಫಿಲಿಯಾ ಸಹಿತ ಅಪರೂಪದ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ. | **ಹವ್ಯಾಸ:** ಕ್ರೀಡೆ, ಬೈಕ್ ರೈಡರ್, ಕಾರು ರ್‍ಯಾಲಿ

ಅರಣ್ಯ ಆಪದ್ಬಾಂಧವ

ಈಶ್ವರ ಖಂಡ್ರೆ

ಅಭಿಮಾನಿಗಳು ಕರೆಯುವುದು: ಖಂಡ್ರೆ ಸಾಬ್
ವಯಸ್ಸು: 64 ವರ್ಷ
ವಿದ್ಯಾರ್ಹತೆ: ಬಿಇ ಮೆಕ್ಯಾನಿಕ್
ವೃತ್ತಿ: ಕೃಷಿ, ಸಮಾಜ ಸೇವೆ | **ಜಾತಿ:** ಲಿಂಗಾಯತ
ಜಿಲ್ಲೆ, ಕ್ಷೇತ್ರ: ಬೀದರ್, ಭಾಲ್ಕಿ ಕ್ಷೇತ್ರ
ಘೋಷಿತ ಆದಾಯ: 9 ಕೋಟಿ 32 ಲಕ್ಷ ರೂ.
ಶಾಸಕ: 4 ಬಾರಿ | **ಸಚಿವ :** 3 ಬಾರಿ
ಸಾಧನೆ: ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣಕ್ಕೆ ಶ್ರಮ. ಅರಣ್ಯ ಅಪರಾಧ ತಡೆಗಟ್ಟಲು ಗರುಡಾಕ್ಷಿ ಎಂಬ ಆನ್ ಲೈನ್ ಎಫ್‌ಐಆರ್ ವ್ಯವಸ್ಥೆ ಜಾರಿ.
ಹವ್ಯಾಸ : ಓದುವುದು, ಸಂಗೀತ, ಕೈ ತೋಟ ನಿರ್ವಹಣೆ

ಮೃದು ಮಾತಿನ ವೈದ್ಯ



ಡಾ.ಯತೀಂದ್ರ ಸಿದ್ದರಾಮಯ್ಯ

ಅಭಿಮಾನಿಗಳು ಕರೆಯುವುದು: ಡಾಕ್ಟ್ರು
ವಯಸ್ಸು: 45
ವಿದ್ಯಾರ್ಹತೆ: ಎಂಬಿಬಿಎಸ್, ಎಂಡಿ
ವೃತ್ತಿ: ವೈದ್ಯ, ಕೃಷಿಕ | **ಜಾತಿ:** ಕುರುಬ
ಜಿಲ್ಲೆ, ಕ್ಷೇತ್ರ: ಮೈಸೂರು, ಪ್ರಸ್ತುತ ಎಂಎಲ್‌ಸಿ
ಘೋಷಿತ ಆಸ್ತಿ: 31.88 ಕೋಟಿ ರೂ.
ಶಾಸಕ: 1 ಬಾರಿ (ವರುಣ ಕ್ಷೇತ್ರ)
ಸಚಿವ: ಇದೇ ಮೊದಲು
ಅತ್ಯುತ್ತಮ ಸಾಧನೆ: ತಮ್ಮ ಅವಧಿಯಲ್ಲಿ ಕ್ಷೇತ್ರದ ಗ್ರಾಮೀಣ ರಸ್ತೆ, ಕುಡಿಯುವ ನೀರು, ಆರೋಗ್ಯ ಹಾಗೂ ನೀರಾವರಿ ಅಭಿವೃದ್ಧಿಗೆ ಒತ್ತು ನೀಡಿದರು. | **ಹವ್ಯಾಸ:** ಓದು, ಕೃಷಿ

ಮೃದು ನಡೆಯ ಕಠಿಣ ಕೆಲಸಗಾರ

ಬೈರತಿ ಸುರೇಶ್

ವಯಸ್ಸು: 53
ವಿದ್ಯಾರ್ಹತೆ: ಬಿಇ ಸಿವಿಲ್
ವೃತ್ತಿ: ಕೃಷಿಕ | **ಜಾತಿ:** ಕುರುಬ
ಜಿಲ್ಲೆ, ಕ್ಷೇತ್ರ: ಬೆಂಗಳೂರು, ಹೆಬ್ಬಾಳ
ಶಾಸಕ: 2 ಬಾರಿ, 1 ಬಾರಿ ಎಂಎಲ್‌ಸಿ,
ಸಚಿವ: 2 ಬಾರಿ
ಘೋಷಿತ ಆದಾಯ: 648.14 ಕೋಟಿ ರೂ.
ಹವ್ಯಾಸ: ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ
ಸಾಧನೆ: ವೇಗವಾಗಿ ಬೆಳೆಯುತ್ತಿರುವ ನಗರ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ. ನಗರ ಯೋಜನೆಗಳ ಮಾಸ್ಟರ್‌ಪ್ಲಾನ್ ಯಶಸ್ವಿ ಜಾರಿ.

ಹೆಲ್ತ್‌ಹಬ್ ಕನಸಿನ ರೂವಾರಿ

ಡಾ.ಶರಣಪ್ರಕಾಶ ಪಾಟೀಲ್

ಅಭಿಮಾನಿಗಳು ಕರೆಯುವುದು: ಡಾಕ್ಟರ್ ಸಾಬ್
ವಯಸ್ಸು: 59 ವರ್ಷ
ವಿದ್ಯಾರ್ಹತೆ: ಎಂಬಿಬಿಎಸ್, ಎಂಡಿ
ವೃತ್ತಿ: ವೈದ್ಯರು, **ಜಾತಿ:** ಲಿಂಗಾಯತ
ಜಿಲ್ಲೆ, ಕ್ಷೇತ್ರ: ಕಲಬುರಗಿ, ಸೇಡಂ ಕ್ಷೇತ್ರ
ಘೋಷಿತ ಆದಾಯ: 4. 95 ಕೋಟಿ ರೂ.
ಶಾಸಕ: 4 ಬಾರಿ | **ಸಚಿವ :** 3 ಬಾರಿ
ಸಾಧನೆ: ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಸಾಧನೆ. ಕಲಬುರಗಿಗೆ ಟ್ರಾಮಾ ಕೇರ್, ಕಿದ್ವಾಯಿ, ಜಯದೇವ ಹೃದ್ರೋಗ ಆಸ್ಪತ್ರೆ
ಹವ್ಯಾಸ: ಸ್ವಿಮ್ಮಿಂಗ್, ಓದು, ಕೃಷಿ, ಪ್ರಯಾಣ
ಹೋರಾಟ: ಪ್ರತ್ಯೇಕ ಲಿಂಗಾಯತ ಹೋರಾಟ

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 154
ಗುರುವಾರ,4 ಜೂನ್ 2026 | ಪುಟಗಳು: 16+4 | ಬೆಲೆ: ₹ 5.00
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ನೂತನ ಸಿಎಂ ಡಿಕೆಶಿಗೆ ಮೋದಿ ಅಭಿನಂದನೆ, ರಾಜ್ಯದೊಂದಿಗೆ ನಿಕಟ ಕಾರ್ಯದ ಭರವಸೆ

ಕೆಪಿಸಿಸಿ ನೂತನ ಸಾರಥಿಯಾಗಿ ಬಿ.ಕೆ. ಹರಿಪ್ರಸಾದ್ ನೇಮಕ P07

ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಿರಿ: ನೂತನ ಸಿಎಂ ಡಿಕೆಶಿಗೆ ಸೋನಿಯಾ ಗಾಂಧಿ ಸಂದೇಶ

ವಿಕ ಹೊಂಗಿರಣ

ಅತ್ಯುನ್ನತ ಅನುಸರಣೆಯೇ ಶ್ರೇಷ್ಠ ನಾಯಕನ ಲಕ್ಷಣ.
- ಅರಿಸ್ಟಾಟಲ್

SBI
The banker to every Indian
ಎಸ್‌ಬಿಐ ಕಾರು ಸಾಲಗಳು
- ಕಡಿಮೆ ಬಡ್ಡಿದರಗಳು
- ಶೂನ್ಯ ಪೂರ್ವಪಾವತಿ ಶುಲ್ಕಗಳು
- 2 ವರ್ಷಗಳ ನಂತರ ಯಾವುದೇ ಅವಧಿಪೂರ್ವ ಮುಕ್ತಾಯದ ಶುಲ್ಕಗಳಿಲ್ಲ
- 100% ವರೆಗೆ ಆನ್-ರೋಡ್ ಹಣಕಾಸು
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹123/- ಕೋಲಾರ 121/- ತುಮಕೂರು 121/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹163/-
ಕೋಲಾರ 161/- ತುಮಕೂರು 161/-
ವಿಥ್ ಸ್ಕಿನ್ ₹230/- ಕೋಲಾರ 227/- ತುಮಕೂರು 227/-
ವಿಥೌಟ್ ಸ್ಕಿನ್ ₹262/- ಕೋಲಾರ 259/- ತುಮಕೂರು 259/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ನೂತನ ಸಿಎಂಗೆ ಶ್ರೀಸಾಮಾನ್ಯನ ಪತ್ರ »06

ದಿಲ್ಲಿ ಹೋಟೆಲ್ ಅಗ್ನಿ ದುರಂತ, 21 ಜನರ ಸಾವು »11

ಟಿಎಂಸಿ ಉಚ್ಚಾಟಿತ ಶಾಸಕ ಪ. ಬಂಗಾಳದ ಪ್ರತಿಪಕ್ಷ ನಾಯಕ »11

ಡಿಕೆ ಸರ್ಕಾರ್, ಜೆನ್‌ಜಿಗೆ ಬಂಪರ್

ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ ಸೇರಿ 6 ಮಹತ್ವದ ಗ್ಯಾರಂಟಿ ಘೋಷಣೆ | ಉದ್ಯೋಗ, ಶಿಕ್ಷಣಕ್ಕೆ ಬಂಪರ್ | ರಾಜ್ಯಾದ್ಯಂತ ಎ ಖಾತೆ ಸ್ಕೀಂ ವಿಸ್ತರಣೆ
ಖಾಲಿ ಹುದ್ದೆಗಳ ಭರ್ತಿಗೆ ತಿಂಗಳಲ್ಲೇ ಟೈಮ್‌ಟೇಬಲ್ | ಚೊಚ್ಚಲ ಸಂಪುಟ ಸಭೆಯಲ್ಲಿ ಡಿಕೆಶಿ ಘೋಷಣೆ | ಇಲಾಖಾ ಮುಖ್ಯಸ್ಥರ ಜತೆ ಇಂದು ಸಿಎಂ ಸಭೆ

ರಾಜ್ಯದ ಜನತೆಗೆ ಸಿಎಂ ಶಿರಬಾಗಿ ನಮನ


ಸಂವಿಧಾನ ಪುಸ್ತಕ ಕೈಯಲ್ಲಿ ಹಿಡಿದು ಪ್ರಮಾಣ


ನೂತನ ಡಿಸಿಎಂ ಪರಮೇಶ್ವರ್‌ಗೆ ಆತ್ಮೀಯ ಆಲಿಂಗನ

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಚೊಚ್ಚಲ ಸಂಪುಟ ಸಭೆ ಬುಧವಾರ ಆರು ಮಹತ್ವದ ನಿರ್ಣಯಗಳನ್ನು ಮಾಡಿದೆ. ಸರಕಾರ ಈಗಾಗಲೇ ಜಾರಿ ಮಾಡಿರುವ ಜನಕಲ್ಯಾಣದ 'ಗ್ಯಾರಂಟಿ'ಗಳ ಮುಂದುವರಿಕೆ ಜತೆಗೆ, ಯುವಜನರನ್ನು ಗುರಿಯಾಗಿಸಿಕೊಂಡು ಮಹತ್ವದ ಘೋಷಣೆಗಳನ್ನು ಮಾಡಿದೆ.

ರಾಜಭವನದಲ್ಲಿ ಪದಗ್ರಹಣ ಸಮಾರಂಭದ ಬಳಿಕ ವಿಧಾನಸೌಧದಲ್ಲಿ ನಡೆದ ಕ್ಯಾಬಿನೆಟ್ ಬಳಿಕ ಖುದ್ದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ತೀರ್ಮಾನಗಳನ್ನು ಪ್ರಕಟಿಸಿದರು. ಯುವಜನರ ಶಿಕ್ಷಣ, ಉದ್ಯೋಗಕ್ಕೆ ಒತ್ತು ನೀಡುವ ಜತೆಗೆ, ಸತ್ಪ್ರಜೆಗಳಾಗಿ ರೂಪಿಸುವ ಆಶಯ ಈ ಘೋಷಣೆಗಳಲ್ಲಿ ಅಡಕವಾಗಿದ್ದು, ಖಾಸಗಿ ಉದ್ಯಮ ವಲಯದಲ್ಲಿ ಕನ್ನಡಿಗರಿಗೆ ಅರ್ಹತೆಗೆ ಅನುಗುಣವಾಗಿ ಉದ್ಯೋಗ ದೊರಕಿಸಿಕೊಡುವುದನ್ನು ಆದ್ಯತೆಯಾಗಿ ಪರಿಗಣಿಸಲಾಗಿದೆ. ವಿವರ»07

1 **'ಶಕ್ತಿ' ವಿಸ್ತರಣೆ:** ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಬಸ್‌ಪಾಸ್

2 **ನೇಮಕಾತಿಗೆ ಟೈಮ್ ಟೇಬಲ್:** ಹಣಕಾಸು ಇಲಾಖೆ ಅನುಮೋದನೆಯೊಂದಿಗೆ ಒಟ್ಟು 56,432 ಹುದ್ದೆಗಳ ನೇಮಕ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣ. 1 ತಿಂಗಳೊಳಗೆ ಇಲಾಖಾವಾರು ವೇಳಾಪಟ್ಟಿ ಪ್ರಕಟ.

3 **ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್:** ಖಾಸಗಿ ಉದ್ಯೋಗಾವಕಾಶ ಪಡೆಯಲು ಸಾಧ್ಯವಾಗುವಂತೆ, ಹಿಂದಿನ ಉದ್ಯೋಗ ವಿನಿಮಯ ಕೇಂದ್ರಗಳ ಮಾದರಿಯಲ್ಲಿ ರಾಜ್ಯ ಸರಕಾರದ ವತಿಯಿಂದ 'ಫೆಸಿಲಿಟೇಶನ್ ಸೆಂಟರ್' ಸ್ಥಾಪನೆ; ಕನ್ನಡಿಗರ ನೇಮಕಾತಿ ಆದ್ಯತೆಗೆ ಸಚಿವರ ತಂಡ ರಚನೆ.

4 **10 ಸಾವಿರ ಯುವ ಸಂಘ:** ಯುವ ಜನರನ್ನು ಸ್ವಾಭಿಮಾನಿ, ಸ್ವಾವಲಂಬಿಯಾಗಿ ರೂಪಿಸಲು ಪ್ರತಿ ಪಂಚಾಯತ್‌ಗೆ ಒಂದರಂತೆ 10 ಸಾವಿರ 'ಭಾರತ್ ಜೋಡೋ ಯುವ ಸಂಘ' ಸ್ಥಾಪನೆ; ಪ್ರತಿ ಯುವ ಸಂಘಕ್ಕೂ ಸರಕಾರದಿಂದ 10 ಲಕ್ಷ ರೂ. ಪ್ರೋತ್ಸಾಹಧನ

5 **ರಾಜ್ಯಾದ್ಯಂತ ಭೂ ಭಾಗ್ಯ ವಿಸ್ತರಣೆ:** ಬೆಂಗಳೂರಿಗೆ ಮಾತ್ರವಿದ್ದ ಓಸಿ, ಸಿಸಿ ಭಾಗ್ಯ, ಭೂ ಗ್ಯಾರಂಟಿ ಯೋಜನೆ ರಾಜ್ಯಾದ್ಯಂತ ವಿಸ್ತರಣೆ; 'ಬಿ' ಖಾತೆ ಆಸ್ತಿಗಳಿಗೆ 'ಎ' ಖಾತೆ ನೀಡುವ ಸೌಲಭ್ಯ ಇಡೀ ರಾಜ್ಯಕ್ಕೆ ವಿಸ್ತರಣೆ.

6 **'ನೈಸ್ ರಸ್ತೆ':** ಬೆಂಗಳೂರಿನ ಪ್ರಮುಖ ರಸ್ತೆಗಳ ಜತೆಗೆ, ರಾಜ್ಯಾದ್ಯಂತ ರಸ್ತೆಗಳ ಅಭಿವೃದ್ಧಿ, ಡಾಂಬರೀಕರಣಕ್ಕೆ 2 ಸಾವಿರ ಕೋಟಿ ರೂ. ಅನುದಾನ.

ಅಜ್ಜಯ್ಯನ ಹೆಸರಲ್ಲಿ ಪ್ರಮಾಣ

ಬೆಂಗಳೂರು: ಡಿ.ಕೆ. ಶಿವಕುಮಾರ್ ಅವರು ರಾಜಭವನದ ಗಾಜಿನ ಮನೆಯಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು, ಬೆಂಬಲಿಗರು ಹಾಗೂ ಮುಗಿಲು ಮುಟ್ಟಿದ ಹರ್ಷೋದ್ಗಾರದ ನಡುವೆ ರಾಜ್ಯದ 24ನೇ ಮುಖ್ಯಮಂತ್ರಿಯಾಗಿ ಬುಧವಾರ ಸಂಜೆ 4.14ಕ್ಕೆ ಪ್ರಮಾಣವಚನ ಸ್ವೀಕರಿಸಿದರು. ತಾವು ನಂಬಿದ ನೊಣವಿನಕೆರೆ ಮಠದ ಪೀಠ ಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ, ನಾಡಿನ ನಾನಾ ಭಾಗಗಳಿಂದ ಆಗಮಿಸಿದ ಧಾರ್ಮಿಕ ಮುಖಂಡರ ಉಪಸ್ಥಿತಿಯಲ್ಲಿ ಅವರು ಮುಖ್ಯಮಂತ್ರಿ ಗಾದಿ ಏರಿದರು.

ರೇಷ್ಮೆ ಪಂಚೆ, ಜುಬ್ಬ, ಶಲ್ಯ ಧರಿಸಿ ಸಾಂಪ್ರದಾಯಿಕ ಉಡುಗೆಯಲ್ಲಿ ಮಿಂಚುತ್ತಿದ್ದ ಅವರು ಪ್ರಮಾಣ ವಚನ ಸ್ವೀಕರಿಸುವ ಮೊದಲು ವೇದಿಕೆಯಲ್ಲಿ ದೀರ್ಘದಂಡ ನಮಸ್ಕಾರ ಮಾಡುವ ಮೂಲಕ ರಾಜ್ಯದ ಜನತೆಗೆ ಕೃತಜ್ಞತೆ ಸಲ್ಲಿಸಿದರು. ಬಳಿಕ ವೇದಿಕೆ ಮೇಲೆಯೇ ಇರಿಸಿದ್ದ ಅಜ್ಜಯ್ಯನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಪ್ರಮಾಣವಚನ ಸ್ವೀಕರಿಸಿದರು. ಪದಗ್ರಹಣದ ನಂತರ ಮೊದಲ ಬಾರಿಗೆ ವಿಧಾನಸೌಧಕ್ಕೆ ಆಗಮಿಸಿದ ಅವರು, ಶಕ್ತಿಸೌಧದ ಮೆಟ್ಟಿಲುಗಳಿಗೆ ಶಿರಬಾಗಿ ನಮಸ್ಕಾರ ಸಲ್ಲಿಸಿ ಒಳಗೆ ಹೆಜ್ಜೆ ಹಾಕಿದರು.

ಸಮೃದ್ಧ ಕರ್ನಾಟಕ ಕಟ್ಟಲು ಕೈಜೋಡಿಸಿ...

ನನ್ನ ಹೆಗಲ ಮೇಲಿರುವುದು ಕೇವಲ ಮುಖ್ಯಮಂತ್ರಿಯ ಜವಾಬ್ದಾರಿಯಲ್ಲ, ಬದಲಿಗೆ ಕೋಟ್ಯಂತರ ಕನ್ನಡಿಗರ ಕನಸುಗಳನ್ನು ನನಸು ಮಾಡುವ ಪವಿತ್ರ ಕರ್ತವ್ಯ. ವೇಗವಾಗಿ ಬದಲಾಗುತ್ತಿರುವ ಇಂದಿನ ತಂತ್ರಜ್ಞಾನದ ಯುಗದಲ್ಲಿ, ಹೊಸ ಆಲೋಚನೆಗಳೊಂದಿಗೆ ನಮ್ಮ ಹೆಮ್ಮೆಯ ಕರ್ನಾಟಕವನ್ನು ಅಭಿವೃದ್ಧಿಯ ಅತ್ಯುನ್ನತ ಶಿಖರಕ್ಕೆ ಕೊಂಡೊಯ್ಯಬೇಕಿದೆ. ಈ ಸರ್ವತೋಮುಖ ಪ್ರಗತಿಯ ದಾರಿಯಲ್ಲಿ ರೈತರು, ಶ್ರಮಿಕರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಹಾಗೂ ಪ್ರತಿಯೊಬ್ಬ ನಾಗರಿಕರ ಸಹಭಾಗಿತ್ವ ನಮಗೆ ಮುಖ್ಯ. ಯಾವುದೇ ಒಬ್ಬ ವ್ಯಕ್ತಿಯಿಂದ ಬದಲಾವಣೆ ಸಾಧ್ಯವಿಲ್ಲ, ಆದರೆ ನಾವೆಲ್ಲರೂ ಕೈಜೋಡಿಸಿದರೆ ಅಸಾಧ್ಯವಾದುದು ಯಾವುದೂ ಇಲ್ಲ. ನಮ್ಮ ಭವಿಷ್ಯದ ಪೀಳಿಗೆ ಹೆಮ್ಮೆ ಪಡುವಂತಹ ಸುಂದರ, ಸಮೃದ್ಧ ಮತ್ತು ಪ್ರಗತಿಪರ ಕರ್ನಾಟಕವನ್ನು ಕಟ್ಟೋಣ.

- **ಡಿ.ಕೆ. ಶಿವಕುಮಾರ್** ನೂತನ ಮುಖ್ಯಮಂತ್ರಿ

ಮುಖ್ಯಮಂತ್ರಿ ಜತೆಗೆ 13 ಮಂದಿ ಸಚಿವರಾಗಿ ಪ್ರಮಾಣ

ಮುಖ್ಯಮಂತ್ರಿಯಾಗಿ ಸಿಎಂ ಡಿ.ಕೆ. ಶಿವಕುಮಾರ್, ಡಿಸಿಎಂ ಆಗಿ ಡಾ.ಜಿ. ಪರಮೇಶ್ವರ ಅವರು ಪ್ರಮಾಣ ವಚನ ಸ್ವೀಕರಿಸಿದರು. ಸಂಪುಟ ದರ್ಜೆ ಸಚಿವರಾಗಿ ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಎಂ.ಬಿ.ಪಾಟೀಲ್, ರಾಮಲಿಂಗಾ ರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಯು.ಟಿ ಖಾದರ್, ಈಶ್ವರ್ ಖಂಡ್ರೆ, ಡಾ.ಯತೀಂದ್ರ ಸಿದ್ದರಾಮಯ್ಯ, ಬೈರತಿ ಸುರೇಶ್, ಡಾ.ಶರಣ ಪ್ರಕಾಶ್ ಪಾಟೀಲ್ ಅವರು ಪ್ರಮಾಣವಚನ ಸ್ವೀಕರಿಸಿದರು.

वित्तीय सेवाएं विभाग
भारत सरकार
MPLADS
NABARD
ಕಲ್ಯಾಣ ಸಂಪದ
KALYANA SAMPADA
From Karnataka's Heart to the World
MPLAD ಯೋಜನೆಯಡಿ
ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೃಷಿ-ಸಂಸ್ಕರಣೆಗಾಗಿ
ರೈತರ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರದ
ಉದ್ಘಾಟನೆ
ಇವರಿಂದ
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಕೇಂದ್ರ ಸಚಿವರು

4 ಜೂನ್ 2026 / ಬದ್ದೇಪಲ್ಲಿ, ಯಾದಗಿರಿ

www.nabard.org
Taking Rural India >> Forward
/nabardonline

R.V. TOURS AND TRAVELS PVT. LTD.
KARNATAKA | TELANGANA | ANDHRA PRADESH | TAMILNADU
LIMITED OFFER
Start planning your
Europe
Vacation now
Pack Your Bags!
ಅತಿ ಕಡಿಮೆ ದರದಲ್ಲಿ
ಯೂರೋಪ್
ಪ್ರವಾಸ ಮಾಡಿ!
ಇದೀಗ ರೂ. 2,99,999/- ಮಾತ್ರ
ಯೂರೋಪ್ ಸುತ್ತಾಟ, ನೆನಪುಗಳ ಖಜಾನೆ
ಕಾಶಿ, ಅಯೋಧ್ಯೆ ಮತ್ತು ಪ್ರಯಾಗ್ ರಾಜ್
ಪುಣ್ಯಭೂಮಿ ದರ್ಶನ
3N / 4D
RS. 27,999/-
FLIGHT INCLUDED
COMFORTABLE STAY
DELICIOUS MEALS
SIGHTSEEING & ATTRACTIONS
TRAVEL INSURANCE INCLUDED
ಚಾರ್‌ಧಾಮ್ ಯಾತ್ರೆ 12N / 13D RS. 68,500/-
ಮುಕ್ತಿನಾಥ್ ಯಾತ್ರೆ 12N / 13D RS. 76,500/-
ಅಮರನಾಥ ಯಾತ್ರೆ 13N / 14D RS. 72,500/-
ಕೈಲಾಸ ಮಾನಸ ಸರೋವರ 13N / 14D RS. 2,85,000/- *5% GST *2% TCS
ಗುಜರಾತ್ - ಮಧ್ಯಪ್ರದೇಶ 11N / 12D RS. 69,999/-
ಶಿಮ್ಲಾ-ಮನಾಲಿ 8N / 9D RS. 55,999/-
ಸಿಂಗಾಪುರ್-ಮಲೇಷಿಯಾ 5 N / 6 D RS. 1,12,000/-
R V RAMANA
Founder & Chairman
ಶ್ರೀಲಂಕಾ 5N / 6D RS. 59,500/-
ವಿಯೆಟ್ನಾಂ 4N / 5D RS. 99,999/-
ಭೂತಾನ್ 6N / 7D RS. 60,000/-
WHY TRAVEL WITH US?
EXPERIENCED TOUR MANAGERS
24x7 CUSTOMER SUPPORT
BEST PRICE GUARANTEE
COMFORT & SAFETY
MEMORIES THAT LAST
Reach us
Note: +5% GST for Domestic, +5% GST + 2% TCS for International Tour Packages Applicable
*All Tour Packages Calculated Per Person
PH: 91541 49935 , +91 91211 44001

ತುಮಕೂರು ವಿವಿ 19ನೇ ಘಟಿಕೋತ್ಸವದಲ್ಲಿ ಪ್ರೊ. ದೇಬಬ್ರತ ದಾಸ್

ವಿವೇಕವಿಲ್ಲದ ಭಸ್ಮಾಸುರನ ವರ ಎಐ

ವಿಕ ಸುದ್ದಿಲೋಕ ತುಮಕೂರು

''ಕೃತಕ ಬುದ್ಧಿಮತ್ತೆ ವಿವೇಕವಿಲ್ಲದ ಭಸ್ಮಾಸುರ ನೀಡಿದ ವರ. ಸ್ಪರ್ಧಾತ್ಮಕ ಜಗತ್ತಿನಲ್ಲಿ ವೇಗವಿರಲಿ, ತಂತ್ರಜ್ಞಾನಗಳಿಗೆ ಭಯಬೇಡ,'' ಎಂದು ಅಂತಾರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ನಿರ್ದೇಶಕ ಪ್ರೊ.ದೇಬಬ್ರತ ದಾಸ್ ಯುವಜನತೆಗೆ ಕರೆ ನೀಡಿದರು.

ತುಮಕೂರು ವಿಶ್ವವಿದ್ಯಾಲಯದಲ್ಲಿ ಬುಧವಾರ 19ನೇ ಘಟಿಕೋತ್ಸವ ಭಾಷಣ ಮಾಡಿದ ಅವರು, ''ಭಸ್ಮಾಸುರನಿಗೆ ಅಪಾರ ಬುದ್ಧಿವಂತಿಕೆ ಮತ್ತು ಶಿಸ್ತು ಇತ್ತು. ಆದರೆ ನೈತಿಕತೆ ಮತ್ತು ವಿವೇಕಲ್ಲದ ಕಾರಣ ಆ ಶಕ್ತಿ ಅವನ ನಾಶಕ್ಕೇ ಕಾರಣವಾಯಿತು. ಇಂದಿನ ಕೃತಕ ಬುದ್ಧಿಮತ್ತೆ ಮಾನವಕುಲಕ್ಕೆ ಭಸ್ಮಾಸುರ ವರದಂತೆ ಸಿಕ್ಕಿರುವ ಪ್ರಬಲ ಶಕ್ತಿಯಾಗಿದೆ. ನೈತಿಕ ಹೃದಯವಿಲ್ಲದಿದ್ದರೆ ಈ ಶಕ್ತಿ ಸಮಾಜದ ವ್ಯವಸ್ಥೆ ಮತ್ತು ಖಾಸಗಿತನವನ್ನು ನಾಶಪಡಿಸಬಹುದು. ಕೇವಲ ಬುದ್ಧಿವಂತಿಕೆಯು ಅಲ್ಗಾರಿದಮ್ ಅನ್ನು ಹೇಗೆ ನಿರ್ಮಿಸಬೇಕೆಂದು ಹೇಳಿಕೊಟ್ಟರೆ, ಮೌಲ್ಯಗಳು ಅದನ್ನು ಬಳಸಬೇಕೇ ಅಥವಾ ಬೇಡವೇ ಎಂದು ನಿರ್ಧರಿಸುತ್ತವೆ,'' ಎಂದರು.

''ಭಾರತವು ಇಂದು ಜಗತ್ತಿಗೇ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ನಿರ್ಮಿಸಿಕೊಡುತ್ತಿದೆ. ಐಐಐಟಿ -ಬೆಂಗಳೂರು ಮುನ್ನಡೆಸುತ್ತಿರುವ ಮಾಡ್ಯುಲರ್ ಓಪನ್ ಸೋರ್ಸ್ ಐಡೆಂಟಿಟಿ ಪ್ಲಾಟ್‌ಫಾರ್ಮ್ ಉತ್ಪನ್ನವು ಇಂದು ಜಗತ್ತಿನ 29 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದರಿಂದ ಎಲ್ಲರಿಗೂ ಸಮಾನ ಜಾಗತಿಕ ಅವಕಾಶಗಳು ಸಿಗುತ್ತಿವೆ,'' ಎಂದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ವೆಂಕಟೇಶ್ವರಲು, ಕುಲಸಚಿವೆ ನಾಹಿದಾ ಝಮ್ ಝಮ್, ಪರೀಕ್ಷಾಂಗ ಕುಲಸಚಿವ ಪ್ರೊ. ಮೋಹನ ಎಚ್.ಎಸ್ ಇದ್ದರು.

ತುಮಕೂರು ವಿವಿ ಘಟಿಕೋತ್ಸವದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಟಿ. ಆರ್. ರೇವಣ್ಣ, ಚಾರ್ಟರ್ಡ್ ಅಕೌಂಟೆಂಟ್ ಮತ್ತು ವಕೀಲ ಕೆ. ಆರ್. ಪ್ರದೀಪ್, ಚಿಂತಕ ದ್ವಾರನಕುಂಟೆ ಪಾತಣ್ಣ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ನಗದು ವಾಪಸ್ ನೀಡಿದ ಪದವೀಧರರು

ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳಿಗೆ ಈ ಬಾರಿ ಪದಕ ನೀಡಲಿಲ್ಲ, ಬದಲಾಗಿ ನಗದು ಬಹುಮಾನ ನೀಡಲಾಯಿತು. ಒಟ್ಟು 90 ವಿದ್ಯಾರ್ಥಿಗಳಿಗೆ 117 ಚಿನ್ನದ ಪದಕ ಮೌಲ್ಯದ ನಗದು ಬಹುಮಾನ ಪ್ರದಾನ ಮಾಡಲಾಯಿತು. ಇದಕ್ಕೆ ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿ ಚೆಕ್ ಹಾಗೂ ಪ್ರಮಾಣಪತ್ರವನ್ನೂ ಪರೀಕ್ಷಾಂಗ ವಿಭಾಗಕ್ಕೆ ವಾಪಸ್ ನೀಡಿದ್ದಾರೆ. ಪ್ರಮಾಣಪತ್ರ ಮತ್ತು ಪದಕ ಒಳಗೊಂಡಂತೆಯೇ 'ಪದವಿ ಪ್ರಮಾಣಪತ್ರ' ನೀಡುವಂತೆ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಮೂವರಿಗೆ ಗೌರವ ಡಾಕ್ಟರೇಟ್

ಘಟಿಕೋತ್ಸವದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಟಿ. ಆರ್. ರೇವಣ್ಣ, ಚಾರ್ಟರ್ಡ್ ಅಕೌಂಟೆಂಟ್ ಮತ್ತು ವಕೀಲ ಕೆ.ಆರ್.ಪ್ರದೀಪ್, ಕವಿ,ಚಿಂತಕ ದ್ವಾರನಕುಂಟೆ ಪಾತಣ್ಣ ಅವರಿಗೆ ತುಮಕೂರು ವಿವಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.

ಮಧ್ಯಪ್ರದೇಶದವರು ಪದಕ ಮಾಡಲು ಟೆಂಡರ್ ಪಡೆದಿದ್ದರು. ಮೊದಲು ಕೊಡುತ್ತೇವೆಂದು ಹೇಳಿ, ಕೊಡಲ್ಲ ಅಂದಿದ್ದಾರೆ. ಕೊನೆ ಕ್ಷಣದಲ್ಲಿ ಪದಕ ತಲುಪಿಸದೇ ಇದ್ದಾಗ ಅನಿವಾರ್ಯವಾಗಿ ಚೆಕ್ ನೀಡಿದ್ದೇವೆ. ವಿದ್ಯಾರ್ಥಿಗಳು ಪದಕ ಬೇಕೆಂದಿದ್ದಾರೆ, ಶೀಘ್ರದಲ್ಲೇ ತರಿಸಿ ಕೊಡುತ್ತೇವೆ. ವಿದ್ಯಾರ್ಥಿಗಳ ಕನಸೇ ನಮ್ಮ ಕನಸು.

-ಪ್ರೊ.ಎಂ.ವೆಂಕಟೇಶ್ವರಲು ಕುಲಪತಿ

ಎಬೋಲಾ: ವೆಬ್‌ಸೈಟ್‌ನಲ್ಲಿ ದಾಖಲಿಸಲು ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಶಂಕಿತ, ಸಂಭಾವ್ಯ ಎಬೋಲಾ ಪ್ರಕರಣಗಳು ಪತ್ತೆಯಾದಲ್ಲಿ ಖಾಸಗಿ ವೈದ್ಯರು, ವೈದ್ಯಕೀಯ ಸಂಸ್ಥೆಗಳು ತಕ್ಷಣ ಸಮಗ್ರ ಆರೋಗ್ಯ ಮಾಹಿತಿ ವೇದಿಕೆ (ಐಎಚ್ ಐಪಿ) ಪೋರ್ಟಲ್‌ನಲ್ಲಿ ದಾಖಲಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈ ಕುರಿತು ಸುತ್ತೋಲೆ ಹೊರಡಿಸಿರುವ ಇಲಾಖೆ, ರಾಜ್ಯದ ಎಲ್ಲಾ ಖಾಸಗಿ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳು ಶಂಕಿತ, ಸಂಭಾವ್ಯ ಎಬೋಲಾ ವೈರಸ್ ರೋಗ ಪ್ರಕರಣಗಳ ಬಗ್ಗೆ ತಕ್ಷಣ ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಇಲಾಖೆಯು ಸೂಚಿಸಿದ ರೋಗ ಕಣ್ಗಾವಲು ಮತ್ತು ವರದಿ ಮಾಡುವ ಅವಶ್ಯಕತೆಗಳನ್ನು ಪಾಲಿಸಬೇಕು ಎಂದು ಸೂಚಿಸಿದೆ.

ರೋಗಿಗಳು ಮತ್ತು ಅವರ ಸಂಪರ್ಕಗಳ ದಾಖಲೆಗಳನ್ನು ನಿರ್ವಹಿಸಬೇಕು. ಜಿಲ್ಲಾ ಕಣ್ಗಾವಲು ಘಟಕದಿಂದ ಸಾಂಕ್ರಾಮಿಕ ರೋಗಶಾಸ್ತ್ರೀಯ ತನಿಖೆ ಕೈಗೊಳ್ಳಲು ಸಹಕರಿಸಬೇಕು. ಶಂಕಿತ ಪ್ರಕರಣಗಳನ್ನು ಪ್ರತ್ಯೇಕಿಸುವ ಮತ್ತು ಸೂಕ್ತವಾದ ವೈಯಕ್ತಿಕ ರಕ್ಷಣಾ ಸಾಧನಗಳ ಬಳಕೆ ಸೇರಿ ಸೋಂಕು ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಜತೆಗೆ, ಐಎಚ್‌ಐಪಿ ಪೋರ್ಟಲ್‌ಗೆ ಅಗತ್ಯ ಪ್ರವೇಶಕ್ಕಾಗಿ ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಅಧಿಕಾರಿ ಅಥವಾ ಜಿಲ್ಲಾ ಕಣ್ಗಾವಲು ಅಧಿಕಾರಿಯನ್ನು ಸಂಪರ್ಕಿಸಬೇಕು ಎಂದು ಇಲಾಖೆ ತಿಳಿಸಿದೆ.



ರಾಗಿ, ಜೋಳದ ಬೆಂಬಲ ಬೆಲೆ ಹಣ ಬಾಕಿ

ವಿಕ ಸುದ್ದಿಲೋಕ ಬೆಂಗಳೂರು

ಬೆಂಬಲ ಬೆಲೆ ಯೋಜನೆಯಡಿ ಸರಕಾರ ರಾಗಿ, ಜೋಳ ಖರೀದಿಸಿ ತಿಂಗಳುಗಳೇ ಕಳೆದಿದ್ದರೂ ರೈತರಿಗೆ ಇನ್ನೂ ಹಣ ಜಮೆಯಾಗದೆ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ್ದಾರೆ. ಉಳುಮೆಗೂ ಹಣ ಇಲ್ಲದ ರೈತರಿಗೆ ಸರಕಾರ ಬರೋಬ್ಬರಿ 2 ಸಾವಿರ ಕೋಟಿ ಹಣ ಬಾಕಿ ನೀಡಬೇಕಾಗಿದೆ.

ಹವಾಮಾನ ವೈಪರೀತ್ಯ, ಕೂಲಿ ಕಾರ್ಮಿಕರ ಕೊರತೆ, ದುಬಾರಿ ಬಿತ್ತನೆ ಬೀಜ, ರಸಗೊಬ್ಬರಗಳ ಕೊರತೆ ನಡುವೆ ಸಾಲ ಸೋಲ ಮಾಡಿ ರೈತರು ಬೆಳೆದ ಉತ್ಪನ್ನಗಳನ್ನು ಸರಕಾರ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿತು. ಆದರೆ, ವಾರದೊಳಗೆ ಹಣ ನೀಡಬೇಕಿರುವ ಸರಕಾರ ಈಗ ಎರಡು ತಿಂಗಳಾದರೂ ನೀಡದೆ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ಈಗ ಎಲ್ಲೆಡೆ ಮಳೆ ಬೀಳುತ್ತಿದೆ. ಆದರೆ, ಉಳುಮೆ ಮಾಡಲು ಹಣ ಇಲ್ಲದಂತಾಗಿದೆ. ಸರಕಾರ ರೈತರ ಹಣವನ್ನು ಬಿಡುಗಡೆ ಮಾಡದಿರುವುದು ಸರಿಯಲ್ಲ ಎಂದು ಬಳ್ಳಾರಿ ಜಿಲ್ಲೆಯ ಜೋಳ ಬೆಳೆಗಾರರು ಮತ್ತು ಕೋಲಾರ ಜಿಲ್ಲೆಯ ರಾಗಿ ಬೆಳೆಗಾರರು ಆರೋಪಿಸಿದ್ದಾರೆ.

ಈ ವರ್ಷದ ಮುಂಗಾರಿನಲ್ಲಿ 6 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸುವ ಗುರಿ ಹೊಂದಲಾಗಿತ್ತು. ಆದರೆ, 5.69 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಿ ಸಂಗ್ರಹಿಸಲಾಗಿದೆ. ನೋಂದಣಿ ಮಾಡಿಸಿದ ಆರಂಭದಲ್ಲಿ ರೈತರು ಮಾರಾಟಕ್ಕೆ ಉತ್ಪನ್ನಗಳನ್ನು ತರುವುದಿಲ್ಲ, ಪ್ರತಿ ವರ್ಷ ಗುರಿಯಲ್ಲಿ ಶೇ.10ರಷ್ಟು ಕಡಿಮೆಯಾಗುತ್ತದೆ. ಶೇ.90ರಷ್ಟು ಗುರಿ ತಲುಪಲು ಸಾಧ್ಯವಾಗುತ್ತದೆ. ಅದೇ ರೀತಿ ಈ ಬಾರಿಯೂ ನಡೆದಿದೆ. ಇನ್ನು 1.30 ಲಕ್ಷ ಮೆಟ್ರಿಕ್ ಟನ್‌ಗೂ ಹೆಚ್ಚು ಜೋಳ ಖರೀದಿಯಾಗಿದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದರು.

ಸರಕಾರ ಮುಂಗಾರು ಹಂಗಾಮಿನ ಜೋಳ ಮತ್ತು ರಾಗಿಯನ್ನು ತುಂಬಾ ವಿಳಂಬವಾಗಿ ಖರೀದಿ ಮಾಡಿತು. ಜತೆಗೆ, ಈಗ ಹಣ ನೀಡದೆ ರೈತರನ್ನು ಸಂಕಷ್ಟಕ್ಕೆ ದೂಡಿದೆ. ತಕ್ಷಣವೇ ಜೋಳ ಮತ್ತು ರಾಗಿಯ ಹಣವನ್ನು ರೈತರ ಖಾತೆಗೆ ಜಮೆ ಮಾಡಬೇಕು. ಸರಕಾರ ಹಣ ನೀಡದಿರುವುದರಿಂದ ಕಳೆದ ವರ್ಷದ ಸಾಲ ತೀರಿಸಲಾಗುತ್ತಿಲ್ಲ.

-ತಾಳೂರು ರಾಘವೇಂದ್ರ ರೆಡ್ಡಿ ಪಿ. ಜೋಳ ಬೆಳೆಗಾರ, ಬಳ್ಳಾರಿ ಜಿಲ್ಲೆ

ಆವರ್ತನಿಧಿ ಬಿಡುಗಡೆಯಾಗಬೇಕಿತ್ತು. ಆದರೆ, ಸಚಿವರು ಬದಲಾದ ಹಿನ್ನೆಲೆಯಲ್ಲಿ ತಡವಾಗಿದೆ. ಭತ್ತದ ಹಣ ಜಮೆಯಾಗಿದೆ. ಆದರೆ, ರಾಗಿ ಮತ್ತು ಜೋಳದ ಸುಮಾರು 2 ಸಾವಿರ ಕೋಟಿ ರೂ. ಬಾಕಿಯಿದೆ. ನಿತ್ಯ ರೈತರು ದೂರವಾಣಿ ಕರೆ ಮಾಡುತ್ತಿದ್ದಾರೆ. ಆದಷ್ಟು ಬೇಗ ಬಿಡುಗಡೆಯಾಗಲಿದೆ.

-ಎಂ.ಕೆ. ಜಗದೀಶ್ ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ

AIನಿಂದ ಪ್ಲಂಬರ್ ಕೆಲಸಗಳಿಗೂ ಕುತ್ತು

ಪರಿಶ್ರಮ ಆಧಾರಿತ ಉದ್ಯೋಗಗಳ ಸ್ವರೂಪವೂ ಬದಲು | ತಂತ್ರಜ್ಞಾನಕ್ಕೆ ಹೊಂದಿಕೊಂಡರಷ್ಟೇ ಉಳಿಗಾಲ

ಹೊಸದಿಲ್ಲಿ: ಕೃತಕ ಬುದ್ಧಿಮತ್ತೆಯು ಪ್ಲಂಬರ್, ಎಲೆಕ್ಟ್ರಿಷಿಯನ್ ಮೊದಲಾದ ಪರಿಶ್ರಮ ಆಧಾರಿತ ಉದ್ಯೋಗಗಳಿಗೂ ಕುತ್ತು ತಂದಿದೆ.

ಓಪನ್ ಎಐ ಚಾಟ್‌ಜಿಪಿಟಿಯನ್ನು ಬಿಡುಗಡೆ ಮಾಡಿದ ನಂತರ 2022ರಲ್ಲಿ ಕೃತಕ ಬುದ್ಧಿಮತ್ತೆಯ (ಎಐ) ಯುಗ ಆರಂಭವಾಯಿತು. ಆಗಲೇ ವಿವಿಧ ಉದ್ಯೋಗಗಳ ಮೇಲೆ ಎಐ ಬೀರಬಹುದಾದ ಸಂಭಾವ್ಯ ಪರಿಣಾಮಗಳ ಬಗ್ಗೆ ತಜ್ಞರು ಅಧ್ಯಯನ ನಡೆಸುತ್ತಿದ್ದರು. ಈಗ ಐಟಿ ಕಂಪನಿ 'ಕಾಗ್ನಿಜೆಂಟ್' ಬಿಡುಗಡೆ ಮಾಡಿರುವ ಹೊಸ ವರದಿಯಲ್ಲಿ, ಜನಜೀವನದಲ್ಲಿ ಅತ್ಯಗತ್ಯ ಸೇವೆ ಒದಗಿಸುವ ವೃತ್ತಿಗಳಿಗೂ ಕಂಟಕ ಎದುರಾಗಲಿದೆ ಎಂದು ತಿಳಿಸಿದೆ.

ಪ್ಲಂಬರ್‌ಗಳು ಅತ್ಯಗತ್ಯ ರಿಪೇರಿ ಕೆಲಸಗಳನ್ನು ತಾವೇ ಸ್ವತಃ ಮಾಡಬೇಕಾಗುತ್ತದೆ, ನಿಜ. ಆದರೆ ಹೆಚ್ಚಿನ ಕೆಲಸಗಳನ್ನು ಎಐ ಮೂಲಕ ಮಾಡಿಸಬಹುದು. ಮಲ್ಟಿಮೋಡಲ್ ರೀಸನಿಂಗ್ ಏಜೆಂಟ್‌ಗಳು ಗೋಡೆಯ ಮೇಲಿನ ತೇವಾಂಶವನ್ನು ಗುರುತಿಸಿ, ಪೈಪ್ ಎಲ್ಲಿ ಸೋರುತ್ತಿದೆ ಎಂಬುದನ್ನು ಪತ್ತೆ ಹಚ್ಚಿ, ಅದಕ್ಕೆ ಬೇಕಾಗುವ ಬಿಡಿಭಾಗಗಳ ಪಟ್ಟಿ ಮತ್ತು ಬಿಲ್ ಅನ್ನು ತಾವಾಗಿಯೇ ಸಿದ್ಧಪಡಿಸಬಲ್ಲವು. ಹೀಗಾಗಿ ಇವುಗಳ ವ್ಯಾಪ್ತಿ ನಮ್ಮ ನಿರೀಕ್ಷೆ ಮೀರಿ ವಿಸ್ತರಿಸುತ್ತಿದೆ. ಪ್ಲಂಬರ್‌ಗಳು ಪೈಪ್ ರಿಪೇರಿ ಮಾಡುತ್ತಾರೆಯಾದರೂ, ಅದಕ್ಕೂ ಮುನ್ನ ಮಾಡುವ ತಪಾಸಣೆ, ಜಖಂ ಸ್ವರೂಪ ಮತ್ತು ಅದಕ್ಕೆ ಪೂರಕವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಎಐ ಹೆಚ್ಚಿನ ನೆರವು ನೀಡುತ್ತದೆ. ಅಲ್ಲದೇ, ಅದಕ್ಕೆ ತಗಲುವ ವೆಚ್ಚವನ್ನೂ ಅಂದಾಜಿಸುವುದರಿಂದ ಪ್ಲಂಬರ್‌ಗಳ ಆದಾಯದಲ್ಲಿ ಗಣನೀಯ ಕುಸಿತ ಉಂಟಾಗುತ್ತದೆ.

ಹೊಸ ಉದ್ಯೋಗಗಳೂ ಸೃಷ್ಟಿ

ಈಗ ಬರುತ್ತಿರುವ ವರದಿಗಳು ಆತಂಕ ಉಂಟುಮಾಡುತ್ತಿದ್ದರೂ ಕಾಗ್ನಿಜೆಂಟ್‌ನ ಎಐ ಮುಖ್ಯ ಸುಶಾಂತ್ ವಾರಿಕೂ ಅವರು ಎಐ ಹೊಸ ಉದ್ಯೋಗಗಳನ್ನೂ ಸೃಷ್ಟಿಸುತ್ತಿದೆ ಎಂದು ತಿಳಿಸಿದ್ದಾರೆ. ''ಮಾರುಕಟ್ಟೆಯಲ್ಲಿ ಹೊಸ ಉದ್ಯೋಗಗಳು, ವೃತ್ತಿಯಲ್ಲಿ ಹೊಸ ಅವಕಾಶಗಳನ್ನೂ ಎಐ ಸೃಷ್ಟಿಸುತ್ತಿದೆ. ಇದನ್ನು ಸಾಧಿಸಲು ಕಂಪನಿಗಳು ತಮ್ಮ ಕೆಲಸದ ರೀತಿ-ನೀತಿಗಳನ್ನು ಬದಲಾಯಿಸಿಕೊಳ್ಳಬೇಕು. ಉದ್ಯೋಗಿಗಳು ಕೂಡ ಇದೇ ಹಾದಿಯಲ್ಲಿ ಸಾಗಬೇಕು,'' ಎಂದಿದ್ದಾರೆ.

₹427 ಲಕ್ಷಕೋಟಿ ಅಮೆರಿಕದಲ್ಲಿ ಇಷ್ಟು ಮೌಲ್ಯದ ಶ್ರಮವು ಮಾನವರಿಂದ ಎಐಗೆ ವರ್ಗಾವಣೆಯಾಗಿದೆ

ಇದೇ ವರ್ಷ ಮಾರ್ಚ್‌ನಲ್ಲಿ ಆಂಥ್ರೋಪಿಕ್ ಒಂದು ಅಧ್ಯಯನ ವರದಿಯನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ಎಐ ಪರಿಣಾಮ ಬೀರದ 22 ಉದ್ಯೋಗಗಳನ್ನು ಮಾತ್ರ ಪಟ್ಟಿ ಮಾಡಿದೆ. ಅಲ್ಲದೆ, ಎಐ 2032ರಲ್ಲಿ ಎಲ್ಲಾ ವಲಯಗಳ ಮೇಲೆ ಪರಿಣಾಮ ಬೀರಬಹುದು ಎಂಬ ಊಹೆ ಸುಳ್ಳಾಗಿದ್ದು, ಈಗಾಗಲೇ ಬಹಳಷ್ಟು ಕ್ಷೇತ್ರಗಳ ಮೇಲೆ ಪ್ರಭಾವ ಬೀರಲಾರಂಭಿಸಿದೆ ಎಂದು ತಿಳಿಸಿದೆ. ಅಮೆರಿಕದಲ್ಲಿ ಕೇವಲ ನಾಲ್ಕು ವರ್ಷದಲ್ಲಿ ಸುಮಾರು 427 ಲಕ್ಷ ಕೋಟಿ ರೂ. ಮೌಲ್ಯದ ಶ್ರಮವು ಮಾನವರಿಂದ ಎಐಗೆ ವರ್ಗಾವಣೆಯಾಗಿದೆ ಎಂದೂ ವರದಿ ತಿಳಿಸಿದೆ.

ಈಗ ಶೇ.93ರಷ್ಟು ಉದ್ಯೋಗಗಳನ್ನು ಎಐ-ಸಾಮರ್ಥ್ಯ ಹೊಂದಿದ ಉದ್ಯೋಗಗಳು ಎಂದು ವರ್ಗೀಕರಿಸಲಾಗಿದೆ. ಇದರಲ್ಲಿ ಶೇ.30ರಷ್ಟು ಉದ್ಯೋಗಗಳು ಅಪಾಯದ ಅಂಚಿಗೆ ಬಂದು ನಿಂತಿವೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಂತೂ ಎಐ ನಿರೀಕ್ಷೆಗೂ ಮಾನವ ಶ್ರಮವನ್ನು ಉಳಿಸುತ್ತಿದೆ. ಮೆಟಾ, ಒರಾಕಲ್, ಅಮೆಜಾನ್ ಮತ್ತು ಇನ್ನೂ ಹಲವು ಕಂಪನಿಗಳು 2026ರಲ್ಲಿ ಇದುವರೆಗೆ ಸುಮಾರು 1,15,907 ಕಾರ್ಮಿಕರನ್ನು ವಜಾಗೊಳಿಸಿವೆ.

ಸೇವೆಗಳು ಅಥವಾ ಕೋಡಿಂಗ್‌ನಂತಹ ಸ್ವಯಂಚಾಲಿತಗೊಳಿಸಬಹುದಾದ ಉದ್ಯೋಗಗಳ ಮೇಲೆ ಮಾತ್ರ ಎಐ ಹೆಚ್ಚಾಗಿ ಪರಿಣಾಮ ಬೀರುತ್ತದೆ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ, ಕಾಗ್ನಿಜೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಆಲಿ ಓ ಡೊನೊಘು ಅವರು, ''ಪ್ರತಿಯೊಬ್ಬರೂ ಅಪಾಯದಲ್ಲಿದ್ದಾರೆ. ಯಾರೂ ಸುರಕ್ಷಿತವಾಗಿಲ್ಲ,'' ಎಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತ ಸೇರಿದಂತೆ 60 ದೇಶಗಳ ಮೇಲೆ ಟ್ರಂಪ್ ಹೊಸ ಸುಂಕಾಸ್ತ್ರ

ಅಮೆರಿಕ ಕಾನೂನು ಮತ್ತು ನೀತಿ ಸಂಹಿತೆ ಉಲ್ಲಂಘನೆ ಮಾಡುವ ದೇಶಗಳಿಗೆ ದಂಡ ಪಾಠ

ಹೊಸದಿಲ್ಲಿ: ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಭಾರತ-ಅಮೆರಿಕ ಸಹಿ ಹಾಕುವ ಸಮಯ ಹತ್ತಿರದಲ್ಲಿದೆ ಎಂದು ಉಭಯ ದೇಶಗಳೂ ಹೇಳುತ್ತಿವೆ. ಇಂತಹ ಸಮಯದಲ್ಲಿಯೇ ಭಾರತ ಸೇರಿದಂತೆ 60 ದೇಶಗಳ ಮೇಲೆ ಗರಿಷ್ಠ ಶೇ.12.50ರ ತನಕ ಹೆಚ್ಚುವರಿ ಸುಂಕವನ್ನು ವಿಧಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಾಗಿದ್ದಾರೆ. ಈ ಪ್ರಸ್ತಾಪವನ್ನು ಅಮೆರಿಕದ ವ್ಯಾಪಾರ ಪ್ರತಿನಿಧಿಗಳು (ಯುಎಸ್‌ಟಿಆರ್) ಮುಂದಿಟ್ಟಿದ್ದಾರೆ. ಕಾರ್ಮಿಕರಿಂದ ಬಲವಂತವಾಗಿ ದುಡಿಸಿಕೊಂಡು ತಯಾರಾದ ಉತ್ಪನ್ನಗಳನ್ನು ಆಮದು ಮಾಡುವ ದೇಶಗಳ ಮೇಲೆ ಈ ಸುಂಕ ವಿಧಿಸಲಾಗುತ್ತದೆ.

ಕೆನಡಾ, ಮೆಕ್ಸಿಕೊ, ತೈವಾನ್ ಮತ್ತು ಬ್ರಿಟನ್ ಮೇಲೆ ಶೇ.10 ಹಾಗೂ ಚೀನಾ, ಜಪಾನ್, ಭಾರತ, ದಕ್ಷಿಣ ಕೊರಿಯಾ, ಬ್ರೆಜಿಲ್ ಮತ್ತು ಸ್ವಿಟ್ಜರ್ಲೆಂಡ್ ಸೇರಿದಂತೆ ಇತರ ರಾಷ್ಟ್ರಗಳ ಮೇಲೆ ಶೇ. 12.5 ರಷ್ಟು ಹೆಚ್ಚುವರಿ ಸುಂಕವನ್ನು ವಿಧಿಸಲಾಗುವುದು ಎಂದು ಟ್ರಂಪ್ ಆಡಳಿತ ಸುಳಿವು ನೀಡಿದೆ. ಹೊಸ ಸುಂಕಗಳು ತಕ್ಷಣ ಜಾರಿಗೆ ಬರುವುದಿಲ್ಲ, ಅವು ಸಾರ್ವಜನಿಕ ಅಭಿಪ್ರಾಯ ಮತ್ತು ಪರಿಶೀಲನೆಗೆ ಒಳಪಟ್ಟಿರುತ್ತವೆ.

ಇದು ಜಾರಿಗೆ ಬಂದರೆ ಡೊನಾಲ್ಡ್ ಟ್ರಂಪ್ ಸುಪ್ರೀಂ ಕೋರ್ಟ್ ವಿಧಿಸಿರುವ ತಮ್ಮ ಸುಂಕಗಳ ಮೇಲಿನ ಮಿತಿಗಳನ್ನು ತಪ್ಪಿಸಲು ಅನುವು ಮಾಡಿಕೊಡುತ್ತದೆ. 1974 ರ ವ್ಯಾಪಾರ ಕಾಯಿದೆಯ ಸೆಕ್ಷನ್ 301 (ಬಿ) (1) ರ ಅಡಿಯಲ್ಲಿ ವ್ಯಾಪಾರ ನೀತಿ ಮತ್ತು ನಿಯಮಗಳನ್ನು ಪಾಲಿಸಲಾಗುತ್ತಿದೆಯೇ ಇಲ್ಲವೇ ಎಂಬುದರ ಕುರಿತು ವ್ಯಾಪಾರ ಪಾಲುದಾರ ದೇಶಗಳ ವಿರುದ್ಧ ಅಮೆರಿಕ ತನಿಖೆ ಆರಂಭಿಸಿದ ಕೆಲವೇ ತಿಂಗಳಲ್ಲಿ ಈ ಹೊಸ ಪ್ರಸ್ತಾಪ ಚರ್ಚೆಗೆ ಬಂದಿದೆ.

ಕಾರ್ಮಿಕರಿಂದ ಒತ್ತಾಯಪೂರ್ವಕವಾಗಿ ದುಡಿಸಿಕೊಂಡು ತಯಾರಾದ ಉತ್ಪನ್ನಗಳನ್ನು ತರಿಸಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಅಮೆರಿಕ ಜತೆ ವ್ಯಾಪಾರ ನಂಟಿರುವ ದೇಶಗಳು ಕ್ರಮ ಕೈಗೊಂಡಿವೆಯೇ ಎಂಬುದರ ಕುರಿತು ತನಿಖೆ ಬೆಳಕು ಚೆಲ್ಲುತ್ತದೆ. ಈ ಅಂಶಗಳನ್ನು ಕೋರ್ಟ್ ಗಮನಕ್ಕೆ ತಂದು ಸುಂಕದ ಪ್ರಮಾಣವನ್ನು ಹೆಚ್ಚಿಸುವ ಮಾರ್ಗವನ್ನು ಟ್ರಂಪ್ ಕಂಡುಕೊಂಡಿದ್ದಾರೆ ಎಂದು ರಾಜನೀತಿಜ್ಞರು ವಿಶ್ಲೇಷಿಸಿದ್ದಾರೆ.

ಮಾತುಕತೆ ಪ್ರಗತಿ: ''ವ್ಯಾಪಾರ ಒಪ್ಪಂದದ ಚೌಕಟ್ಟನ್ನು ಅಂತಿಮಗೊಳಿಸಲು ಅಮೆರಿಕದ ಪ್ರತಿನಿಧಿಗಳೊಂದಿಗೆ ನಮ್ಮ ಮಾತುಕತೆ ಮಂಗಳವಾರದಿಂದ ಆರಂಭವಾಗಿದೆ. ಜವಳಿ ಮತ್ತು ಉಡುಪು ಉತ್ಪನ್ನಗಳಿಗಾಗಿ ವಿಶೇಷ ಕಾರ್ಯವಿಧಾನವನ್ನು ಪ್ರಸ್ತಾಪಿಸಲಾಗಿದೆ. ಭಾರತ ಸೇರಿದಂತೆ ಆಯ್ದ ಆರ್ಥಿಕತೆಗಳಿಂದ ನಿರ್ದಿಷ್ಟ ಪ್ರಮಾಣದ ಆಮದುಗಳನ್ನು ಕಡಿಮೆ ಸುಂಕದ ದರಗಳಲ್ಲಿ ಅಮೆರಿಕಕ್ಕೆ ಪ್ರವೇಶಿಸಲು ಅನುಮತಿ ನೀಡಬಹುದು. ಪ್ರಸ್ತಾಪಿತ ಸುಂಕಗಳು ಇನ್ನು ಅಂತಿಮಗೊಂಡಿಲ್ಲ,'' ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

ಮೀಸಲು ಚಿನ್ನ ಮಾರಾಟ ವದಂತಿ

ಮುಂಬಯಿ: ವಿದೇಶಿ ವಿನಿಮಯವನ್ನು ನಿಯಂತ್ರಿಸಲು ತನ್ನಲ್ಲಿ ದಾಸ್ತಾನು ಇದ್ದ ಚಿನ್ನವನ್ನು ಮಾರಾಟ ಮಾಡುತ್ತಿದೆ ಎಂದು ವರದಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿರಾಕರಿಸಿದೆ. ''ನಮ್ಮ ಬಳಿ 880.52 ಟನ್ ಚಿನ್ನದ ದಾಸ್ತಾನು ಇದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ, ಮೀಸಲು ಚಿನ್ನವನ್ನು ನಾವು ಮಾರಾಟ ಮಾಡಿದ್ದೇವೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ. ಇದು ಸತ್ಯಕ್ಕೆ ದೂರವಾಗಿದೆ,'' ಎಂದಿದೆ.

''ಆರ್‌ಬಿಐ ತನ್ನ ಮಾಸಿಕ ಬುಲೆಟಿನ್‌ನಲ್ಲಿ ಭೌತಿಕ ಚಿನ್ನದ ದಾಸ್ತಾನಿನ ವಿವರಗಳನ್ನು ಬಹಿರಂಗಪಡಿಸುತ್ತದೆ. ಇದರ ಮಾಹಿತಿ ವೆಬ್ ಸೈಟ್‌ನಲ್ಲಿ ಲಭ್ಯವಿದೆ,'' ಎಂದು ಸ್ಪಷ್ಟನೆ ನೀಡಿದೆ.

ಆರ್‌ಬಿಐ ಸ್ಪಷ್ಟನೆ

ಆರ್‌ಬಿಐ ದತ್ತಾಂಶಗಳ ಪ್ರಕಾರ ಒಟ್ಟಾರೆ ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿ ಚಿನ್ನದ ಪಾಲು ಇತ್ತೀಚಿನ ತಿಂಗಳುಗಳಲ್ಲಿ ಕುಸಿಯುವ ಬದಲು ಹೆಚ್ಚಳವಾಗಿದೆ. ಭಾರತದ ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿ ಚಿನ್ನದ ಪಾಲು 2025 ರ ಸೆಪ್ಟೆಂಬರ್ ಅಂತ್ಯದಲ್ಲಿ ಶೇ. 13.92ರಷ್ಟಿತ್ತು. ಇದು 2026 ರ ಮಾರ್ಚ್ 31 ರ ವೇಳೆಗೆ ಶೇ. 16.70 ಕ್ಕೆ ಏರಿಕೆಯಾಗಿದೆ. ಇದು 2026 ರ ಮೇ 22ರ ಹೊತ್ತಿಗೆ ಶೇ. 16.85ಕ್ಕೆ ಜಿಗಿದಿದೆ.

ಚಿನ್ನ, ಬೆಳ್ಳಿ ಧಾರಣೆ ಇಳಿಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟು, ಜಾಗತಿಕ ಮಾರುಕಟ್ಟೆಯಲ್ಲಿನ ಮಂದ ಸಂಚಲನೆ ಹಾಗೂ ತೈಲ ಬೆಲೆ ಏರಿಕೆಯಿಂದ ಚಿನ್ನ ಮತ್ತು ಬೆಳ್ಳಿ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ. ಹೊಸದಿಲ್ಲಿಯಲ್ಲಿ ಅಪರಂಜಿ ಚಿನ್ನದ ಬೆಲೆ 1850 ರೂ. ಇಳಿದು 10 ಗ್ರಾಂಗೆ 1,59,600 ರೂ. ಆಗಿದೆ. ಬೆಳ್ಳಿ ಧಾರಣೆ 1,500 ರೂ. ಕುಸಿದು ಕೆ.ಜಿಗೆ 2,69,500 ರೂ. ಆಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯಲ್ಲಿ ಶೇ. 0.54ರಷ್ಟು ಇಳಿದು ಔನ್ಸ್‌ಗೆ 4,463.84 ಡಾಲರ್ ಆಗಿದೆ. ಬೆಳ್ಳಿ ಶೇ.2ರಷ್ಟು ಕುಗ್ಗಿ ಔನ್ಸ್‌ಗೆ 74.43 ಡಾಲರ್ ಆಗಿದೆ.

ಬೆಂಗಳೂರಿನಲ್ಲಿ ಸ್ಥಿರತೆ

ಬೆಂಗಳೂರಿನಲ್ಲಿ ಅಪರಂಜಿ ಚಿನ್ನದ ಬೆಲೆಯಲ್ಲಿ ಸ್ಥಿರತೆ ಇದೆ. 10 ಗ್ರಾಂಗೆ 1,56,220 ರೂ. ಇದೆ. ಮಂಗಳವಾರ ಕೂಡ ಇದೇ ಧಾರಣೆ ಇತ್ತು. ಇಷ್ಟೇ ತೂಕದ ಆಭರಣ ಚಿನ್ನದ ಬೆಲೆ 1,43,200 ರೂ.ನಲ್ಲೇ ಸ್ಥಾಯಿ ಯಾಗಿದೆ. ಬೆಳ್ಳಿ ಬೆಲೆ ಕೆ.ಜಿಗೆ 2,80,000 ರೂ. ಇದ್ದು ಯಾವುದೇ ವ್ಯತ್ಯಾಸವಾಗಿಲ್ಲ.

ಮತ್ತೆ ಕುಸಿದ ಷೇರುಪೇಟೆ

ಮುಂಬಯಿ: ಷೇರುಪೇಟೆ ಬುಧವಾರ ಮತ್ತೆ ಕುಸಿಯಿತು. ಐಟಿ ಷೇರುಗಳ ಮಾರಾಟ ಭರಾಟೆ, ಕಚ್ಚಾ ತೈಲದ ಬೆಲೆ ಏರಿಕೆ ಮತ್ತು ವಿದೇಶಿ ನಿಧಿ ಹೊರ ಹರಿವು ಇಳಿಕೆಗೆ ಕಾರಣವಾಯಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 303.67 ಅಂಕ ಇಳಿದು 74,346.17ರಲ್ಲಿ ವಹಿವಾಟು ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 77.95 ಅಂಕ ಪತನವಾಗಿ 23,405.60 ರಲ್ಲಿ ಸ್ಥಿರಗೊಂಡಿತು. ಏಷ್ಯಾದ ಮಾರುಕಟ್ಟೆಗಳ ಪೈಕಿ ಜಪಾನ್‌ನ ನಿಕೈ 225 ಇಂಡೆಕ್ಸ್, ಶಾಂಘೈನ ಎಸ್‌ಎಸ್‌ಇ ಕಾಂಪೋಸಿಟ್ ಇಂಡೆಕ್ಸ್ ಸಕಾರಾತ್ಮಕವಾಗಿತ್ತು. ಹಾಂಕಾಂಗ್‌ನ ಹ್ಯಾಂಗ್‌ಸೆಂಗ್ ಇಂಡೆಕ್ಸ್ ಇಳಿಮುಖವಾಗಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ. 3ರಷ್ಟು ಏರಿ, ಬ್ಯಾರೆಲ್‌ಗೆ 98.92 ಡಾಲರ್ ಆಗಿದೆ. ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 31 ಪೈಸೆ ಇಳಿದು 95.67 ರೂ. ಆಗಿದೆ.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ACADEMIC

TEACHER

REQUIRED TEACHERS
For NGO-supported School Programme in Bengaluru.
Qualified teachers required for English and Mathematics (Classes I–VII).
Must know Kannada & English.
Retired teachers welcome.
Competitive remuneration.
Send CV to:
seniorcitizensbangalore@gmail.com
www.seniorsforchange.org

ADMINISTRATION

SENIOR / TOP MANAGERS

EXCELLENT Career offer Retd Govt/Bank/ Teachers, Housewives, Businessmen. Fixed Salary Incntvs,PF/ ESI benefits. 8197273568 /9480656160

MARKETING, ADVERTISING & SALES

Tele Caller

"**REQ**, Experienced / Fresher Tele callers, Team Leaders, For Bank Loan collection. Salary 25,000 + Incentive 9620206754 / 7019700755.

MEDICAL

MEDICAL

ತಕ್ಷಣ ಸೇರಿಕೊಳ್ಳಿ ಬೆಂಗಳೂರಿನಾದ್ಯಂತ ಪ್ರತಿಷ್ಠಿತ ಶಾಲಾ ವೈದ್ಯಕೀಯ ಕೊಠಡಿಗಳಿಗೆ ಮಹಿಳಾ ಜಿಎನ್‌ಎಂ/ ಬಿಎಸ್ಸಿ ನರ್ಸ್‌ಗಳು ಬೇಕಾಗಿದ್ದಾರೆ. ಸ್ಥಳಗಳು ಕೋಗಿಲು, ಹೊಸರಸ್ತೆ, ಗುಂಜೂರು, ಕೆಂಗೇರಿ, ನಾಗರಭಾವಿ, ಕನಕಪುರ ಮುಖ್ಯರಸ್ತೆ, ಬನ್ನೇರುಘಟ್ಟ ಮುಖ್ಯ ರಸ್ತೆ, 8ನೇ ಮೈಲಿ, ಜಾಲಹಳ್ಳಿ ಮತ್ತು ಇನ್ನಷ್ಟು. ಉತ್ತಮ ಸಂಬಳ ಮತ್ತು ಡೇ ಶಿಫ್ಟ್ ಕೆಲಸ, ಅರ್ಜಿ ಸಲ್ಲಿಸಲು, ನಿಮ್ಮ ಸಿವಿಯನ್ನು 9591990945 ಗೆ ವಾಟ್ಸಾಪ್ ಮಾಡಿ ಅಥವಾ hr@addresshealth.comಗೆ ಇಮೇಲ್ ಮಾಡಿ.

OTHER VACANCIES

GENERAL

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

ಮನೆಯಿಂದಲೇ ಕೆಲಸ ಡೇಟಾಎಂಟ್ರಿ, ಎಸ್‌ಎಮ್‌ಎಸ್ ಸೆಂಡಿಂಗ್, ಟೆಲಿ ಕಾಲರ್ಸ್, ವರ್ಕ್‌ಗಳಿಗೆ ಮಹಿಳೆಯರಿಗೆ ಪುರುಷರಿಗೆ, ವಿದ್ಯಾರ್ಥಿಗಳಿಗೆ 20,000/25,000, ಸಂ: 7090177446

ನೇರ ನೇಮಕಾತಿ ಅಧಿಸೂಚನೆ: ಭಾರತ ಸರ್ಕಾರದ ಕಾರ್ಪೊರೇಟ್ ಅಫೇರ್ಸ್ ಸಚಿವಾಲಯದ ಅಡಿಯಲ್ಲಿ ನೋಂದಾಯಿತ ದಕ್ಷಿಣಕನ್ನಡ ಬೆಳೆಗಾರರ ಸಾವಯವ ಸಂಯುಕ್ತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಸಂಸ್ಥೆಯಲ್ಲಿ ಬೆಂಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಮಂಗಳೂರು ಮೂಡಬಿದ್ರೆ, ಕುಂದಾಪುರ, ಸುರತ್ಕಲ್, ಕಾರ್ಕಳ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಆರಂಭವಾಗಲಿರುವ ಶಾಖೆಗಳಲ್ಲಿ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗಳು: ಮ್ಯಾನೇಜರ್, ಸಹಾಯಕ ಮ್ಯಾನೇಜರ್, ಕ್ಯಾಶ್ ಅಧಿಕಾರಿ, ಸಾಲ ಅಧಿಕಾರಿ, ಗ್ರಾಹಕ ಸೇವಾ ಅಧಿಕಾರಿ, ಫೀಲ್ಡ್ ಕಲೆಕ್ಷನ್ ಅಧಿಕಾರಿ. ಒಟ್ಟು ಹುದ್ದೆಗಳು: 65 ವೇತನ: ₹18,500 ರಿಂದ ₹45000 (ಅರ್ಹತೆ/ಅನುಭವ ಆಧಾರಿತ ವೇತನ). ಸೌಲಭ್ಯಗಳು: ESI, PF. ಅರ್ಹತಾ ಪ್ರದೇಶ: ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹುದ್ದೆಗಳಿಗೆ ಆಯ್ಕೆಯ ಕೊನೆಯ ದಿನಾಂಕ: 20-06-2026 ಸಂಪರ್ಕಿಸಿ : ಎಸ್. ಸತೀಶ್ ನಾಯಕ್. +919980496533/ 9448627226

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ (ಬೆಂಗಳೂರು)ನಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳು ಬೇಕಾಗಿದ್ದಾರೆ. 1) ಅಡುಗೆಯವರು, 2) ಟೂರಿಸ್ಟ್ ಗೈಡ್ (ಎನೀ ಡಿಗ್ರಿ) - ಯಶವಂತಪುರ, ಬೆಂಗಳೂರು, 3) ಐಟಿಐ / ಡಿಪ್ಲೊಮಾ ಇನ್ ಆಟೋಮೊಬೈಲ್ಸ್/ ಮೆಕ್ಯಾನಿಕಲ್ / ಎಲೆಕ್ಟ್ರಿಕಲ್ ಕ್ಯಾಂಡಿಡೇಟ್ಸ್ (ಬಿ.ಬಿ.ಬಿ.ಪಿ ಸಫಾರಿ, ಬನ್ನೇರುಘಟ್ಟ, ಬೆಂಗಳೂರು. ಅನುಭವ ಹೊಂದಿರುವ ಆಸಕ್ತರು ಸಂಪರ್ಕಿಸಿ: 95131 58903 / 90716 99888.

RETIRED PERSONS

ಉದ್ಯೋಗಾವಕಾಶ: ಆಫೀಸ್ ಕೆಲಸಕ್ಕೆ ನಿವೃತ್ತ ಪುರುಷ ಹಾಗೂ ಮಹಿಳೆಯರು 30 ರಿಂದ 65 ವರ್ಷ, ಡಿಗ್ರಿ ಓದಿರುವ ಬೆಂಗಳೂರಿಗರಿಗೆ ಮಾತ್ರ, ಮಾಸಿಕ ರೂ 40,000/- ಗಳಿಸಿ Ph: 92437 43518

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

TECHNICAL

ENGINEERS

REQUIRED Service Engineer for Bangalore 3 to 5 yrs experienced in Analytical Balance & Scientific Instruments. E: support@wensar.com

ಪ್ರವಾಸ TRAVEL

TOURS & TRAVELS

07-06-2026 1 ದಿನ ಕೊಟ್ಟಿಯೂರ್ 11-6-26 3 ದಿನ ಕೊಟ್ಟಿಯೂರು, ವೈನಾಡು, 17-6-26 5 ದಿನ ಪಳನಿ, ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವಲ್ಸ್9972500645

ಶ್ರೇಯಸ್ ಟೂರ್ಸ್ 09.06.2026, 22.06.2026 10 ದಿನಗಳು ಅಯೋಧ್ಯೆ, ಅಖಂಡ ನೇಪಾಳ ರಾಷ್ಟ್ರ ಪ್ರವಾಸ ಕಠ್ಮಂಡು ಪೋಕ್ರಾ, ಮುಕ್ತಿನಾಥ, MANAKAMANA DEVI, ಚಿತಾವಾನ್, ಜನಕಪುರಿ, ಸೀತಾಮರಿ. 22.06.2026 10 ದಿನಗಳು ಅಖಂಡ ಆಂಧ್ರ-ತೆಲಂಗಾಣ ರಾಜ್ಯ ಪ್ರವಾಸ. 22.06.2026 12 ದಿನಗಳು ಅಖಂಡ ಗುಜರಾತ್ ರಾಜ್ಯ, ಮಧ್ಯಪ್ರದೇಶ ಉಜ್ಜಯಿನಿ, ಓಂಕಾರ್. ಸಂಪರ್ಕಿಸಿ: 8073824856, 9206979202, 9743148634

ಸ್ವಯಂಭೂ ಹಿಮಲಿಂಗ ಅಮರನಾಥ್, ಕಾಶ್ಮೀರ್, ವೈಷ್ಣವಿದೇವಿ 03.07.2026, 05.07.2026 ರಿಂದ 9/7 ದಿನಗಳು. ಪವಿತ್ರ ಕೈಲಾಸ ಪರ್ವತ, ಮಾನಸ ಸರೋವರ 24.07.2026,23.08.2026 ರಿಂದ 13 ದಿನಗಳು. ಕಾಶಿ, ಗಯಾ, ಪ್ರಯಾಗ್ ರಾಜ್, ಅಯೋಧ್ಯ 26.06.2026, 02.07.2026,16.07.2026 ರಿಂದ 6 ದಿನಗಳು. ಸಂಪರ್ಕಿಸಿ. 26508925, 9980993631, ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ, ಬೆಂಗಳೂರು.18

ಸೇವೆಗಳು SERVICES

ASTROLOGY

ಉಚಿತ ಜ್ಯೋತಿಷ್ಯ ತರಗತಿಗಳು: ಬೆಂಗಳೂರು ಅಸ್ಟ್ರಾಲಾಜಿಕಲ್ ಅಸೋಸಿಯೇಷನ್ (ರಿ.) ವತಿಯಿಂದ ಸತತವಾಗಿ 47 ವರ್ಷಗಳಿಂದ ಉಚಿತ ಜ್ಯೋತಿಷ್ಯ ತರಗತಿಗಳು ನಡೆಸುತ್ತಿದ್ದು, ಅದರಂತೆ ಈ ವರ್ಷ 07.06.2026 ರಿಂದ ತರಗತಿಗಳು ಪ್ರಾರಂಭವಾಗುತ್ತವೆ. ಪ್ರಸಕ್ತ 2026-2027 ಸಾಲಿನ ಜ್ಯೋತಿಷ್ಯ ತರಗತಿಗಳ ಪ್ರವೇಶಕ್ಕಾಗಿ ಜ್ಯೋತಿಷ್ಯ ಕಲಿಯಲು ಇಚ್ಛಿಸುವ ಆಸಕ್ತ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತೆ. ಆಸಕ್ತರು ಸಂ: ಬಿ.ಆರ್. ನರಸಿಂಹ ಸ್ವಾಮಿ, ಕಾರ್ಯದರ್ಶಿ, 99017 14595.

personal

CHANGE OF NAME

I Firdos Khan s/o Chotesab No 196 Jayanagar 3rd block Bengaluru have changed my name from Firdos Khan Chotesab To Firdos Khan

I Nazneem Begum W/O, Syed Tajuddin R/o No 13,1st Cross,near Lic Office, Nyamath Bi Dargah Mohalla,kolar Taluk Kolar District, Karnataka-563101 have changed my name to Nazeem Begum.

I, Aditi Gupta, changed my minor daughter's name from Saachi Jain to SRIDHA JAIN vide affidavit dated 30/05/2026. Sworn before notary HS Sakalesh Aradhya Bengaluru.

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ / ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

I, IVY ELIZABETH PREMA PAUL, W/o. late. Mr. Israel Sahayam Dayala Christopher, R/at #33/1, Harris Road, Benson Town Post, Bengaluru 560046, declare that all the names IVY ELIZABETH PREMA PAUL and PREMA CHRISTOPHER / PREMA CRISTOPHER refers / pertains to one and the same person i.e., myself & for all official purposes, I may be known & called as IVY ELIZABETH PREMA PAUL vide Affidavit Dt: 25/04/2026 sworn before Notary SIVAKUMARA M N, B'luru.

I, N.R.Govindrajugupta (Old name), S/o N.Raghavaiah Shetty residing at No. 68/6, Achuta Ranga Nilaya, Kote Beedhi, Near GGMS School, Nelamangala, Bangalore - 562123, changed my name from N.R.Govindrajugupta to N.R.Govindarajaguptha. vide affidavit date 02/06/2026 sworn before notary R. Lakshminarayana, Henceforth I shall be known as N.R.Govindarajaguptha for all purposes.

I, SRIDEVI SHUKLA W/o.MANJUNATH SHUKLA, R/at No.32, MSH layout, Anand Nagar, HAF Post, Bengaluru - 560 024, have changed my name and shall here after be known as SRIDEVI M SHUKLA alias SRIDEVI MANJUNATH SHUKLA for all purposes vide Affidavit dated 30/05/2026 sworn before Notary B R Shashikala, Bengaluru.

I, Sanjyoti Haridas Zimal R/o No 229/5 Sannidhi Castle Flat No 104 12th cross 11th main Wilson Garden Bengaluru 560027 Have changed name to Sanjyoti Suraj Katare for all Purposes.

I, VISHAL SURENDRAKUMAR GURNANI S/o Surendrakumar Shobhrajmal Gurnani aged about 29 years R/At Inder Bhavan, No.18/1, BBMP PID No. -70-06-18/1, Shanthi Nagar, B'luru-560027 have changed my name to VISHAL SURENDRA GURNANI vide affidavit dtd:03/06/2026 sworn before notary Uday Kumar K, B'luru.

I, SUJA MANDHINI JEYABALA MURUGAN alias SUJA NANDINI residing at C-214, 2ND FLOOR, MAHENDRA AARYA, GLASS FACT, ANDAPURA, CHANDAPURA POST, BENGALURU RURAL 560099, have changed my name to SUJA NANDINI JEYABALA MURUGAN vide affidavit dated 03/06/2026 sworn before notary B Seshagiri Bengaluru

I, Rajesha Vallagerahalli Harish R/O No 35 Kumbarahalli Chikkabanavara Bengaluru 560090 Have Chnaged My Name to Rajesh Vallagerahalli Harish for All Purposes.

I, Rahamath Inayath Khan R/o 22/11, new-23 Hosahalli Main Road, Padrayanapura B'lore-586026, have changed my name to Inayath Ulla Khan.

I, VIJAY SUSEELA YENNAM residing at 14214, PRESTIGE FALCON CITY LEVEL - 21, TOWER -4, BLDG 1, KONANAKUNTE CROSS, BENGALURU 560062, have changed my name to VIJAYA SUSEELA ULINDALA vide affidavit dated 03/06/2026 sworn before notary B Seshagiri Bengaluru

I, AVINASH S/o Madathil Mukundan aged about 36 years R/At GF-003, Ground Floor, A H ASTER, 6AC-306/2, OMBR Layout, Banaswadi, B'luru-560043, have changed my name to AVINASH MUKUNDAN vide affidavit dtd:03/06/2026 sworn before notary Uday Kumar K, Bengaluru.

I, Mohammed Mustaqhim Ahmed Abbas R/o No.10/5, 2nd main, 2nd cross, Rahamath Nagar, RT nagar, Bengaluru 560032 have changed my name to Mohammed Mustaqhim Ahmed. I shall be called by this name for all purposes

I, Pushkharini Poorijagannathan, R/o No.303 SM Smrithi, Talacauvery Layout, Basavanagar, Bangalore-560037 * Have changed my minor son name from Mugunth Arunprasad to Muguntkrishnaa Arunprasad. He shall be called by this name for all purposes

I Jyoti Hanumantarao Deshpnade W/O, Hanamantarao B Deshpande R/o N0-40/41, lakshmi,13th Cross,ullal Main, muneshwaranagara, viswavidalaya, bengaluru-560056 have changed my name to Jyoti Hanamantarao Deshapande.

I, KISHOR KUMAR MUNIRAMU, R/O NO 241, 10TH B CROSS, 25TH MAIN, J P NAGAR 1ST PHASE, BENGALURU - 560078, HAVE CHANGED MY NAME FROM KISHORE KUMAR MUNIRAMU TO KISHOR KUMAR MUNIRAMU, FOR ALL FUTURE PURPOSES.

I, Usman Rafic Jalaluddin, R/at No.GM Infinite Ecilty Town, Phase 2 KB Lock A 1110, G M Infiniy Thirupalya Village, Jigani Hobli, Bengaluru-5600100, have changed my name to USMAN RAFIC, vide affidavit dt: 01.06.2026, Notary V. Rajashekhara, Bengaluru.

I, Sangeeta Bohara, R/o : 1513, 7th main,4th cross, RPC Layout, Hampinagar, Bengaluru : 560104 have changed my name to Sangeetha Kothari. Affidavit Date : 01/06/2026

I, Rukmini Bai Sur Narayan Singh W/O Rama Krishna Mohan Singh R/O No 5 1st Cross,megha City Road, Near Jeevitha Anatha Ashram Maragondanahalli Road, Bengaluru- 560036. Have Changed My Name to Rukmini Bai for All Purposes.

I, Neha Narayan Raju D/o Narayan Raju Krishnam Residing At No 164/4, Doresanipalya Near Kalyani Magnum Tech, Park Bilekahalli IIM Post, Bengaluru -560078 have changed my name to Neha Narayan for all purposes

I Mohamed Iqbal Ahamed S/O, Ahmed Ishak R/o No 40 2nd Floor 14th Cross Bhuvaneshwari Nagar R T Nagar Bangalore Karnataka - 560032 have changed my name to Iqbal Ahmed.

I, Ramesh Kumar R, R/o 1291, 2nd Cross, Opp to St. Mary's Convent, Kalyan Nagar, T. Dasarahalli, Bangalore – 560057, have changed my name to Ramesh Kumar.

I Ashok Kumar R/o #88,2nd Phase, VIP Square Town , Icchangoor Gate Hosur Krishnagiri-635103 have changed my name to Ashok Kumar H.

I Mala w/o Govindaiah C r/o No 165 Nagarabhavi 2nd stage Bengaluru have changed my name from Mala D L to Mala

I, MEHAK P, MEHAK PRAFULL SANCHETI, Residing at No 111, 3rd Main, 4th Block, Rajaji Nagar, Bangalore-560010, I here by declare that MEHAK P and MEHAK PRAFULL SANCHETI both the names are same vide affidavit dated 03/06/2026 sworn before Notary Aravind Patil G.G Bangalore

I, Suraj Arjun Katare R/O No 229/5 Flat No 104 Sannidhi Castle Flat No 104 12th Cross 11th Main Wilson Garden Bengaluru 560027 Have Changed My Minor Daughter's Name From Yuvika to Yuvika Suraj Katare for All Purposes.

I, Anjali Kumari W/o Ritvik Gupta R/o House No. 155, 7th Cross, Reliable Woods Layout, Harlur Road, Kudlu, Bangalore - 560068 have change my name from Anjali to Anjali Kumari vide sworn before notary Hari Shanker Giri Bengaluru dated 20.05.2026

I, Nanjappa Tamiya, residing at No.959, 11th Cross, 7th Main, Gokulam 3rd Stg, Mysore - 570002 have changed to Nanjappa Dammaningala Thammiah Vide aff Dt.03/06/2026 sworn before Notary Devaraja E B'lore.

I, Chandrasekhara Ballupet Dharmaprakash S/o Dharmaprakash Bn R/o Ballupet Tq Sakaleshpur Hassan District Karnataka 573214 have changed my name to Chandrashekar for all purposes.

I, Jyoti Nagabhushan Paradeshi R/o No.4, Jyothi Nilaya, 1st main, Muneshwara Lyt, Kodichikkanahalli Bengaluru 560076 have changed my name to Jyothi Paradeshi. I shall be called by this name for all purposes

I, Bhuvaneshwari Timmanna Bhat, D/o Timmanna Ganapati Bhat, R/o No-25/2, GFL-009 Sri Vandana Meadows Shiva Temple Road, Kudlu Bommanahalli B'luru-560068 have changed my name to Bhuvana Bhat for all Purposes.

I, Kalavathi Tallapalli Aswathnarayana R/o No 1129 Ammashree Nilaya 21st A cross HSR layout Sector 3 Bengaluru 560102 Have changed my name to Kalavathi Srinivasa Reddy for all purposes.

I Yash Chaturvedi S/o Poonam Gaurav Chaturvedi R/o Kolte Patil Exente I Towers Konappana Agrahara Kamdhenu Layout Electronic City Phase 2 Bangalore have changed my name to Yash Gaurav Chaturvedi for all purposes.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು / ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

I, Nayeem Ahmed S/o Abdulla R/o No-1173,GF,2nd Cross, A K Colony,B S A Road ,fraser Town B'lluru-560005 have changed my name to Syed Nayeem Ahmed.

I, Nizamuddin, s/o Mohammed Basheer Ahmed, R/o No-35 1st Floor 4th Main 5th Cross Near Sophia PU College K.G Halli A.C Post B'luru-560045 have changed my name to Mohammed Nizamuddin for all Purposes.

I Avani Gupta D/O, Prashant Harish Gupta R/o P/4, 31st Main Road, 1st B Cross, Banashankari 3rd Stage, Banagirinagara, Bangalore-560085, Karnataka, India have changed my name to Avani Prashant Gupta

I, PRIYA SAHA W/o Saurav Jalan, Residing at The Tree By Provident, Block 1 A, 205, Ward No-72, 2nd Main Road, Herohalli, Bengaluru-560091 have changed my name to PRIYA SAHA JALAN vide Affidavit dated 03.06.2026 sworn before notary H R Karunakara, Bengaluru.

I, PRAKASH PUTTASWAMAPPA residing at NO. 6, KOUSTHUBHA NILAYA, R P MANSION, RAMOHALLI, BENGALURU – 560 060, have changed my name to PRAKASH RAMOHALLI PUTTASWAMAIAH vide affidavit dated 03/06/2026 sworn before notary H S Sakalesh Aradhya Bengaluru

LOST & FOUND

I, M.Nagesh S/o Muniyappa, residing at No.21, 12th Main Road, Near Nagarjuna College, Ramagondanahalli, Singanayakanahalli, Yelahanka, Bangalore-560064, stating that, I have lost the BDA original khatha certificate of Site No.165 (Yalahanka Hobli, Sy.No.62/P1 of Jarkabande Kaval Village and Sy.No.27 of Kempanahalli Village, measuring 61.123.5 X 41 feet) at Bangalore on 02.06.2026. In this regard, I have filed a complaint (Lost Report No.2233440/2026) Bangalore City Police on 02.06.2026. If any one finds the said document, please contact above address or Mobile: 9916351521

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

CAUTION NOTICE
Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

EVENTS AND EXHIBITIONS
TIMES interact
Connecting People, Connecting Needs.

ದಕ್ಷಿಣ ಭಾರತದ ಅತಿದೊಡ್ಡ ಹೋಟೆಲ್, ರೆಸ್ಟೋರೆಂಟ್ ಮತ್ತು ಕೇಟರಿಂಗ್ ವ್ಯಾಪಾರ ಪ್ರದರ್ಶನಕ್ಕೆ ಬನ್ನಿ, ಭೇಟಿ ನೀಡಿ
WORLD OF HOSPITALITY
BUSINESS EVENTS FOR HORECA PROFESSIONALS
ತ್ರಿಪುರ ವಾಸಿನಿ, ಗೇಟ್ ನಂ. 2 ಮೇಖ್ರಿ ಸರ್ಕಲ್, ಪ್ಯಾಲೇಸ್ ಗ್ರೌಂಡ್ಸ್, ಬೆಂಗಳೂರು
500+ BRANDS
250+ EXHIBITORS
10,000+ VISITORS
10+ SPECIAL EVENTS

CALL US TO KNOW MORE: 9821580849 /9821076065
ASSOCIATION PARTNERS

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ವಿಕ ಈ ದಿನ ವಿಶೇಷ ಜೂ.4

ದೌರ್ಜನ್ಯಕ್ಕೊಳಗಾದ ಮುಗ್ಧ ಮಕ್ಕಳ ದಿನ

ನಿತ್ಯವೂ ಜಗತ್ತಿನಾದ್ಯಂತ ಮಕ್ಕಳು ನಾನಾ ರೀತಿಯ ದೌರ್ಜನ್ಯ, ಹಿಂಸೆಗೆ ತುತ್ತಾಗುತ್ತಿದ್ದಾರೆ. ಮಕ್ಕಳ ಮೇಲಿನ ದೌರ್ಜನ್ಯ 2021ರಿಂದ ಏರುತ್ತಲೇ ಇದೆ. ಈ ಬಗ್ಗೆ ಜಾಗತಿಕ ಮಟ್ಟದಲ್ಲಿ ಅರಿವು ಮೂಡಿಸಲು ಪ್ರತಿವರ್ಷ ಜೂನ್ 4ರಂದು ಅಂತಾರಾಷ್ಟ್ರೀಯ ದೌರ್ಜನ್ಯಕ್ಕೊಳಗಾದ ಮುಗ್ಧ ಮಕ್ಕಳ ದಿನವೆಂದು ವಿಶ್ವಸಂಸ್ಥೆ ಘೋಷಿಸಿದೆ.

ಜನುಮ ದಿನ
ಕೃಷ್ಣರಾಜ ಒಡೆಯರ್

■ ಮಹಾತ್ಮ ಗಾಂಧಿ ಅವರಿಂದ ರಾಜರ್ಷಿ ಎಂದೇ ಹೊಗಳಿಸಿಕೊಂಡ ಮೈಸೂರು ಸಂಸ್ಥಾನದ 24ನೇ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್. ಇವರ ಆಳ್ವಿಕೆಯ ಕಾಲವನ್ನು



'ಸುವರ್ಣ ಯುಗ' ಎಂದು ಗುರುತಿಸಲಾಗುತ್ತದೆ. ಇವರು 1884ರ ಜೂನ್ 4ರಂದು ಜನಿಸಿದರು. ಆಧುನಿಕ ಕರ್ನಾಟಕದ ನಿರ್ಮಾತೃ ಎಂದೇ ಗೌರವಿಸಲಾಗುವ ಇವರು, 1916ರಲ್ಲಿ ಮೈಸೂರು ವಿವಿ ಸ್ಥಾಪಿಸಿದರು. ಬಾಲ ಕಾರ್ಮಿಕ ಪದ್ಧತಿ ರದ್ದು, ಪ್ರಾಥಮಿಕ ಶಿಕ್ಷಣ ಕಡ್ಡಾಯ, ಉಚಿತ ಶಿಕ್ಷಣ ನೀಡಿದರು. ಕೆಆರ್‌ಎಸ್, ಭದ್ರಾವತಿ ಉಕ್ಕಿನ ಕಾರ್ಖಾನೆ, ಮೈಸೂರು ಸಾಬೂನು ಕಾರ್ಖಾನೆ ಕಟ್ಟಿಸಿದರು. ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಇವರು 1940ರಲ್ಲಿ ವಿಧಿವಶರಾದರು.

ಎಸ್.ಪಿ. ಬಾಲಸುಬ್ರಮಣ್ಯಂ

■ ಎಸ್.ಪಿ. ಬಾಲಸುಬ್ರಮಣ್ಯಂ 1946ರ ಜೂನ್ 4ರಂದು ತಮಿಳುನಾಡಿನ ನೆಲ್ಲೂರಿನಲ್ಲಿ ಜನಿಸಿದರು. ಹಿನ್ನೆಲೆ ಗಾಯಕ, ನಟ, ನಿರೂಪಕ, ಸಂಗೀತ ನಿರ್ದೇಶಕ, ನಿರ್ಮಾಪಕ ಹೀಗೆ ಹಲವು ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡ, ತಮಿಳು, ತೆಲುಗು ಸೇರಿ 16 ಭಾಷೆಗಳಲ್ಲಿ ಅವರು ಹಾಡಿದ್ದಾರೆ. ಅವರು 2020, ಸೆ. 25ರಂದು ನಿಧನರಾದರು. ತೆಲುಗು ಮೂಲದವರಾದರೂ ಕನ್ನಡ ಕುರಿತು ಅಪಾರ ಗೌರವವಿತ್ತು. ಅವರಿಗೆ ಪದ್ಮ ವಿಭೂಷಣ (ಮರಣೋತ್ತರ) ಗೌರವ ದೊರಕಿವೆ.



ಪಂಚಾಂಗ 04-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಕೃಷ್ಣ **ಮಳೆ ನಕ್ಷತ್ರ:** ರೋಹಿಣಿ. **ನಿತ್ಯನಕ್ಷತ್ರ:** ಉತ್ತರಾಷಾಢ.
ತಿಥಿ: ಚತುರ್ಥಿ. **ಯೋಗ:** ಶುಕ್ಲ
ಕರಣ: ಭವ.
ವಾರ: ಗುರುವಾರ.

ರಾಹು ಕಾಲ: ಮ. 1.30 - 3.00
ಗುಳಿಕ ಕಾಲ: ಬೆ. 9.00-10.30
ಯಮಗಂಡ ಕಾಲ: ಬೆ. 6.00-7.30
ಸೂರ್ಯ ಉದಯ: ಬೆ. 5.53
ಸೂರ್ಯ ಅಸ್ತ: ಸಂ. 6.42

ಲೈಂಗಿಕ ದೌರ್ಜನ್ಯ: ಆರೋಪಿ ಸೆರೆ

ಹಾಸನ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಪಾನಿಪುರಿ ಮಾರುತ್ತಿದ್ದ ಯುವಕ ಸಾಗರ್ (21)ನನ್ನು ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತ ಬಾಲಕಿ ಕಾಲೇಜುವೊಂದರಲ್ಲಿ ಓದುತ್ತಿದ್ದಾಳೆ ಎನ್ನಲಾಗಿದೆ.

ಪಾನಿಪುರಿ ತಿನ್ನಲು ಬರುತ್ತಿದ್ದ ವೇಳೆ ಇಬ್ಬರ ನಡುವೆ ಪರಿಚಯವಾಗಿತ್ತು. ಬಾಲಕಿಯನ್ನು ಪುಸಲಾಯಿಸಿ ಕರೆದೊಯ್ದಿದ್ದ ಸಾಗರ್ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ. ದೌರ್ಜನ್ಯ ಎಸಗಿದ ನಂತರ ಬೈಕ್‌ನಲ್ಲಿ ಡ್ರಾಪ್ ಮಾಡಲು ಕರೆದುಕೊಂಡು ಬರುತ್ತಿದ್ದಾಗ ಅಪ್ರಾಪ್ತೆ ಕಿರುಚಿಕೊಂಡು ಬೈಕ್‌ನಿಂದ ಜಿಗಿದಳು. ಈ ವೇಳೆ ಸ್ಥಳೀಯರು ಬಾಲಕಿಯನ್ನು ರಕ್ಷಿಸಿ ವಿಚಾರಿಸಿದಾಗ ಲೈಂಗಿಕ ದೌರ್ಜನ್ಯ ನಡೆದಿರುವುದು ಬೆಳಕಿಗೆ ಬಂತು. ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದರು. ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿ ಸಾಗರ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮನೆಗೆ ಮರಳಿದ ವೃದ್ಧೆ ಕಮಲಮ್ಮ

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲೂಕಿನ ಮುನವಳ್ಳಿ ಹೊರವಲಯದ ನಿರ್ಜನ ಪ್ರದೇಶದಲ್ಲಿ ಅನಾಥವಾಗಿ ಮಂಗಳವಾರ ರಾತ್ರಿ ಕಳೆದ ವೃದ್ಧೆಯೊಬ್ಬರು ಸಾರ್ವಜನಿಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ನೆರವಿನಿಂದ ಬುಧವಾರ ಸುರಕ್ಷಿತವಾಗಿ ತಮ್ಮ ಮನೆ ಸೇರಿದರು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:05/2026-27 ದಿನಾಂಕ:29.05.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ:5054-03-337-0-17-154 ರಾಜ್ಯ ಹೆದ್ದಾರಿ ಸುಧಾರಣೆಗಳಡಿ ಅನುಮೋದನೆಯಾಗಿರುವ ನಂ-2 ವಿಶೇಷ ಉಪವಿಭಾಗ, ಮೈಸೂರು ವ್ಯಾಪ್ತಿಯ 01 ಕಾಮಗಾರಿ ಹಾಗೂ ಲೆಕ್ಕಶೀರ್ಷಿಕೆ:5054-04-337-0-01-154 ಜಿಲ್ಲಾ ಮುಖ್ಯ ರಸ್ತೆಗಳು ಸುಧಾರಣೆಗಳಡಿ ಅನುಮೋದನೆಯಾಗಿರುವ ನಂ-1 ಉಪವಿಭಾಗ, ಮೈಸೂರು ವ್ಯಾಪ್ತಿಯ 03 ಸಂಖ್ಯೆ, ನಂ-2 ವಿಶೇಷ ಉಪವಿಭಾಗ, ಮೈಸೂರು ವ್ಯಾಪ್ತಿಯ 04 ಸಂಖ್ಯೆ ಮತ್ತು ಟಿ ನರಸೀಪುರ ಉಪವಿಭಾಗ, ಟಿ ನರಸೀಪುರ ವ್ಯಾಪ್ತಿಯ 01 ಸಂಖ್ಯೆ ಒಟ್ಟು 09 ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಕ್ರಮ ಸಂಖ್ಯೆ 01 ರಿಂದ 07 ರವರೆಗಿನ ಕಾಮಗಾರಿಗಳಿಗೆ ದಿ:30.05.2026 ರಿಂದ 15.06.2026ರ ಸಂಜೆ 17:00 ರವರೆಗೆ ಹಾಗೂ ಕ್ರಮ ಸಂಖ್ಯೆ 08 ಮತ್ತು 09ರ ಕಾಮಗಾರಿಗಳಿಗೆ: ದಿ:01.06.2026 ರಿಂದ 01.07.2026ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ.143.19 ಲಕ್ಷಗಳು ಹಾಗೂ ಇ.ಎಂ.ಡಿ ರೂ.2.15 ಲಕ್ಷಗಳು ಹಾಗೂ ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.558.54 ಲಕ್ಷಗಳು ಹಾಗೂ ಇ.ಎಂ.ಡಿ ರೂ.8.38 ಲಕ್ಷಗಳಾಗಿರುತ್ತದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಮಿತಿ:04 ರಿಂದ 08 ತಿಂಗಳುಗಳು (ಮಳೆಗಾಲ ಸೇರಿದಂತೆ) ಸದರಿ ಕಾಮಗಾರಿಗಳ ಪೂರ್ವಭಾವಿ ಸಭೆಯನ್ನು ದಿ:06.06.2026 ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ: 1) ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. 2) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
DIPR/DDMYS/257/KSMCA/183/2026-27

ದುರಸ್ತಿಗೆ ಬಂದಿವೆ ಕಲ್ಯಾಣ ಕರ್ನಾಟಕದ ಶಾಲೆಗಳು | ಆತಂಕದಲ್ಲಿ ಮಕ್ಕಳು, ಶಿಕ್ಷಕರು

ಶಿಥಿಲ ಕೊಠಡಿಗಳಲ್ಲೇ ನಡೆಯುತ್ತಿದೆ ಪಾಠ!

■ **ವೆಂಕಟೇಶ ಏಗನೂರು** ಕಲಬುರಗಿ
Venkatesh.narasappa@timesofindia.com

ಶೈಕ್ಷಣಿಕ ವರ್ಷ ಶುರುವಾಗಿದ್ದು, ಕಲ್ಯಾಣ ಕರ್ನಾಟಕದ 10 ಸಾವಿರಕ್ಕೂ ಹೆಚ್ಚು ಶಾಲಾ ಕೊಠಡಿಗಳು ಶಿಥಿಲಗೊಂಡು ಬೋಧನೆಗೆ ಅಸುರಕ್ಷಿತವಾಗಿವೆ. ಯಾವಾಗ ಬೀಳುತ್ತವೆ ಎಂಬ ಭಯದ ನಡುವೆಯೇ ಶಿಕ್ಷಕರು ಮಕ್ಕಳಿಗೆ ಪಾಠ ಹೇಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಶಾಲೆಗಳು ಪುನಾರಂಭಗೊಂಡ ಹಿನ್ನೆಲೆಯಲ್ಲಿ ಮಕ್ಕಳನ್ನು ಸಂತೋಷದಿಂದ ಶಾಲೆಗಳಿಗೆ ಶಿಕ್ಷಕರು ಆಹ್ವಾನಿಸಿದ್ದಾರೆ. ಆದರೆ, ಬೋಧನೆ ಮಾಡುವ ಶಾಲಾ ಕೊಠಡಿಗಳೇ ಅಸುರಕ್ಷಿತ ಇರುವುದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು ಪಾಲಕರು ಹಿಂದೇಟು ಹಾಕುವಂತಾಗಿದೆ. ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗ ಶೈಕ್ಷಣಿಕವಾಗಿ ಮೊದಲೇ ಹಿಂದುಳಿದಿವೆ. ಈ ಭಾಗದಲ್ಲಿ ಸಾವಿರಾರು ಶಾಲಾ ಕೊಠಡಿಗಳು ಬೋಧನೆಗೆ ಅರ್ಹವೇ ಅಲ್ಲ. ಇದರಿಂದ ಶಿಕ್ಷಕರು, ಮಕ್ಕಳು ಭೀತಿಗೊಳಗಾಗುವಂತಾಗಿದೆ.

ಜಿಲ್ಲೆಯಲ್ಲಿನ ಬೋಧನೆಗೆ ಸೂಕ್ತವಲ್ಲದ ಕೊಠಡಿಗಳನ್ನು ಮುಖ್ಯ ಶಿಕ್ಷಕರು ಗುರುತಿಸಬೇಕು. ಉತ್ತಮ ಕೊಠಡಿಗಳಲ್ಲಿಯೇ ಬೋಧನೆ ಮಾಡಬೇಕೆಂದು ಸೂಚನೆ ನೀಡಲಾಗಿದೆ. ಜತೆಗೆ ಪಿಆರ್‌ಇ, ಪಿಡಬ್ಲ್ಯೂಡಿ ಅಧಿಕಾರಿಗಳಿಗೆ ಕಟ್ಟಡ, ಕೊಠಡಿಗಳ ವರದಿಗಳನ್ನು ಕೇಳಲಾಗಿದೆ. ಅವರು ವರದಿ ಕೊಟ್ಟ ನಂತರ ಸರಕಾರಕ್ಕೆ ವರದಿ ಕಳುಹಿಸಲಾಗುವುದು. - **ಶಂಕ್ರಮ್ಮ ಢವಳಗಿ** ಡಿಡಿಪಿಐ, ಕಲಬುರಗಿ

10,494 ಶಾಲಾ ಕೊಠಡಿಗಳು ಶಿಥಿಲ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು 7,798 ಪ್ರಾಥಮಿಕ ಶಾಲೆಗಳಿದ್ದು, 1,295 ಪ್ರೌಢಶಾಲೆಗಳಿವೆ. ಇವುಗಳಲ್ಲಿ 41,596 ಪ್ರಾಥಮಿಕ ಶಾಲಾ ಕೊಠಡಿಗಳು ಬೋಧನೆಗೆ ಸೂಕ್ತವಾಗಿದ್ದು, 12,722 ಪ್ರೌಢಶಾಲೆ ಕೊಠಡಿಗಳು ಬೋಧನೆಗೆ ಸೂಕ್ತವಾಗಿವೆ. ಆದರೆ, 8,756 ಪ್ರಾಥಮಿಕ ಮತ್ತು 17,378 ಪ್ರೌಢಶಾಲಾ ಕೊಠಡಿಗಳು ಬೋಧನೆಗೆ ಅಸುರಕ್ಷಿತವಾಗಿವೆ. ಪ್ರಾಥಮಿಕ, ಪ್ರೌಢಶಾಲೆ ಸೇರಿ ಒಟ್ಟು 10,494 ಶಾಲಾ ಕೊಠಡಿಗಳು ಶಿಥಿಲಗೊಂಡಿವೆ ಎಂದು ಗುರುತಿಸಲಾಗಿದೆ.

ಮಳೆಗಾಲಕ್ಕೂ ಮುನ್ನ ಪ್ಲಾನ್ ಇಲ್ಲ: ಶಾಲೆಗಳು ಏಪ್ರಿಲ್, ಮೇ ತಿಂಗಳಲ್ಲಿ ರಜೆ ಇರುತ್ತವೆ. ಆದರೆ, ಸರಕಾರ ಶಾಲೆಗಳು ರಜೆ ಇದ್ದಾಗ ಶಿಥಿಲಾವಸ್ಥೆಗೆ ತಲುಪಿದ ಕೊಠಡಿಗಳ ದುರಸ್ತಿಗೆ ಮುಂದಾಗುವುದಿಲ್ಲ. ಈಗ ಮಳೆಗಾಲ ಆರಂಭವಾಗಿದ್ದು, ಮಳೆಗೆ ಕೊಠಡಿಗಳು ಸೋರಿಕೆಯಾದಾಗ, ಕುಸಿದು ಬಿದ್ದಾಗ ಅಥವಾ ಅನಾಹುತಗಳು ಸಂಭವಿಸಿದಾಗ ದುರಸ್ತಿಯ ಬಗ್ಗೆ ಯೋಚಿಸುತ್ತವೆ. ಆದ್ದರಿಂದ ಶಿಥಿಲಾವಸ್ಥೆಗೆ ತಲುಪಿದ ಶಾಲಾ ಕೊಠಡಿಗಳ ದುರಸ್ತಿಗೆ ಸರಕಾರ ಕ್ರಮಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ಜಿಲ್ಲಾವಾರು ಬೋಧನೆಗೆ ಅಸುರಕ್ಷಿತ ಕೊಠಡಿಗಳು

ಕಲಬುರಗಿ	2,407
ಬಳ್ಳಾರಿ	929
ಬೀದರ್	1,016
ಕೊಪ್ಪಳ	1,390
ರಾಯಚೂರು	1,824
ವಿಜಯನಗರ	1,456
ಯಾದಗಿರಿ	1,472
ಒಟ್ಟು	10,494

ಕಲಬುರಗಿ ಜಿಲ್ಲೆಯಲ್ಲೇ ಹೆಚ್ಚು ಶಿಥಿಲ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತ್ಯಂತ ಹೆಚ್ಚು ಕಲಬುರಗಿ ಜಿಲ್ಲೆಯಲ್ಲಿ ಶಾಲಾ ಕೊಠಡಿಗಳು ಶಿಥಿಲಗೊಂಡಿವೆ. ಕಲಬುರಗಿ ಜಿಲ್ಲೆಯಲ್ಲಿ 2,407 ಶಾಲಾ ಕೊಠಡಿಗಳು ಬೋಧನೆಗೆ ಸೂಕ್ತವಲ್ಲ ಎಂಬ ಮಾಹಿತಿ ಲಭ್ಯವಾಗಿವೆ. ಆದರೆ, ಮುಖ್ಯಶಿಕ್ಷಕರು ಉತ್ತಮ ಕೊಠಡಿಗಳು ಇಲ್ಲದಿದ್ದರಿಂದ ಅನಿವಾರ್ಯವಾಗಿ ಶಿಥಿಲ ಕೊಠಡಿಗಳಲ್ಲಿಯೇ ಅನಿವಾರ್ಯವಾಗಿ ಬೋಧನೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕಾರಿನ ಡಿಕ್ಕಿಯಲ್ಲಿ ಉಸಿರುಗಟ್ಟಿ ಮಗು ಸಾವು

■ **ವಿಕ ಸುದ್ದಿಲೋಕ** ಶಹಾಬಾದ್ (ಯಾದಗಿರಿ)

ತಾಲೂಕಿನ ತೊನಸನಹಳ್ಳಿ (ಎಸ್)ಯಲ್ಲಿ ಮನೆ ಮುಂದೆ ಆಟವಾಡುತ್ತಿದ್ದ ಮೂರು ವರ್ಷದ ಮಗು ಕಾರಿನ ಡಿಕ್ಕಿಯೊಳಗೆ ಸಿಲುಕಿ ಉಸಿರುಗಟ್ಟಿ ಮೃತಪಟ್ಟಿದೆ.

ಕೊಟ್ಟೂರೇಶ್ವರ ಪೂಜ್ಯರ ಪುತ್ರ ಬಸವಪ್ರಭು (3) ಮೃತ ಮಗು. ಮನೆಯ ಮುಂಭಾಗದಲ್ಲಿ ಸ್ನೇಹಿತರೊಂದಿಗೆ ಆಟವಾಡುತ್ತಿತ್ತು. ಆಟದ ಮಧ್ಯೆ ಮನೆಯ ಆವರಣದಲ್ಲಿ ನಿಲ್ಲಿಸಲಾಗಿದ್ದ ಕಾರಿನ ಡಿಕ್ಕಿ ತೆರೆದು ಒಳಗೆ ಸೇರಿಕೊಂಡಿತು.

ದುರದೃಷ್ಟವಶಾತ್ ಡಿಕ್ಕಿಯ ಬಾಗಿಲು ತಾನಾಗಿಯೇ ಲಾಕ್ ಆಯಿತು. ಮಗುವಿಗೆ ಒಳಗಿನಿಂದ ಅದನ್ನು ತೆರೆಯಲು ಸಾಧ್ಯವಾಗಿಲ್ಲ, ಸೀಟಿನ ಕೆಳಗಿನಿಂದ ಹೊರಗೆ ಹೋಗಲು ಪ್ರಯತ್ನಿಸುವಾಗ ತಲೆ ಅದರಲ್ಲಿ ಸಿಲುಕಿ ಉಸಿರು ಗಟ್ಟಿ ಮೃತಪಟ್ಟಿದೆ.

ಮಧ್ಯಾಹ್ನದ ಹೊತ್ತಿಗೆ ಮಗು ಕಾಣಿಸದಿದ್ದಾಗ ಗಾಬರಿಗೊಂಡ ಪೋಷಕರು ಮತ್ತು ನೆರೆಹೊರೆಯವರು ಹುಡುಕಾಡಿದರು. ಹಲವು ಗಂಟೆಗಳ ಶೋಧದ ನಂತರ ಶಂಕೆಯಿಂದ ಕಾರಿನ ಡಿಕ್ಕಿ ತೆರೆದು ನೋಡಿದಾಗ, ಮಗು ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವುದು ಕಂಡುಬಂತು.

ನಮ್ಮ ಭವಿಷ್ಯದ ಕನಸು ಕಮರಿ ಹೋಯಿತು ಎಂದು ಕುಟುಂಬದವರು ರೋದಿಸಿದರು.

ಜಾಮೀನು ರದ್ದು, ಅರ್ಜಿ ವಿಚಾರಣೆ 6ಕ್ಕೆ

ದಾವಣಗೆರೆ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಿಂದ ಪದಚ್ಯುತರಾದ ವಚನಾನಂದ ಸ್ವಾಮೀಜಿ ಅವರಿಗೆ ಪೋಕ್ಸೊ ಪ್ರಕರಣದಲ್ಲಿ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಪೊಲೀಸರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಜಿಲ್ಲಾ ವಿಶೇಷ ಪೋಕ್ಸೊ ವಿಶೇಷ ನ್ಯಾಯಾಲಯ ಜೂನ್ 6ಕ್ಕೆ ಮುಂದೂಡಿದೆ.

ಹರಿಹರ ಗ್ರಾಮೀಣ ಠಾಣೆ ಪೊಲೀಸರು ಸಲ್ಲಿಸಿರುವ ಅರ್ಜಿಯ ವಿಚಾರಣೆ ಯನ್ನು ನ್ಯಾಯಾಧೀಶರು ಆರಂಭಿಸುತ್ತಿದ್ದಂತೆ, ಸ್ವಾಮೀಜಿ ಪರ ವಕೀಲರು ತಕರಾರು ಅರ್ಜಿ ಸಲ್ಲಿಸಿದ್ದರು. ಹೀಗಾಗಿ ನ್ಯಾಯಾಧೀಶರು ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಿದರು.



ಗುರುಪೀಠದ ವಸತಿ ಶಾಲೆ ವಿದ್ಯಾರ್ಥಿಗಳಿಂದ ಸ್ವಾಮೀಜಿ ಬಲವಂತವಾಗಿ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು ಎಂಬ ಆರೋಪ ಕೇಳಿಬಂದಿತ್ತು. ಮಠದ ಟ್ರಸ್ಟಿಗಳು ಹಾಗೂ ವಿದ್ಯಾರ್ಥಿಗಳ ಪೋಷಕರು ಷಡ್ಯಂತ್ರ ನಡೆಸುತ್ತಾರೆಂದು ಸ್ವಾಮೀಜಿ ಒಂದನೇ ವಿಶೇಷ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದರು.

ರೈಲಿನಲ್ಲಿ ನಕಲಿ ಟಿಟಿಇ ಬಂಧನ

ಶಿವಮೊಗ್ಗ: ಟಿಟಿಇ ಎಂದು ಹೇಳಿಕೊಂಡು ರೈಲಿನಲ್ಲಿ ಪ್ರಯಾಣಿಕರಿಂದ ಹಣ ಸಂಗ್ರಹಿಸುತ್ತಿದ್ದ ಎಂ.ಕೆ. ರಕೀಬುದ್ದೀನ್ (26)ನನ್ನು ಬಂಧಿಸಲಾಗಿದೆ. ಜನಶತಾಬ್ದಿ ಎಕ್ಸ್‌ಪ್ರೆಸ್‌ನಲ್ಲಿ ಟಿಕೆಟ್ ಪರಿಶೀಲಿಸುತ್ತಿದ್ದ ಚೀಫ್ ಟಿಕೆಟ್ ಇನ್ಸ್‌ಪೆಕ್ಟರ್ ಜೆ.ಯಶವಂತ್ ಅವರ ಗಮನಕ್ಕೆ ನಕಲಿ ಟಿಟಿಇ ಬರುತ್ತಿದ್ದಂತೆ ಅರಸೀಕೆರೆ ಜಿಆರ್‌ಪಿ ಠಾಣೆಗೆ ದೂರು ನೀಡಿದ್ದಾರೆ.

ಮಡಿಕೇರಿ ಜೈಲಿನಲ್ಲಿ ಮಾರಾಮಾರಿ ಪ್ರಕರಣ: ಕೈದಿ ಸಾವು

ಮಡಿಕೇರಿ: ನಗರದ ಜಿಲ್ಲಾ ಕಾರಾಗೃಹದಲ್ಲಿ ಇಬ್ಬರು ವಿಚಾರಣಾಧೀನ ಕೈದಿಗಳ ಮಧ್ಯೆ ನಡೆದಿದ್ದ ಕಾದಾಟದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಹೇಮಂತ್ (26) ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಜೂನ್ 1ರಂದು ಹೇಮಂತ್ ಮೇಲೆ ಮತ್ತೊಬ್ಬ ಕೈದಿಯೂ ಆದ ಆತನ ಸಂಬಂಧಿ ರಾಜೇಶ್ (36) ಹಲ್ಲೆ ನಡೆಸಿ, ಆಯುಧದಿಂದ ಇರಿದಿದ್ದ. ಇಬ್ಬರ ಕುಟುಂಬಗಳ ನಡುವೆ ಆಸ್ತಿ ವಿಚಾರಕ್ಕೆ ವೈಷಮ್ಯವಿತ್ತು.

ಇದೇ ವಿಚಾರದ ಪ್ರಕರಣವೊಂದರಲ್ಲಿ ಇತ್ತೀಚೆಗೆ ಹೇಮಂತ್ ಜೈಲು ಸೇರಿದ್ದ, ಜೈಲಿನಲ್ಲಿ ಇಬ್ಬರೂ ಮುಖಾಮುಖಿಯಾದಾಗ ಹೊಡೆದಾಟ ನಡೆದಿತ್ತು ಎಂದು ಮೂಲಗಳು ತಿಳಿಸಿವೆ.ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಮೂರೂವರೆ ಎಕರೆ ಸಂಬಂಧ ಈ ಎರಡೂ ಕುಟುಂಬಗಳ ನಡುವೆ ವಿವಾದ ಇದೆ. 2022ರಲ್ಲೂ ಒಂದು ಕೊಲೆ ಹಾಗೂ ಕೊಲೆಯತ್ನ, ಹೊಡೆದಾಟ ಪ್ರಕರಣಗಳು ನಡೆದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ-04, ಭೂತರಾಮನಹಟ್ಟಿ, ಬೆಳಗಾವಿ-591156
(ನ್ಯಾಕ್ ಮಾನ್ಯತೆ B+ ಗ್ರೇಡ್-2021) PM-USHA (MERU)
E-mail: registrar@rcub.ac.in, aee@rcub.ac.in, Phone No.: 0831-2565234/42

ಸಂ: ರಾಚವಿ/ಬೆಳಗಾವಿ/ಕುಸಕಾ/ಕ.ವಿ./2026-27/1178 ದಿನಾಂಕ: 03-06-2026

ಪತ್ರಿಕಾ ಪ್ರಕಟಣೆಗಾಗಿ : ಟೆಂಡರ್ ಅಧಿಸೂಚನೆ

ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಬೆಳಗಾವಿ ಇವರು ವಿಶ್ವವಿದ್ಯಾಲಯದ ಅಡಿಯಲ್ಲಿನ ಈ ಕೆಳಕಾಣಿಸಿದ ಸಿವಿಲ್ ಕಾಮಗಾರಿಗಳಿಗೆ ದಿನಾಂಕ: 03-06-2026ರಂದು ಅರ್ಹ ಗುತ್ತಿಗೆದಾರರಿಂದ KPPP ಪೋರ್ಟಲ್‌ನಲ್ಲಿ ಗುತ್ತಿಗೆಯನ್ನು ಕರೆಯಲಾಗಿದ್ದು, ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ಇ.ಎಮ್.ಡಿ. ಮೊತ್ತದ ವಿವರಣೆಯು ಈ ಕೆಳಗಿನಂತಿರುತ್ತದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಪೋರ್ಟಲ್ ವಿಶ್ವವಿದ್ಯಾಲಯದ ಇಂಜನೀಯರಿಂಗ್ ವಿಭಾಗದಲ್ಲಿ ಹಾಗೂ ವೆಬ್‌ಸೈಟ್ ವಿಳಾಸ www.rcub.ac.in ರಲ್ಲಿ ಪಡೆಯಬಹುದು.

Sl. No.	Name of the Work	Estimated Cost	EMD	Last Date of Receipt
1	Providing Fencing work for new campus of RCU Hirebagewadi, Belagavi **(RCUB/2026-27/OW/WORK_INDENT17)**	Rs. 65 Lakhs	Rs. 1,30,000.00	18.06.2026
	ಅಲ್ಪಾವಧಿ ಟೆಂಡರ್ ಅಧಿಸೂಚನೆ			
1	Construction of Dry wall partitions and other works for various departments at Phase-1 buildings, New Campus, Sangolli Rayanna Constituent College and Main Campus Bhutaramanahatti of Rani Channamma University, Hirebagewadi, Belagavi **(RCUB/2026-27/OW/WORK_INDENT16)**	Rs. 200 Lakhs	Rs. 3,00,000.00	11.06.2026

ಸಹಿ/- ಕುಲಸಚಿವರು,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-3 ರವರ ಕಚೇರಿ, 1ನೇ ಮಹಡಿ,
ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು - 560052

No: DGM-3/BSWML/Tend/05/2026-27 Date: 03/06/2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು-3 ಬಿ ಎಸ್ ಡಬ್ಲ್ಯೂ ಎಂ ಎಲ್ ಇವರು ವ್ಯವಸ್ಥಾಪಕ ನಿರ್ದೇಶಕರು, ಬಿ ಎಸ್ ಡಬ್ಲ್ಯೂ ಎಂ ಎಲ್, ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ಸೇವೆಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ : https ://kppp.karnataka.gov.in ಮೂಲಕ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ.

ಕ್ರ ಸಂ.	ಕಾಮಗಾರಿಯ ವಿವರಗಳು	ಸೇವೆಗಳ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಅವಧಿ (ಮಳೆಗಾಲ ಸೇರಿದಂತೆ)	ಇಎಂಡಿ (ರೂ.ಗಳಲ್ಲಿ)
1	ಸಾಮರ್ಥ್ಯವೃದ್ಧಿ ಕಾರ್ಯಕ್ರಮದ ಭಾಗವಾಗಿ ಪೌರಕಾರ್ಮಿಕರಿಗೆ ಮೈಸೂರು, ಹೊಸಪೇಟೆ, ದಾವಣಗೆರೆಗೆ ಪರಿಚಯಾತ್ಮಕ ಭೇಟಿ ಲಭ್ಯವಾಗಿಸುವುದು	196.20	06 ತಿಂಗಳು	2,94,300.00
2	ಸಾಮರ್ಥ್ಯವೃದ್ಧಿ ಕಾರ್ಯಕ್ರಮದ ಭಾಗವಾಗಿ ಪೌರಕಾರ್ಮಿಕರಿಗೆ ಚಿತ್ತಾಪುರ ಮತ್ತು ಮಂಗಳೂರಿಗೆ ಪರಿಚಯಾತ್ಮಕ ಭೇಟಿ ಲಭ್ಯವಾಗಿಸುವುದು	149.14	06 ತಿಂಗಳು	2,23,750.00
3	ಸಾಮರ್ಥ್ಯವೃದ್ಧಿ ಕಾರ್ಯಕ್ರಮದ ಭಾಗವಾಗಿ ಪೌರಕಾರ್ಮಿಕರಿಗೆ ಉಡುಪಿ ಮತ್ತು ಕಾರವಾರಕ್ಕೆ ಪರಿಚಯಾತ್ಮಕ ಭೇಟಿ ಲಭ್ಯವಾಗಿಸುವುದು.	144.00	06 ತಿಂಗಳು	2,16,000.00
4	ಸಾಮರ್ಥ್ಯವೃದ್ಧಿ ಕಾರ್ಯಕ್ರಮದ ಭಾಗವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಂತ್ರಿಕ ಅಧಿಕಾರಿಗಳಿಗೆ ಪರಿಚಯಾತ್ಮಕ ಭೇಟಿ ಲಭ್ಯವಾಗಿಸುವುದು (4ನೇ-ಕರೆ)	140.17	06 ತಿಂಗಳು	2,10,255.00

ವೇಳಾಪಟ್ಟಿ :
1. ಪ್ರೀ ಬಿಡ್ ಆಕ್ಷೇಪಣೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 10.06.2026 ರಿಂದ 17.30 ಗಂಟೆಗಳವರೆಗೆ. 2. ಪ್ರೀ ಬಿಡ್ ಮೀಟಿಂಗ್ : 11.06.2026 ರಂದು 15.00 ಗಂಟೆಗೆ ಕಾಅ & ಮುಪ್ರವ್ಯ (ಟೆಕ್) ರವರ ಕಚೇರಿ ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು. 3. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.06.2026 ರಿಂದ 16.00 ಗಂಟೆಗಳವರೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.06.2026 ರಂದು 16.30 ಗಂಟೆಗಳವರೆಗೆ. 5. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-3, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ.
DIPR/CP/966/NR/2026-27

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು - 560001.
ದೂರವಾಣಿ: (080) 22213009 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ತಾಂಶಾ/ಕ್ರೀಯೋ/111/2025-26 ದಿನಾಂಕ:03.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560 001 ಕರ್ನಾಟಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಪಟ್ಟಣದಲ್ಲಿರುವ ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಪಟ್ಟಣದಲ್ಲಿರುವ ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿ. ಟೆಂಡರ್ ಗೆ ಇಟ್ಟ ಮೊತ್ತ : ರೂ 790.69 ಲಕ್ಷಗಳು, ಇಎಂಡಿ ಮೊತ್ತ : ರೂ. 11,86,046/-. 1) ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 18.06.2026 ಸಮಯ 16.00 ಗಂಟೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.06.2026 ಸಮಯ 16.30 ಗಂಟೆ.

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
(ಟೆಂಡರ್ ಆಹ್ವಾನ ಪ್ರಾಧಿಕಾರ)
DIPR/CP/962/Zen/2026-27

IN THE COURT OF THE 51ST ADDL.CHIEF JUDICIAL MAGISTRATE AT BENGALURU
CC.NO. 20758/2023

BETWEEN
SRI. S. SHAILENDRA BABU & OTHERS ....COMPLAINANT
AND
M/S. SRI VENTURES LAND DEVELOPERS INDIA LTD., & OTHERS ....ACCUSED

NOTICE OF PROCLAIMATION WARRANT TO THE ACCUSED:

ACCUSED No: 1
M/s Sri Ventures Land Developers India Ltd @ M/s Sri Ventures Land Developers, No:82/1 , 1st Floor Dr. Rajkumar Road, Opp Navrang Bar (Prakash Nagar), Rajajinagar, Bangalore-560021
Represented by its Partners Sri K.N Venkatesh & Smt Amrutha Venkatesh
ACCUSED NO.2
SRI. K. N. VENKATESH, S/o. Narayana Iyenger, aged about 50 years, residing at No.82/1, 1st Floor, Dr. Rajkumar Road, Opp. Navrang Bar (Prakash Nagar) Rajajinagar, Bengaluru 560 021.
ACCUSED NO.3
SMT. AMRUTHA VENKATESH, W/o. K. N. Venkatesh, Aged about 45 years, Residing at No.82/1, 1st Floor, Dr. Rajkumar Road, Opp. Navrang Bar (Prakash Nagar) Rajajinagar, Bengaluru 560 021.

Take notice that, the complainant has instituted the above case against you Under Section 138 of N.I. ACT for Total Sum of Rs. 35,00,000/- hence, you are hereby directed to appear in person or through a pleader on 12-8-26 at 11.A.M before this court to answer the said claim. Take notice that in default of your appearance, the above case will be heard and consequences will follow. This may be ordered to publish in Kannada Daily Newspaper namely Vijaya Karnataka.
Given under my hand and seal of the court on this 19th day of May 2026.
By the Order of the Court.

(Signature)
Y.M. Latha
Sheristedar, 51 A.C.J.M. BENGALURU
SHERISTEDAR
51 ADDL. CHIEF JUDICIAL MAGISTRATE, BENGALURU CITY

PUBLIC NOTICE

My client intends to Purchase with respect to properties mentioned and described in the Schedule hereunder, with its owner, **Mrs. Alice Carri,** wife of late Mr. S. X. Carri. The Owner represents that she is the absolute owner of the Schedule Properties and have good marketable, right, title and interest therein and that apart from them, there are no other entity/ies, person/s having any right or claim over the Schedule Properties. The Owner further represents that they have not entered into any Agreements/MoU with any entity/ies, person/s and that they have not mortgaged, created any lien or encumbered the Schedule Properties or any part thereof in any manner, to any person/s. Any person/s having objection/s or claim/s shall with documentary evidence, lodge their objection(s)/claim(s) **within 21** (**Twenty-one**) **days** from the date of publication of this Notice with the Undersigned failing which, my client shall proceed with the above-mentioned transactions.

SCHEDULE

All that piece and parcel of the lands in serial Nos. 1 and 2, measuring in total 9 Acres 04 Guntas, all situated at Gadenahalli and Navarathna Agrahara Villages, Jala Hobli, Bengaluru North Taluk, Bengaluru Urban District, and the details of the properties are as follows:

Sl. No.	Sy. No.	Village	Extent		Boundaries				Conversion Status	Conversion Order
			Acres	Guntas	East	West	North	South		
1	E-Khatha No. 150200200 900420846 Survey No. 111	Navarathna Agrahara	04	25	Land bearing Survey No.110	Land bearing Survey No.112 & Gadenahalli Village Border	Land bearing Survey No.113	Gadenahalli Village Border	Residential	A.L.N: (Jala) SR:80/2014-15 Dtd. 04-07-2015
2	E-Khatha No. 150200200 900420848 Survey No. 112	Navarathna Agrahara	04	19	Land bearing Survey No.111	Gadenahalli Village Border	Land bearing Survey No.113	Gadenahalli Village Border	Residential	A.L.N: (Jala) SR: 81/2014-15 Dtd. 04-07-2015

Jayanth M Pattanshetti & **Sushanth J Pattanshetti,** Advocates,
Jayanth Pattanshetti Associates LLP
102, Ground Floor, "Rams Infantry Manor", No.70, Infantry Road, Bengaluru-560001. Ph: 9980530355
Place : Bengaluru
Date : 03-06-2026

PUBLIC NOTICE

My client intends to enter into a Purchase with respect to properties mentioned and described in the Schedule hereunder, with its owner, **M/s. Rashi Developers,** a registered Partnership firm, Represented by its Partners **(1) Mr. S. Ramana Prasad Reddy, (2) Mr. Shivkumar .C. Udasi** having its office at No. C-205, 2nd floor, House of Lords, St, Marks Road, Bengaluru-560001.The Owner represents that it is the absolute owner of the Schedule Properties and have good marketable, right, title and interest therein and that apart from them, there are no other entity/ies, person/s having any right or claim over the Schedule Properties. The Owner further represents that they have not entered into any Agreements/MoU with any entity/ies, person/s and that they have not mortgaged, created any lien or encumbered the Schedule Properties or any part thereof in any manner, to any person/s. Any person/s having objection/s or claim/s shall with documentary evidence, lodge their objection(s)/claim(s) **within 21** (**Twenty-one**) **days** from the date of publication of this Notice with the Undersigned failing which, my client shall proceed with the above-mentioned transactions.

SCHEDULE

All that piece and parcel of the lands in serial Nos. 1 to 3, measuring in total 9 Acres 14 Guntas, all situated at Gadenahalli and Navarathna Agrahara Villages, Jala Hobli, Bengaluru North Taluk, Bengaluru Urban District, and the details of the properties are as follows:

Sl. No.	Sy. No.	Village	Extent		Boundaries				Conversion Status	Conversion Order
			Acres	Guntas	East	West	North	South		
1	33/1	Gadenahalli	02	04	Land bearing Survey No. 34/1	Land bearing Survey No. 33/2 & Survey No. 33/3 (earlier part of Survey No. 33/1)	Navarathna Agrahara Boundary	Road, Land bearing Survey Nos. 22, 36 & Survey No. 33/3 (earlier part of Survey No. 33/1)	Residential	ALN: [NA](Jala) SR:96/12-13 dtd. 21-03-2013
2	34/1	Gadenahalli	02	10	Ramaining Protion of Survey No. 34/1	Land bearing Survey No. 33/1	Navarathna Agrahara Boundary	Road .	out of which 01 acre 36 Guntas is Residentially Converted land & 14 Guntas reserved for High Tension Power line	ALN: [NA](Jala) SR:69A/11-12 dtd. 04-08-2011
3	E-Khatha No. 150200200 900420845 Survey No. 110	Navarathna Agrahara	05	23	Land bearing Survey No.109	Land bearing Survey No.111	Land bearing Survey No.114 (Lake)	Gadenahalli Village Border	Residential	ALN: (Jala) SR: 79/2014-15 Dtd. 04-07-2015

Jayanth M Pattanshetti & **Sushanth J Pattanshetti,** Advocates,
Jayanth Pattanshetti Associates LLP
102, Ground Floor, "Rams Infantry Manor", No.70, Infantry Road, Bengaluru-560001. Ph: 9980530355
Place : Bengaluru
Date : 03-06-2026

Bennett & Coleman THE TIMES OF INDIA ಸಂಪಾದಕೀಯ EDITORIAL

ವ್ಯವಸ್ಥೆಗೆ ಕನ್ನಡಿ ಹಿಡಿದ ಪತ್ರಗಳು

ಪತ್ರಗಳ ಯುಗ ಮುಗಿಯಿತು ಎನ್ನುವ ಹಾಗೇನೂ ಇಲ್ಲ. ಒಂದು ನಾಗರಿಕ ಸಮಾಜ, ಒಂದು ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವದಲ್ಲಿರುವ ತನಕ ಅನಿಸಿಕೆ, ಅಭಿಪ್ರಾಯಗಳನ್ನು ಸ್ವೀಕರಿಸುವುದು, ಗೌರವಿಸುವುದು ನಿರಂತರವಾಗಿ ನಡೆಯಬೇಕಷ್ಟೆ ಅದರ ಜೀವಂತಿಕೆಗೆ ಸಾಕ್ಷಿ. 'ನೂತನ ಸಿಎಂಗೆ ಪತ್ರ ಬರೆಯಿರಿ' ಎಂಬ 'ವಿಕ' ಕರೆಗೆ ಸ್ಪಂದಿಸಿ, ನಾಡಿನ ನಾನಾ ದಿಕ್ಕುಗಳಿಂದ ಸಹಸ್ರಾರು ಪತ್ರಗಳು ಬಂದಿದ್ದವು. ಈ ಶ್ರೀಸಾಮಾನ್ಯರ ಪತ್ರಗಳು ಕೇವಲ ಬೇಡಿಕೆಗಳ ಪಟ್ಟಿಯಲ್ಲ, ಅವು ಹೊಸ ಸರಕಾರದ ಮೇಲೆ ಜನ ಇಟ್ಟಿರುವ ನಂಬಿಕೆಯ ಕನ್ನಡಿಯೂ ಹೌದು.

ಈ ಪತ್ರಗಳಲ್ಲಿನ ನೋವುಗಳು ಒಂದೆರಡಲ್ಲ. ಬಡವರ ವಸತಿ ರಹಿತ ಬದುಕಿನ ಆಕ್ರೋಶ, ಸೂಕ್ತ ಆಸ್ಪತ್ರೆಗಳ ಪರದಾಟ, ಉದ್ಯೋಗಕ್ಕಾಗಿ ಅಲೆದಾಟ, ಮುಂಬಡ್ತಿ ತಾರತಮ್ಯದ ನೋವು, ಸಮಾನ ವೇತನಕ್ಕಾಗಿ ಚಾತಕಪಕ್ಷಿಯಂತೆ ಕಾಯುತ್ತಿರುವ ವರ್ಗ, ಸೇವೆಯ ಭದ್ರತೆಗಾಗಿ ಅಂಗಲಾಚುತ್ತಿರುವ, ಹಳ್ಳಿಗಳ ಪೆಡಂಭೂತವಾಗಿ ಕಾಡುತ್ತಿರುವ ನಶೆಯ ಜಾಲ, ಧಾರ್ಮಿಕ ಕ್ಷೇತ್ರಗಳ ಮೂಲಸೌಕರ್ಯ ಕೊರತೆ... ಹೀಗೆ ಈ ಪಟ್ಟಿಗೆ ಕೊನೆಯೆಂಬುದೇ ಇಲ್ಲ. ಇವೆಲ್ಲ ಸಮಸ್ಯೆಗಳಲ್ಲೂ ಅಧಿಕಾರಿವರ್ಗ ಇಷ್ಟು ದಿನ ಏನು ಮಾಡುತ್ತಿತ್ತು ಎನ್ನುವ ಪ್ರಶ್ನೆಯೂ ಈ ಹೊತ್ತಿನಲ್ಲಿ ಉದ್ಭವಿಸುವುದು ಸಹಜ. ಜನಪ್ರಿಯ ಯೋಜನೆಗಳ ಆಕರ್ಷಣೆಯಿಂದ ಆಚೆ ಬಂದು, ಪ್ರಾದೇಶಿಕ ಅಸಮಾನತೆಯನ್ನು ನೀಗಿಸುವ ಮತ್ತು ತಳಮಟ್ಟದ ಜನರ ಬದುಕಿಗೆ ಆರ್ಥಿಕ ಭದ್ರತೆ ನೀಡುವ ನೈಜ ಅಭಿವೃದ್ಧಿಯತ್ತ ಹೊಸ ಆಡಳಿತ ಚುಕ್ಕಾಣಿ ತಿರುಗಬೇಕಿದೆ.

ಅಧಿಕಾರಕ್ಕೆ ಬಂದ ಹೊಸದರಲ್ಲಿ ಇಂಥ ನೂರಾರು ಅಸೆ, ಆಕಾಂಕ್ಷೆಗಳು ಮುಖ್ಯಮಂತ್ರಿಗಳ ಮೇಜಿನ ಮೇಲೆ ಬಂದು ಬೀಳುವುದು ಸಹಜ. ಆದರೆ, ಈ ಪತ್ರಗಳಲ್ಲಿರುವ ಪ್ರತಿಯೊಂದು ಸಾಲೂ ನಮ್ಮ ವ್ಯವಸ್ಥೆಯ ಒಳಗಿನ ಆಡಳಿತಾತ್ಮಕ ಮಂದಗತಿ, ಪ್ರಾದೇಶಿಕ ಅಸಮಾನತೆ ಮತ್ತು ತಳಮಟ್ಟದ ಕಹಿಸತ್ಯಗಳನ್ನು ಬಿಚ್ಚಿಟ್ಟಿವೆ. ಈ ಹಿನ್ನೆಲೆಯಲ್ಲಿ, ನೂತನ ಮುಖ್ಯಮಂತ್ರಿಗಳು ಕೇವಲ ಆಡಳಿತಾತ್ಮಕ ಫೈಲುಗಳನ್ನಷ್ಟೇ ಅಲ್ಲದೆ, ಈ ಪತ್ರಗಳಲ್ಲಿ ಅಡಗಿರುವ ಶ್ರೀಸಾಮಾನ್ಯನ ಅಂತರಂಗದ ಕಳಕಳಿಯನ್ನು ಸೂಕ್ಷ್ಮವಾಗಿ ಆಲಿಸಿ, ತ್ವರಿತವಾಗಿ ಸ್ಪಂದಿಸಬೇಕಾದ ತುರ್ತು ಅಗತ್ಯವಿದೆ.

ಕರ್ನಾಟಕದ ಪ್ರಜೆಗಳಾದ ನಾವು...

ನಮ್ಮ ಸಂಕಟಗಳು, ಅಪೇಕ್ಷೆಗಳು ನೂರಾರಿವೆ

ವಿಧಾನಸೌಧದ 3ನೇ ಮಹಡಿಯ ಮುಖ್ಯಮಂತ್ರಿ ಕುರ್ಚಿಯ ಮೇಲೆ ನೂತನ ಸಾರಥಿ ಡಿ.ಕೆ. ಶಿವಕುಮಾರ್ ಆಸೀನರಾಗಿದ್ದಾರೆ. ಈ ಅಧಿಕಾರ ಬದಲಾವಣೆಯ ಹೊತ್ತಿನಲ್ಲಿ ನಾವೇನು ನಿರೀಕ್ಷಿಸುತ್ತಿದ್ದೇವೆ? ನಮ್ಮ ಮುಂದಿರುವ ಸಂಕಟಗಳೇನು? ಎನ್ನುವುದು ಜನಸಾಮಾನ್ಯರ ತಳಮಳ. **ನೂತನ ಸಿಎಂಗೆ ಪತ್ರ ಬರೆಯಿರಿ** ಎಂಬ 'ವಿಕ'ದ ಕರೆಗೆ ರಾಜ್ಯದ ಮೂಲೆಮೂಲೆಗಳಿಂದ ಶ್ರೀಸಾಮಾನ್ಯರು ತಮ್ಮ ಅಂತರಂಗದ ಕಳಕಳಿಯನ್ನು ಕಳುಹಿಸಿಕೊಟ್ಟಿದ್ದಾರೆ. ಇಲ್ಲಿ ಬಡವನ ಮನೆಯ ಕನಸುಗಳಿವೆ; ನೊಂದ ಚಾಲಕರ ವೇತನದ ಆತಂಕವಿದೆ; ಊರಿಗೊಂದು ಆಸ್ಪತ್ರೆ ಬೇಕೆನ್ನುವ ಬಯಕೆಯಿದೆ... ಹೀಗೆ ನೂರಾರು ಸಂಕಷ್ಟ ಅಪೇಕ್ಷೆಗಳ ಸುರಿಮಳೆಯನ್ನೇ ಓದುಗರು ಸುರಿಸಿದ್ದಾರೆ. ಈ ದನಿಗಳು ವಿಧಾನಸೌಧದ ಆ 3ನೇ ಮಹಡಿಯನ್ನು ತಲುಪಲಿ ಎನ್ನುವುದು **ವಿಜಯ ಕರ್ನಾಟಕದ** ಆಶಯ.

ಕಾಸರಗೋಡಿನ ಗಡಿನಾಡ ಕನ್ನಡಿಗ ವಿದ್ಯಾರ್ಥಿಗಳಿಗೆ ಆಸರೆಯಾಗಿ

ಕೇರಳದ ಕಾಸರಗೋಡು ಜಿಲ್ಲೆಯ ಗಡಿನಾಡ ಕನ್ನಡಿಗರು ಶೈಕ್ಷಣಿಕ ಹಾಗೂ ವೈದ್ಯಕೀಯ ಅಗತ್ಯಗಳಿಗಾಗಿ ಸಂಪೂರ್ಣವಾಗಿ ಕರ್ನಾಟಕವನ್ನೇ ಅವಲಂಬಿಸಿದ್ದಾರೆ. ಹಿಂದೆ ಕರ್ನಾಟಕದ ಉನ್ನತ ಶಿಕ್ಷಣದಲ್ಲಿ ಕಾಸರಗೋಡಿನ ಕನ್ನಡಿಗರಿಗೆ ಇದ್ದ 'ಗಡಿನಾಡ ಕನ್ನಡಿಗ' ವಿಶೇಷ ಮೀಸಲು ಸೌಲಭ್ಯವು ಈಗ ಸಮರ್ಪಕವಾಗಿ ಸಿಗುತ್ತಿಲ್ಲ. ಕಾಸರಗೋಡಿನ ಶೇ.90ರಷ್ಟು ಕನ್ನಡಿಗ ವಿದ್ಯಾರ್ಥಿಗಳು ಕೊಟಾ ಸೇರಿದಂತೆ ಕರ್ನಾಟಕದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುತ್ತಾರೆ. ಮಾತೃಭಾಷೆ ಕನ್ನಡವನ್ನು ಉಳಿಸಿಕೊಂಡು ಬರುತ್ತಿರುವ ಇಲ್ಲಿನ ಗಡಿನಾಡ ವಿದ್ಯಾರ್ಥಿಗಳಿಗೆ ಈ ವರ್ಷದಿಂದಲೇ ಉನ್ನತ ಶಿಕ್ಷಣದ ಪ್ರವೇಶಾತಿಯಲ್ಲಿ ವಿಶೇಷ ಪ್ರಾತಿನಿಧ್ಯ ಹಾಗೂ ಕಾಲೇಜು ಶುಲ್ಕ ರಿಯಾಯಿತಿಯನ್ನು ಘೋಷಿಸುವ ಮೂಲಕ ನೂತನ ಸರಕಾರವು ಕಾಸರಗೋಡಿನ ಕನ್ನಡಿಗರಿಗೆ ಆಸರೆಯಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

- ವಿರಾಜ್ ಅಡೂರು ಕಾಸರಗೋಡು

ಮೈಸೂರು ಅಭಿವೃದ್ಧಿ ಮರೆಯದಿರಿ

ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ. ನೀವು ಮೈಸೂರಿನ ಅಳಿಯರಾಗಿರುವುದು ನಮಗೆ ಹೆಮ್ಮೆ. ಈಗ ಬೆಂಗಳೂರಿನಷ್ಟೇ ಕಾಳಜಿಯನ್ನು ಮೈಸೂರಿನತ್ತ ತೋರಿಸಿ. ಏಕೆಂದರೆ, ಬೆಂಗಳೂರಿಗೆ ಪರ್ಯಾಯ ಎಂಬಂತೆ ಮೈಸೂರು ಬೆಳೆಯುತ್ತಿದೆ. ಇದಕ್ಕಾಗಿ ಎಕ್ಸ್‌ಪ್ರೆಸ್ ವೇ, ರೈಲ್ವೆ ಸಂಪರ್ಕವೂ ಮೇಲ್ದರ್ಜೆಗೆ ಏರಿದೆ. ಆದರೆ, ಉದ್ಯಮಕ್ಕೆ ಬೇಕಾದ ಮೂಲ ಸೌಲಭ್ಯವನ್ನೇ ನೀಡಲಿಲ್ಲ. ಇದರಿಂದಾಗಿ ಪ್ರಮುಖ ಉದ್ಯಮಗಳು ಇತ್ತ ಬರಲು ಹಿಂದೇಟು ಹಾಕುತ್ತಿವೆ. ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳನ್ನು ಕೈಗಾರಿಕಾ ಸ್ನೇಹಿಯಾಗಿ ಬೆಳೆಸಲು ತುರ್ತು ಕ್ರಮ ಕೈಗೊಳ್ಳಬೇಕಿದೆ. ಕೈಗಾರಿಕಾ ತ್ಯಾಜ್ಯ ಸಂಸ್ಕರಿಸಿ ಮರುಬಳಕೆ ಮಾಡುವ ಘಟಕ ಸ್ಥಾಪಿಸಬೇಕಿದೆ. ಮೈಸೂರಿಗೆ ಐಟಿ ಪಾರ್ಕ್ ವಿಸ್ತರಣೆ ಆಗಬೇಕಿದೆ. ಮೈಸೂರು ಪೇಟ, ಮೈಸೂರು ರೇಷ್ಮೆ, ಶ್ರೀಗಂಧ ಮುಂತಾದ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಪ್ರಯತ್ನಿಸಿ. ಕೈಗಾರಿಕಾ ಪ್ರದೇಶದಲ್ಲಿ ಸಂಪರ್ಕ ವ್ಯವಸ್ಥೆ ಸುಧಾರಿಸಿ. ಮಂಗಳೂರು ಹಾಗೂ ಕೇರಳ ಬಂದರಿಗೆ ನೇರ ಸಂಪರ್ಕದ ಅಗತ್ಯವಿದೆ. ವಿಶೇಷವಾಗಿ ಜನಸಾಮಾನ್ಯರ ಕುರಿತು ಕಾಳಜಿ ಮುಂದುವರಿಸಿ.

- ಡಾ. ಕೆ.ಬಿ.ಲಿಂಗರಾಜು ಚೇಂಬರ್ ಆಫ್ ಕಾಮರ್ಸ್, ಮೈಸೂರು

ಬಲವಂತದ ಭೂಸ್ವಾಧೀನ ಆಲೋಚನೆ ಕೈಬಿಡಿ

ಮಾನ್ಯ ಮುಖ್ಯಮಂತ್ರಿಗಳೇ, ನೀವು ರೈತ ಕುಟುಂಬದ ಮಗ. ರೈತಾಪಿ ವರ್ಗದ ಕಷ್ಟಸುಖದ ಪರಿಚಯವೂ ಉಂಟು. ರಾಜ್ಯಕ್ಕೆ ಕೈಗಾರಿಕೆಗಳು ಅಗತ್ಯ ನಿಜ. ಇದರ ಜತೆಗೆ ಅತ್ಯಂತ ಪ್ರಮುಖವಾಗಿ ಕೃಷಿಯೂ ಅವಶ್ಯವೇ. ರಾಜ್ಯದಲ್ಲಿನ ಕೃಷಿ ಭೂಮಿಯ ಬಲವಂತದ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವ ಘೋಷಣೆ ಮಾಡಿ. ಇದರಿಂದ ರೈತರ ಬದುಕು ಹಸನಾಗುವ ಜತೆಗೆ ಆಹಾರ ಪದಾರ್ಥಗಳ ಲಭ್ಯತೆ ಹೆಚ್ಚಾಗಲಿದೆ. ಕೃಷಿಯನ್ನು ಉದ್ಯಮದಂತೆ ಕಂಡು ಅದರ ಮಾರುಕಟ್ಟೆ, ಕೃಷಿ ಉಪ ಉತ್ಪನ್ನಗಳು, ಅದರಲ್ಲಿ ಸವಾಲುಗಳ ನಿರ್ವಹಣೆ ಮಾಡಿದರೆ ದೊಡ್ಡ ಉದ್ಯಮವಾಗಿ ಕೃಷಿ ರೂಪುಗೊಳ್ಳುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳಿ.

- ಕಾರಹಳ್ಳಿ ಶ್ರೀನಿವಾಸ್ ಚನ್ನರಾಯಪಟ್ಟಣ

ಮಧ್ಯಕರ್ನಾಟಕಕ್ಕೆ ನೀರುಣಿಸಿ

ನೂತನ ಮುಖ್ಯಮಂತ್ರಿಗಳು ಮಧ್ಯ ಕರ್ನಾಟಕದ ನಾಲ್ಕು ಜಿಲ್ಲೆಗಳಾದ ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು, ದಾವಣಗೆರೆ ಜಿಲ್ಲೆಗಳ ಬರದ ಸೀಮೆಯ ರೈತರಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಮೊದಲ ಆದ್ಯತೆ ನೀಡಬೇಕು. ಅನುದಾನದ ವಿಷಯದಲ್ಲಿ ರಾಜ್ಯ-ಕೇಂದ್ರದ ನಡುವೆ ತಿಕ್ಕಾಟ ಮುಂದುವರಿಸುವುದರಿಂದ ಹೆಚ್ಚೇನೂ ಪ್ರಯೋಜನವಿಲ್ಲ. ಜತೆಗೆ ಈಗಿರುವ ಗ್ಯಾರಂಟಿ ಯೋಜನೆ ಸೇರಿದಂತೆ ಕಲ್ಯಾಣ ಯೋಜನೆಗಳ ಜಾರಿಯೊಂದಿಗೆ ಈ ಬೃಹತ್ ನೀರಾವರಿ ಯೋಜನೆಗೆ ಹಣ ಹೊಂದಿಸುವುದು ಯಾವುದೇ ಸರಕಾರಕ್ಕಾದರೂ ಸವಾಲು ಆಗಿದೆ. ಆದ್ದರಿಂದ ನೂತನ ಮುಖ್ಯಮಂತ್ರಿಗಳು ಯೋಜನಾ ವ್ಯಾಪ್ತಿಯ ರೈತರಿಂದ ಬಾಂಡ್‌ಗಳ ಮೂಲಕ ಹಣ ಸಂಗ್ರಹಿಸಿ, ಕನಿಷ್ಟ ಕೆರೆಗಳಿಗೆ ನೀರೊದಗಿಸಲು ಕ್ರಮ ಕೈಗೊಳ್ಳಬೇಕು.

-ಬಿ.ಎ. ಲಿಂಗಾರೆಡ್ಡಿ ಜಿಲ್ಲಾ ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಅಧ್ಯಕ್ಷರು, ಚಿತ್ರದುರ್ಗ

ತುಮಕೂರಿನ ವಸಂತನರಸಾಪುರವು ಕರ್ನಾಟಕದ ನೊಯ್ಡಾ ಆಗಬಲ್ಲದು



ನೂತನ ಮುಖ್ಯಮಂತ್ರಿ ಮನಸ್ಸು ಮಾಡಿ, ಅವರ ದೂರದೃಷ್ಟಿ ಚಿಂತನೆಗಳನ್ನು ಕಾರ್ಯರೂಪಕ್ಕೆ ತಂದರೆ ವಸಂತನರಸಾಪುರ ಕೈಗಾರಿಕಾ ಪ್ರದೇಶ ನೊಯ್ಡಾವನ್ನೇ ಮೀರಿಸಬಹುದು. ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ವೇಗ ನೀಡುವ ಜತೆಗೆ ತುಮಕೂರನ್ನು ಹೂಡಿಕೆ, ಉದ್ಯೋಗ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಪ್ರಮುಖ ಕೇಂದ್ರವನ್ನಾಗಿ ರೂಪಿಸಲು ಆದ್ಯತೆ ನೀಡುವಂತೆ ವಿನಂತಿಸುತ್ತೇನೆ.

- ಡಾ.ಸಿ.ವಿ. ಹರೀಶ್ ಅಧ್ಯಕ್ಷ, ವಸಂತನರಸಾಪುರ ಕೈಗಾರಿಕಾ ಪ್ರದೇಶ ಕೈಗಾರಿಕೆಗಳ ಒಕ್ಕೂಟ, ತುಮಕೂರು

ಯುವಕರ ವಲಸೆ ತಡೆಯಬಹುದೇ?

ಧಾರವಾಡ ಜಿಲ್ಲೆಯಲ್ಲಿ ಯುವಜನತೆಗೆ ಪೂರಕವಾದ ಐಟಿ- ಬಿಟಿ ಕೈಗಾರಿಕೆಗಳು ಹಾಗೂ ತಂತ್ರಜ್ಞಾನ ಆಧಾರಿತ ಉದ್ಯೋಗಾವಕಾಶಗಳು ಇಲ್ಲದಿರುವುದರಿಂದ ಇಲ್ಲಿನ ಯುವಕರು ಉದ್ಯೋಗಕ್ಕಾಗಿ ಬೇರೆ ಜಿಲ್ಲೆಗಳಿಗೆ ವಲಸೆ ಹೋಗುತ್ತಿದ್ದಾರೆ. ಹಾಗೆಯೇ, ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ತಜ್ಞವೈದ್ಯರು ಹಾಗೂ ಆಧುನಿಕ ಸೌಲಭ್ಯಗಳ ಕೊರತೆಯಿದ್ದು, ತುರ್ತು ಚಿಕಿತ್ಸೆಗಾಗಿ ಜನರು ಬೆಂಗಳೂರನ್ನು ಅವಲಂಬಿಸಬೇಕಾಗಿದೆ. ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕ ಭಾಗವು ಶಿಕ್ಷಣ, ಆರೋಗ್ಯ, ಸಾರಿಗೆ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ತೀವ್ರ ಹಿಂದುಳಿದಿದೆ ಎಂಬ ಭಾವನೆ ಜನತೆಯಲ್ಲಿದೆ. ಈ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಬೇಕಿದೆ.

- ಬಸವರಾಜ ಎಚ್. ಅಪ್ಪಣ್ಣವರ ಬಿದರಗಡ್ಡಿ, ಕಲಘಟಗಿ

ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಕಲ್ಪಿಸಿ

ರಾಜ್ಯದ ವಿವಿಧ ಸರಕಾರಿ ಪದವಿ ಕಾಲೇಜುಗಳಲ್ಲಿ ಕಳೆದ 10, 15 ಮತ್ತು 20 ವರ್ಷಗಳಿಂದ ಯುಜಿಸಿ ಅರ್ಹತೆಗಳನ್ನು ಹೊಂದಿದ್ದರೂ ಕೇವಲ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಸಾವಿರಾರು ಶಿಕ್ಷಕರು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಸೇವಾ ಭದ್ರತೆ ಇಲ್ಲದೆ ಅವರ ಬದುಕು ನಿರಂತರ ಅನಿಶ್ಚಿತತೆಯಿಂದ ಕೂಡಿದೆ. ಬಹಳ ವರ್ಷಗಳಿಂದ ಶೈಕ್ಷಣಿಕ ಸೇವೆ ಸಲ್ಲಿಸುತ್ತಾ ನೊಂದಿರುವ ಇವರ ಬದುಕಿಗೆ ಕಾಯಂ ಸೇವಾ ಭದ್ರತೆಯನ್ನು ನೀಡುವ ಮೂಲಕ ಮುಕ್ತಿ ನೀಡಬೇಕು. ಈ ಸಮಸ್ಯೆಯನ್ನು ಕೇವಲ ತಾವು ಮಾತ್ರ ಬಗೆಹರಿಸಬಲ್ಲಿರಿ ಎಂಬ ಬಲವಾದ ಭರವಸೆ ನಮ್ಮದಾಗಿದೆ.

- ಶಿವಕುಮಾರ ಉಳವಿ ಸೊರಬ (ನೊಂದ ಉಪನ್ಯಾಸಕರ ಪರವಾಗಿ)

ಆಡಳಿತದಲ್ಲಿ ಪಾರದರ್ಶಕತೆ ಅಗತ್ಯ



ನೂತನ ಮುಖ್ಯಮಂತ್ರಿ ಎಲ್ಲ ಸಮುದಾಯಗಳನ್ನೂ ಸಮಾನವಾಗಿ ಪರಿಗಣಿಸಿ, ಸಮಾಜವಾದಿ ಹಾಗೂ ಸಮಾಜಮುಖಿ ದೃಷ್ಟಿಕೋನದಿಂದ ಆಡಳಿತ ನಡೆಸಬೇಕು. ಧರ್ಮ, ಕೋಮು ಹಾಗೂ ಸ್ವಾಮೀಜಿಗಳ ಪ್ರಭಾವದಿಂದ ಮುಕ್ತವಾದ ಆಡಳಿತ ನಡೆಸುವ ಮೂಲಕ ರಾಜ್ಯಕ್ಕೆ ದಕ್ಷ ಮತ್ತು ಪಾರದರ್ಶಕ ನಾಯಕತ್ವ ನೀಡಬೇಕು. ಜಾತ್ಯತೀತ ತತ್ವವನ್ನು ಮುಂದೆಯೂ ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಿಮ್ಮ ಮೇಲಿದೆ ಎಂಬುದನ್ನು ಮರೆಯಬಾರದು. ಸ್ವಾಮೀಜಿಗಳನ್ನು ನಂಬುವುದು ವೈಯಕ್ತಿಕ ವಿಚಾರವಾಗಿದ್ದು, ಆಡಳಿತದಲ್ಲಿ ಅದನ್ನು ಮಿಶ್ರ ಮಾಡಬಾರದು. ರಾಜ್ಯದಲ್ಲಿ ವಿವಿಧ ಸಮುದಾಯಗಳ ಜನರು ವಾಸಿಸುತ್ತಿರುವುದರಿಂದ ಎಲ್ಲರಿಗೂ ಸಮಾನ ಆದ್ಯತೆ ನೀಡಬೇಕು.

- ಡಿ.ಎಸ್.ಚೌಗಲೆ ನಾಟಕಾರರು, ಬೆಳಗಾವಿ

ವಸತಿ ರಹಿತ ಬಡವರಿಗೆ ಮನೆಗಳನ್ನು ಹಂಚಿಕೆ ಮಾಡಿ

ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಶಿರೋಳ ಪಟ್ಟಣ ವಾರ್ಡ್ ನಂ.12ರಲ್ಲಿ ಸಾರ್ವಜನಿಕ ಮತ್ತು ಬಡವರ ವಸತಿ ಯೋಜನೆಗಾಗಿ 2017ರಲ್ಲೇ ಸುಮಾರು 27 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ, ಇಲ್ಲಿಯವರೆಗೆ ಅರ್ಹ ಬಡ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡದೆ ವಿಳಂಬ ಮಾಡಲಾಗುತ್ತಿದೆ. ಸಂಬಂಧಪಟ್ಟ ಪುರಸಭೆಯು ದಿನಕ್ಕೊಂದು ಕಾರಣ ನೀಡುತ್ತಾ ಕಾಲಹರಣ ಮಾಡುತ್ತಿರುವುದರಿಂದ, ವಸತಿ ರಹಿತ ಬಡವರು ಇಂದಿಗೂ ಬೀದಿಯಲ್ಲೇ ಜೀವನ ಸಾಗಿಸುವಂತಾಗಿದೆ. ಇತ್ತೀಚೆಗೆ ಈ ಜಾಗವು ಅಕ್ರಮ ಚಟುವಟಿಕೆಗಳ ಮತ್ತು ಕುಡುಕರ ಅಡ್ಡೆಯಾಗಿ ಮಾರ್ಪಟ್ಟಿದೆ. ಈ ಬಗ್ಗೆ ಈಗಾಗಲೇ ಹಲವು ಬಾರಿ ಪತ್ರದ ಮೂಲಕ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಸಮಾಜದ ಹಿತದೃಷ್ಟಿಯಿಂದ ತಾವು ಈ ವಿಷಯದಲ್ಲಿ ತಕ್ಷಣ ಹಸ್ತಕ್ಷೇಪ ಮಾಡಿ, ಅರ್ಹ ಬಡವರಿಗೆ ಮನೆಗಳನ್ನು ಹಂಚಬೇಕಾಗಿ ಕೋರಿಕೆ.

- ಅಂದಪ್ಪ ದಂಡಿನ ಶಿರೋಳ

ಗಾಣಗಾಪುರ ಧಾರ್ಮಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ

ಕಲಬುರಗಿ ಜಿಲ್ಲೆ ಅಫಜಲಪುರ ತಾಲೂಕಿನ ಗಾಣಗಾಪುರವು ದೇಶದ ಪ್ರಮುಖ ದತ್ತಾತ್ರೇಯ ಧಾರ್ಮಿಕ ಕೇಂದ್ರ. ಪ್ರತಿವರ್ಷ ಲಕ್ಷಾಂತರ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಆದರೆ, ಇಲ್ಲಿ ಭಕ್ತರಿಗೆ ಅಗತ್ಯವಿರುವ ರಸ್ತೆ, ಸಮರ್ಪಕ ಕುಡಿಯುವ ನೀರು, ಸ್ವಚ್ಛತೆ, ಒಳಚರಂಡಿ ಮತ್ತು ಪಾರ್ಕಿಂಗ್ ವ್ಯವಸ್ಥೆಯಂಥ ಕನಿಷ್ಠ ಮೂಲಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ಮೂಲಸೌಕರ್ಯಗಳ ಕೊರತೆಯಿಂದಾಗಿ ಈ ಭಾಗದಲ್ಲಿ ಪ್ರವಾಸೋದ್ಯಮ ಆಧಾರಿತ ಉದ್ಯೋಗಾವಕಾಶಗಳು ಸೃಷ್ಟಿಯಾಗದೆ ಸ್ಥಳೀಯ ಯುವಕರು ವಲಸೆ ಹೋಗುತ್ತಿದ್ದಾರೆ. ನೂತನ ಸರಕಾರದ ಅವಧಿಯಲ್ಲಾದರೂ ಈ ಪವಿತ್ರ ಕ್ಷೇತ್ರದ ಕಡೆಗೆ ವಿಶೇಷ ನಿಗಾವಹಿಸಿ.

- ಇಮ್ರಾನ್ ಮನಿಯಾರ ಗಾಣಗಾಪುರ

ಧಾರ್ಮಿಕ ಹಸ್ತಕ್ಷೇಪಕ್ಕೆ ಅವಕಾಶ ಬೇಡ

ಧಾರ್ಮಿಕ ಕ್ಷೇತ್ರದ ವಿಧಿ ವಿಧಾನಗಳಲ್ಲಿ ಸರಕಾರ ಅನಗತ್ಯ ಹಸ್ತಕ್ಷೇಪ ಮಾಡಬಾರದು. ಪ್ರಮುಖವಾಗಿ ರಾಜ್ಯದಲ್ಲಿ ಅವಶ್ಯವಿರುವ ಹೊಸ ಜಿಲ್ಲೆಗಳ ರಚನೆ ಮಾಡಬೇಕು. ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಅನುದಾನ ಕೊಡಬೇಕು. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಆದ್ಯತೆ ನೀಡಿ. 2022ರಿಂದ ಸ್ಥಗಿತಗೊಂಡ ಚಿತ್ರರಂಗದ ಪ್ರಶಸ್ತಿಗಳು ಹಾಗೂ ಚಲನಚಿತ್ರಗಳ ಸಹಾಯಧನಕ್ಕೆ ಆಯಾ ವರ್ಷವೇ ಅರ್ಜಿ ಸಲ್ಲಿಸುವ ಕ್ರಮ ಮರು ಚಾಲನೆಗೊಳ್ಳಲಿ.

-ಮಹಾಂತೇಶ ಮಲ್ಲನಗೌಡರ ಹಿರಿಯ ಸಾಹಿತಿ, ಕೊಪ್ಪಳ

ಸಾರಿಗೆ ನೌಕರರಿಗೆ ವೇತನ ಅಸಮಾನತೆ ಸರಿಪಡಿಸಿ

ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಸಾರಿಗೆ ಸಂಸ್ಥೆಯ ನೌಕರರಿಗೂ ಸರಕಾರಿ ನೌಕರರ ಸರಿಸಮಾನ ವೇತನ ನೀಡಬೇಕೆಂದು ಕೋರುತ್ತೇನೆ. ಸಾರಿಗೆ ನೌಕರರ ದೀರ್ಘಕಾಲದ ಈ ಬೇಡಿಕೆಯನ್ನು ಈಡೇರಿಸುವ ಭರವಸೆ ನೀಡಿ ಅಧಿಕಾರಕ್ಕೆ ಬಂದ ನಂತರವೂ ವೇತನ ಪಾವತಿಯಲ್ಲಿ ತಾರತಮ್ಯ ಎಸಗುತ್ತಿರುವುದು ನೌಕರ ವಲಯದಲ್ಲಿ ತೀವ್ರ ಬೇಸರ ಮೂಡಿಸಿದೆ. ಈ ಅಸಮಾನತೆ ಸರಿಪಡಿಸಿ.

- ಪವಾಡಪ್ಪ, ನೊಂದ ಚಾಲಕ ಬೀದರ್

ಮಂಡ್ಯದ ಹೈಕ್ಳಿಗೆ ಕೆಲಸಕ್ಕಾಗಿ ಅಲೆಯುವುದು ತಪ್ಪಿಸಿ

ಮಂಡ್ಯ ಜಿಲ್ಲೆಯು ಮೈಸೂರು ಮತ್ತು ಬೆಂಗಳೂರು ನಗರಗಳ ಮಧ್ಯದಲ್ಲಿದ್ದರೂ ಅಭಿವೃದ್ಧಿಯ ವಿಷಯದಲ್ಲಿ ತೀವ್ರ ಹಿನ್ನಡೆ ಅನುಭವಿಸುತ್ತಿದೆ. ಇಲ್ಲಿನ ಯುವಜನತೆ ಉದ್ಯೋಗಕ್ಕಾಗಿ ಬೆಂಗಳೂರಿಗೂ, ಸುಧಾರಿತ ಆರೋಗ್ಯ ಸೇವೆಗಳಿಗಾಗಿ ಮೈಸೂರಿಗೂ ಅಲೆಯುವ ಪರಿಸ್ಥಿತಿ ಇದೆ. ಕೇವಲ ಚುನಾವಣಾ ರಾಜಕಾರಣಕ್ಕೆ ಮಾತ್ರ ಮಂಡ್ಯವನ್ನು ಸೀಮಿತಗೊಳಿಸದೆ, ನಗರವನ್ನು 'ಟೈರ್-2' ನಗರವನ್ನಾಗಿ ಪರಿಗಣಿಸಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಬೇಕಿದೆ. ಸ್ಥಳೀಯವಾಗಿಯೇ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಇಲ್ಲಿನ ಯುವಕರಿಗೆ ಸ್ವಾವಲಂಬನೆಯ ಶಕ್ತಿ ನೀಡಿ.

- ಅಂಕಿತ್ ಸಿ. ಮಂಡ್ಯ

ಸರಕಾರಿ ಶಾಲೆ, ಆಸ್ಪತ್ರೆಗಳಿಗೆ ಮರುಜೀವ ನೀಡಿ

ರಾಜ್ಯದಲ್ಲಿನ ಬಡ ಮತ್ತು ಮಧ್ಯಮ ವರ್ಗದ ಜನರ ಹಿತದೃಷ್ಟಿಯಿಂದ ಸರಕಾರಿ ಶಾಲೆಗಳನ್ನು ಸಂಪೂರ್ಣವಾಗಿ ಸಬಲೀಕರಣಗೊಳಿಸುವುದು ಅತ್ಯಗತ್ಯ. ಅದರೊಂದಿಗೆ ಎಲ್ಲಾ ಸರಕಾರಿ ಆಸ್ಪತ್ರೆಗಳಿಗೂ ಹೈಟೆಕ್ ಮತ್ತು ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು. ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರಕಾರ ಕೈಗೆತ್ತಿಕೊಳ್ಳುವ ಇಂಥ ಜನಪರ ಕಾಮಗಾರಿಗಳನ್ನು ಯಾವುದೇ ವಿಳಂಬವಿಲ್ಲದೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸಿಕೊಳ್ಳುವೆ.

- ಮಮತಾ ಸಿದ್ದನಗೌಡ ಎಂ. ಸಾಗರ

ಗೋಹತ್ಯೆ ತಡೆ ಕುರಿತು ಕಟ್ಟುನಿಟ್ಟಿನ ಕಾನೂನು ಜಾರಿಮಾಡಿ

ನಮ್ಮ ಸಂಸ್ಕೃತಿಯಲ್ಲಿ ಪವಿತ್ರ ಸ್ಥಾನ ಹೊಂದಿರುವ ಗೋವುಗಳ ರಕ್ಷಣೆ ಅತ್ಯಗತ್ಯವಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕಾನೂನುಬಾಹಿರ ಗೋಹತ್ಯೆ ಮತ್ತು ಅಕ್ರಮ ದನಗಳ ಸಾಗಣಿಕೆ ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿರುವುದು ಸಾರ್ವಜನಿಕರಲ್ಲಿ ಕಳವಳ ಮೂಡಿಸಿದೆ. ರಾಜ್ಯದಲ್ಲಿ ಗೋಹತ್ಯೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಕಠಿಣ ಕಾನೂನಿನ ಅಗತ್ಯವಿದೆ. ಈ ನಿಟ್ಟಿನಲ್ಲಿ ಅಕ್ರಮ ಗೋಹತ್ಯೆ ಮಾಡುವವರಿಗೆ ಕಟ್ಟುನಿಟ್ಟಿನ ಕಠಿಣ ಸಂದೇಶ ರವಾನಿಸಲು ಜೀವಾವಧಿ ಜೈಲು ಶಿಕ್ಷೆ ವಿಧಿಸಬೇಕು ಮತ್ತು ಅಕ್ರಮ ಸಾಗಣೆಗೆ ಬಳಸುವ ವಾಹನಗಳನ್ನು ತಕ್ಷಣವೇ ಮುಟ್ಟುಗೋಲು ಹಾಕಿಕೊಳ್ಳಬೇಕು. ಗಡಿಭಾಗಗಳಲ್ಲಿ ಪೊಲೀಸ್ ತಪಾಸಣೆಯನ್ನು ತೀವ್ರಗೊಳಿಸಿ ಗೋಸಂಪತ್ತನ್ನು ರಕ್ಷಿಸಲು ತಾವು ವೈಯಕ್ತಿಕವಾಗಿ ಆಸಕ್ತಿ ವಹಿಸಬೇಕಾಗಿ ಕೇಳಿಕೊಳ್ಳುತ್ತೇವೆ.

-ಗೋ ಹಿತರಕ್ಷಣಾ ವೇದಿಕೆ ಹುಕ್ಕೇರಿ ತಾಲೂಕು

ಹಳ್ಳಿಗಳಲ್ಲಿ ಮದ್ಯ, ಗಾಂಜಾ ಮಾರಾಟ ನಿಷೇಧಿಸಿ

ಮೈಸೂರು ಜಿಲ್ಲೆಯ ವಿವಿಧ ಹಳ್ಳಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಅಕ್ರಮ ಮದ್ಯ ಮಾರಾಟ ಮತ್ತು ಗಾಂಜಾ ಜಾಲವು ವ್ಯಾಪಕವಾಗಿ ಹರಡುತ್ತಿದೆ. ಇದರಿಂದಾಗಿ ಗ್ರಾಮೀಣ ಭಾಗದ ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಜನತೆ ತೀವ್ರವಾಗಿ ವ್ಯಸನಕ್ಕೆ ತುತ್ತಾಗಿ ದಾರಿ ತಪ್ಪುತ್ತಿದ್ದಾರೆ. ಇದು ಅನೇಕ ಕುಟುಂಬಗಳ ನೆಮ್ಮದಿ ಕೆಡಿಸಿದೆ. ಯುವ ಪೀಳಿಗೆಯನ್ನು ಸನ್ಮಾರ್ಗಕ್ಕೆ ತರಲು ಮತ್ತು ಗ್ರಾಮೀಣ ಭಾಗದ ಶಾಂತಿ-ಸುವ್ಯವಸ್ಥೆಯನ್ನು ಕಾಪಾಡಲು ಸರಕಾರವು ತಕ್ಷಣವೇ ಹಳ್ಳಿಗಳಲ್ಲಿನ ಮದ್ಯ ಮಾರಾಟ ಹಾಗೂ ಗಾಂಜಾ ಜಾಲದ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಿ ನಿಷೇಧ ಹೇರಬೇಕಾಗಿ ರೈತ ಸಂಘಟನೆಯ ಪರವಾಗಿ ಮನವಿ ಮಾಡುತ್ತೇನೆ.

-ಚಾಮರಾಜು ಮಂಡಕಳ್ಳಿ ಮೈಸೂರು

ಸಕಾಲಕ್ಕೆ ಚಿಕಿತ್ಸೆ ಸಿಗದೆ ಪರದಾಡುತ್ತಿದ್ದೇವೆ...

ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ಕಟ್ಟಡಗಳಿದ್ದರೂ ನುರಿತ ತಜ್ಞವೈದ್ಯರ ಹಾಗೂ ಆಧುನಿಕ ವೈದ್ಯಕೀಯ ಪರಿಕರಗಳ ತೀವ್ರ ಕೊರತೆ ಇದೆ. ಇದರಿಂದಾಗಿ ತುರ್ತು ಮತ್ತು ಗಂಭೀರ ಕಾಯಿಲೆಗಳ ಚಿಕಿತ್ಸೆಗಾಗಿ ನಾವು ಮಂಗಳೂರು ಅಥವಾ ಬೆಂಗಳೂರಿಗೆ ಓಡುವುದು ಇಂದಿಗೂ ತಪ್ಪಿಲ್ಲ. ಸ್ಥಳೀಯವಾಗಿ ಸಕಾಲಕ್ಕೆ ಚಿಕಿತ್ಸೆ ಸಿಗದೆ ರೋಗಿಗಳು ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿ ಇದೆ. ಸರಕಾರವು ಜನಪ್ರಿಯ ಯೋಜನೆಗಳಿಗಿಂತ ಆರೋಗ್ಯ ಕ್ಷೇತ್ರಕ್ಕೆ ಮೊದಲ ಆದ್ಯತೆ ನೀಡಬೇಕು. ಎಲ್ಲಾ ವರ್ಗದ ಜನರಿಗೂ ಗಂಭೀರ ಕಾಯಿಲೆಗಳ ತಪಾಸಣೆ, ಶಸ್ತ್ರಚಿಕಿತ್ಸೆ ಹಾಗೂ ಔಷಧಿಗಳನ್ನು ಸಂಪೂರ್ಣ ಉಚಿತವಾಗಿ ರಾಜ್ಯಾದ್ಯಂತ ಏಕರೂಪದಲ್ಲಿ ಸಿಗುವಂತೆ ಮಾಡಬೇಕು. ತಮ್ಮ ಅಧಿಕಾರಾವಧಿಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತನ್ನಿ.

- ರಾಘವೇಂದ್ರ ಡಿ. ಶೇಟ್ ಶಿರಸಿ

ಪ್ರಾರ್ಥನೆ ಫಲಿಸಿದ ಹೊತ್ತು, ವಿಶಿಷ್ಟ ದಾಖಲೆಯಾದ ಪದಗ್ರಹಣ

■ **ಶಶಿಧರ ಹೆಗಡೆ**

''ಕುಶನೆ ಕೇಳಿತ್ತ ಆಯೋಧ್ಯಾಪುರದ ಸಂಭ್ರಮವ. ವಶನಲ್ಲ ಪೇಳಿ ತುದಿಗಾಣಿಸುವುದಿಂತೆನಗೆ. ವಸುಧೆ ಹಿಗ್ಗಿದಳು ಕೆಂಧೂಳೆದ್ದುನಭವಂ ಮುಸುಕೆ,'' - ರಾಮನ ಪಟ್ಟಾಭಿಷೇಕಕ್ಕೆ ಆಯೋಧ್ಯೆ ಸಿದ್ಧವಾದದ್ದು ಮತ್ತು ಅಲ್ಲಿ ಒಡಮೂಡಿದ ವಾತಾವರಣದ ಬಗ್ಗೆ ಕವಿ ಹೀಗೆ ವರ್ಣಿಸುತ್ತಾನೆ. ಅಂದರೆ ರಾಮನ ಪಟ್ಟಬಂಧ ಮಹೋತ್ಸವವನ್ನು ವರುಷಗಳಿಂದಲೂ ನಿರೀಕ್ಷಿಸುತ್ತಿದ್ದ ಆಯೋಧ್ಯಾ ನಗರಿ ಅದೆಷ್ಟು ಸಂಭ್ರಮ ಪಟ್ಟಿತ್ತು ಎನ್ನುವುದನ್ನು ಈ ಪದ್ಯದ ಸಾಲುಗಳಿಂದ ಅರ್ಥೈಸಿಕೊಳ್ಳಬಹುದು.

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭ ಅದೆಷ್ಟು ಕಳೆಗಟ್ಟಿತ್ತು ಎಂದರೆ ಕಾಂಗ್ರೆಸಿಗರ ಹರ್ಷೋಲ್ಲಾಸವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವೇ ಇಲ್ಲ. ಡಿ.ಕೆ.ಶಿವಕುಮಾರ್ ಇಂದಲ್ಲ ನಾಳೆ ಸಿಎಂ ಸ್ಥಾನಕ್ಕೇರುತ್ತಾರೆ ಎಂಬ ನಿರೀಕ್ಷೆ ಜನರಿಗೂ ಇತ್ತು. ಕಾಂಗ್ರೆಸ್ ಪಾಲಿನ ಟ್ರಬಲ್ ಶೂಟರ್, ಆಪತ್ಬಾಂಧವರಾದ ಡಿಕೆಶಿಯವರ ಸಂಘಟನಾ ಚಾತುರ್ಯಕ್ಕೆ ಬೆರಗಾಗದವರೇ ಇಲ್ಲ. ಡಿಕೆಶಿ ಓರ್ವ ಉತ್ತಮ ಸಂಘಟಕ ಎಂಬುದನ್ನು ಪ್ರತಿಪಕ್ಷದವರೂ ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ.

ಸ್ವಸಾಮರ್ಥ್ಯದೊಂದಿಗೆ ದೇವರ ಮೇಲೂ ಭಾರ ಹಾಕುವವರು ಡಿಕೆಶಿ. 'ನ ಭೂತೋ ನ ಭವಿಷ್ಯತಿ' ಎಂಬಂತೆ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ತೆಗೆದುಕೊಳ್ಳಬೇಕು ಎಂಬುದು ಡಿಕೆಶಿಯವರ ಜೀವಮಾನದ ಕನಸಾಗಿತ್ತು. ವಿಧಾನಸೌಧದ ಮೆಟ್ಟಿಲುಗಳ ಮೇಲಿನ ಭವ್ಯ ವೇದಿಕೆಯಲ್ಲೇ ಈ ಸಮಾರಂಭ ನಡೆಯಬೇಕು ಎಂಬುದೂ ಅವರ ಇಚ್ಛೆಯಾಗಿತ್ತು. ನಾನಾ ಕಾರಣಗಳಿಂದ ಇದು ಸಾಧ್ಯವಾಗಲಿಲ್ಲ. ಆದರೆ, ಲೋಕಭವನದಲ್ಲಿ ನಡೆದ ಸಮಾರಂಭವೇ ವೈಭವದ ಮೆರುಗನ್ನು ಪಡೆದುಕೊಳ್ಳುವುದರೊಂದಿಗೆ ಅತೀವ ಹರುಷದಾಯಕ ವಾತಾವರಣವನ್ನು ನಿರ್ಮಿಸಿತ್ತು. ಲೋಕಭವನದ ಆವರಣದ ಗಾಜಿನಮನೆಯ ಸೀಮಿತ ಸ್ಥಳದಲ್ಲೂ ಇಂಥದೊಂದು ಸಮಾರಂಭ ಆಯೋಜಿಸಲು ಸಾಧ್ಯವೆಂಬುದಕ್ಕೆ ಡಿಕೆಶಿ ಪ್ರಮಾಣ ವಚನ ಸಾಕ್ಷಿಯಾಯಿತು.

ಸಮಾರಂಭ ಒಂದೆಡೆಯಾದರೆ ಇಡೀ ಕಾಂಗ್ರೆಸ್ ಪಕ್ಷ ಡಿಕೆಶಿ ಪದಗ್ರಹಣವನ್ನು ತನ್ನ ಮನೆಯ ಹಬ್ಬದಂತೆ ಆಚರಿಸಿದ್ದು ವಿಶೇಷ. ತಮ್ಮ ನಾಯಕ ಉನ್ನತ ಸ್ಥಾನಕ್ಕೇರಿದಾಗ ಅಭಿಮಾನಿಗಳು, ಬೆಂಬಲಿಗರು ಪಟಾಕಿ ಸಿಡಿಸುವುದು, ಜೈಕಾರ ಹಾಕುವುದು ಸರ್ವೇಸಾಮಾನ್ಯ. ಡಿಕೆಶಿ ಅಧಿಕಾರ ಪರ್ವದ ನಿರ್ಣಾಯಕ ಘಟ್ಟಕ್ಕೆ ಬಂದಿರುವ ಈ ಹೊತ್ತಿನಲ್ಲಿ ಮೇಲ್ಪದರದ ಜಯಘೋಷಗಳ ಹೊರತಾಗಿಯೂ ಕಾಂಗ್ರೆಸ್‌ನಲ್ಲಿ ಅಕ್ಷರಶಃ ವಿದ್ಯುತ್ ಕಾಂತೀಯ ಶಕ್ತಿ ಪ್ರವಹಿಸಿದೆ. ಯಾವುದೇ ರಾಜಕೀಯ ಪಕ್ಷಗಳಲ್ಲಿ ನಾಯಕತ್ವ ಕೇಂದ್ರಿತ ಗುಂಪುಗಾರಿಕೆ ಸಹಜ. ಒಬ್ಬರಿಗೆ ಸ್ಥಾನಮಾನ ದೊರಕಿದಾಗ ಇನ್ನೊಬ್ಬರಿಗೆ ನಿರಾಸೆ. ಕಾಂಗ್ರೆಸ್‌ನಲ್ಲೂ ಗುಂಪುಗಾರಿಕೆಗಳಿವೆ. ಆದರೆ, ಇಂಥದೆಲ್ಲವನ್ನೂ ಮರೆಸಿ ಅದೇನೋ ಭವಿಷ್ಯ ನಿರ್ಮಾಣದ ಮುನ್ಸೂಚನೆಯ ಅನುಭೂತಿಗೆ ಕಾಂಗ್ರೆಸ್ ಕಾರ್ಯಪಡೆ ಒಳಗಾದದ್ದು ಸುಳ್ಳಲ್ಲ.

ಈ ದೃಷ್ಟಿಯಿಂದ ಕಾಂಗ್ರೆಸಿಗರ ಪಾಲಿಗೆ ಡಿಕೆಶಿ ಪ್ರಮಾಣ ವಚನವೆಂದರೆ, ವಸುಧೆ ಹಿಗ್ಗಿದಂತೆ. ಈ ಕಾರ್ಯಕ್ರಮದ ಕಿಕ್ಕಿರಿದ ಸಂದಣಿಯಿಂದ ಎದ್ದ ಧೂಳು ಆಕಾಶದೆತ್ತರಕ್ಕೆ ಚಿಮ್ಮಿತು ಎಂದು ಉದ್ಗಾರ ತೆಗೆಯಬಹುದು!

ಸದಾಶಯದ ಹಾದಿ: ಪ್ರಮಾಣ ವಚನಕ್ಕೂ ಮುನ್ನ ಡಿ.ಕೆ.ಶಿವಕುಮಾರ್ ಪ್ರತಿಪಕ್ಷಗಳ ಹಿರಿಯ ನಾಯಕರ ನಿವಾಸಕ್ಕೆ ತೆರಳಿ ಆಶೀರ್ವಾದ ಪಡೆದುಕೊಂಡಿದ್ದಾರೆ ಇದೊಂದು ಸದಾಶಯದ ಹಾದಿ. ನಿಕಟಪೂರ್ವ ಸಿಎಂ ಸಿದ್ದರಾಮಯ್ಯ ಅವರನ್ನೂ ಗೌರವದಿಂದ ನಡೆಸಿಕೊಂಡಿದ್ದಾರೆ. ಇವೆಲ್ಲವೂ ಮೇಲ್ಪಂಕ್ತಿಯ ನಡೆಯಾಗಿ ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತವೆ.

2018ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲೇ ಡಿ.ಕೆ.ಶಿವಕುಮಾರ್ ಕೆಪಿಸಿಸಿ ನೇತೃತ್ವ ವಹಿಸಿಕೊಳ್ಳುವ ನಿರೀಕ್ಷೆಯಿತ್ತು. ಕಾರಣಾಂತರಗಳಿಂದ ಡಿಕೆಶಿ ಅವರಿಗೆ ಈ ಹೊಣೆ ಸಿಕ್ಕಿರಲಿಲ್ಲ. ಆಗ ಮಾಜಿ ಸಚಿವ ಎಚ್.ವಿಶ್ವನಾಥ್, ''ಡಿಕೆಗೆ ಅಧ್ಯಕ್ಷ ಪಟ್ಟ ನೀಡಿದ್ದರೆ ಕಾಂಗ್ರೆಸ್ ಥ್ರಿಲ್‌ಗೊಳಗಾಗುತ್ತಿತ್ತು. ಪಕ್ಷ ರೀಚಾರ್ಜ್ ಆಗುತ್ತಿತ್ತು,'' ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದರು. ಆವಾಗ ಜೆಡಿಎಸ್‌ನಲ್ಲಿದ್ದ ವಿಶ್ವನಾಥ್ ತಮ್ಮ ಹಳೆಯ ಸಹೋದ್ಯೋಗಿ ಡಿಕೆಶಿ ಸಾಮರ್ಥ್ಯದ ಬಗ್ಗೆ ಸತ್ಯವನ್ನೇ ನುಡಿದಿದ್ದರು. 2019ರ ಲೋಕಸಭೆ ಚುನಾವಣೆ ಬಳಿಕ ಡಿ.ಕೆ. ಶಿವಕುಮಾರ್ ಕೆಪಿಸಿಸಿಯ ಸಾರಥ್ಯ ವಹಿಸಿಕೊಂಡಾಗ ಪಕ್ಷದಲ್ಲಿ ಉತ್ಸಾಹ ಕಾಣಿಸಿಕೊಂಡಿತ್ತು. ಅದನ್ನು 2023ರ ವಿಧಾನಸಭೆ ಚುನಾವಣೆ ವರೆಗೂ ಕಾಯ್ದುಕೊಂಡು ಬಂದಿದ್ದ ಅವರು ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಆದರೆ, ಸಿಎಂ ಪಟ್ಟ ಮಾತ್ರ ಸಿಕ್ಕಿರಲಿಲ್ಲ. ಬಹುಕಾಲದ ಪ್ರಾರ್ಥನೆ ಫಲಿಸಿತು ಎಂಬಂತೆ ಡಿಕೆಶಿ ಪಟ್ಟವೇರಿದ್ದರಿಂದ ಕಾಂಗ್ರೆಸ್ ಕುಟುಂಬ ಖಂಡಿತವಾಯೂ ಥ್ರಿಲ್ ಆಗಿದೆ. ರಾಜ್ಯದ ಉದ್ದಗಲಕ್ಕೂ ವ್ಯಕ್ತವಾದ ಸ್ಪಂದನೆಯೇ ಇದನ್ನು ಸಾಕ್ಷೀಕರಿಸಿದೆ.

ಸರ್ವಧರ್ಮ ಸಮನ್ವಯ: ಬಹು ಮುಖ್ಯವಾಗಿ ಡಿಕೆಶಿ ಪದಗ್ರಹಣ ಸಮಾರಂಭ ಸರ್ವಧರ್ಮ ಸಮನ್ವಯದ ಸಂದೇಶ ಸಾರಿತು. ಡಿ.ಕೆ.ಶಿವಕುಮಾರ್ ಅವರಿಗೆ ಸಾಧು, ಸಂತರೆಂದರೆ ಗೌರವ. ದೈವಿಕ ನಂಬಿಕೆಗಳಲ್ಲಿ ಇವರನ್ನು ಮೀರಿಸುವುದು ಕಷ್ಟ. ಸನಾತನ ಹಿಂದೂ ಸಂಸ್ಕೃತಿಯನ್ನು ಶ್ರದ್ಧಾ, ಭಕ್ತಿಯಿಂದ ಅನುಸರಿಸುವ ಡಿಕೆಶಿ ಅದೇ ಕಾಲಕ್ಕೆ ಇತರ ಧರ್ಮಗಳನ್ನೂ ಆದರದಿಂದ ಕಾಣಬಲ್ಲರು. ಈ ಬಗೆಯ ಒಳಗೊಳ್ಳುವಿಕೆಯ ದ್ಯೋತಕವಾಗಿ ಸರ್ವಧರ್ಮಗಳ ಧಾರ್ಮಿಕ ಮುಖಂಡರು ಡಿಕೆಶಿ ಪ್ರಮಾಣ ವಚನದಲ್ಲಿ ಉಪಸ್ಥಿತರಿದ್ದು ಹಾರೈಸಿದ್ದು ಅರ್ಥಪೂರ್ಣ.

ರಾಮನ ಪಟ್ಟಾಭಿಷೇಕದ ಬಣ್ಣನೆಯಲ್ಲಿ ಕವಿ ಮತ್ತೊಂದು ಹೆಜ್ಜೆ ಮುಂದೆ ಹೋಗಿ, ಸುರರು ಆಕಾಶದಿಂದ ದೇವದುಂದುಭಿ ಮೊಳಗಿಸಿದರು ಎನ್ನುತ್ತಾನೆ. ಒಟ್ಟಿನಲ್ಲಿ ಡಿಕೆಶಿ ಪದಗ್ರಹಣ ಇತ್ತೀಚಿನ ವರ್ಷಗಳಲ್ಲೇ ಬಹಳ ವಿಶಿಷ್ಟ ಎನಿಸಿಕೊಂಡಿತು. ಪಕ್ಷ ರಾಜಕಾರಣದ ನೆಲೆಯಲ್ಲಿ ಕಾಂಗ್ರೆಸ್‌ಗೆ ಶಕ್ತಿ ಬಂತೆಂಬ ಭಾವ. ಡಿಕೆಶಿ ಸಾಮರ್ಥ್ಯದ ಅರಿವಿರುವ ವಿರೋಧ ಪಕ್ಷದವರೂ ಕಾಯ್ದು ನೋಡುವ ಲೆಕ್ಕಾಚಾರದಲ್ಲಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಜನತೆಗೂ ಡಿಕೆಶಿ ಬಗ್ಗೆ ನಿರೀಕ್ಷೆ. ಅದಕ್ಕೆ ಕಳಶವಿಟ್ಟಂತೆ ಎಲ್ಲರೊಳಗೊಂದಾಗಿ ಹೋಗುವ ಭರವಸೆ ನೀಡಿರುವ ಡಿ.ಕೆ. ಶಿವಕುಮಾರ್. ರಾಜಕಾರಣಿಗಳನ್ನು ಪುರಾಣದ ಪಾತ್ರಗಳಿಗೆ ಹೋಲಿಸಲು ಸಾಧ್ಯವಿಲ್ಲ. ಪುರಾಣ, ಇತಿಹಾಸದ ಆದರ್ಶ ಪುರುಷರ ಹಾದಿಯಲ್ಲಿ ನಡೆಯಿರಿ ಎಂದು ಖಂಡಿತವಾಗಿಯೂ ಆಶಿಸಬಹುದು.

facebook.com/vijaykarnataka
x.com/vijaykarnataka



ಡಿಕೆಶಿ ಯುಗಾರಂಭ

ವಿಜಯ ಕರ್ನಾಟಕ VK
www.vijaykarnataka.com
www.apps.vijaykarnataka.com
C

ಕರ್ನಾಟಕಕ್ಕೆ ಸಹಕಾರ ಎಂದ ಪಿಎಂ

ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು. ಹೊಸ ಸರಕಾರಕ್ಕೆ ಶುಭಾಶಯಗಳು. ಕೇಂದ್ರವು ಕರ್ನಾಟಕ ಸರಕಾರದೊಂದಿಗೆ ಜನರ ಕಲ್ಯಾಣಕ್ಕಾಗಿ ನಿಕಟವಾಗಿ ಕಾರ್ಯ ನಿರ್ವಹಿಸಲಿದೆ.
– **ನರೇಂದ್ರ ಮೋದಿ** ಪ್ರಧಾನಿ



ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಿರಿ. ಕರ್ನಾಟಕವನ್ನು ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ. ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ. ಯಶಸ್ಸು ನಿಮ್ಮದಾಗಲಿ.
– **ಸೋನಿಯಾ ಗಾಂಧಿ** ಕಾಂಗ್ರೆಸ್ ವರಿಷ್ಠೆ

ಡಿಕೆಶಿಯವರ ನಾಯಕತ್ವದಲ್ಲಿ ರಾಜ್ಯವು ಎಲ್ಲ ಕ್ಷೇತ್ರಗಳಲ್ಲೂ ಸಶಕ್ತವಾಗಿ ಮುನ್ನಡೆಯಲಿ. ದೊರೆತಿರುವ ಅವಕಾಶದಲ್ಲಿ ಜನರಿಗೆ ಒಳ್ಳೆಯದನ್ನು ಮಾಡಲಿ
– **ಎಚ್.ಡಿ.ದೇವೇಗೌಡ** ಮಾಜಿ ಪ್ರಧಾನಿ

ನಾಡಿನ ಹಿತರಕ್ಷಣೆ, ಸರ್ವತೋಮುಖ ಅಭಿವೃದ್ಧಿ ಹಾಗೂ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಬಾಳು, ಸಾಮಾಜಿಕ ನ್ಯಾಯ' ತತ್ತ್ವದಡಿ ಪ್ರಜೆಯ ಕಲ್ಯಾಣಕ್ಕಾಗಿ ಶ್ರಮಿಸಲು ಭಗವಂತ ಶಕ್ತಿ ಕೊಡಲಿ. ರಾಜ್ಯದ ಹಿತಕ್ಕಾಗಿ ನಮ್ಮ ಸಕಾರಾತ್ಮಕ ಸಹಕಾರ ಯಾವಾಗಲೂ ಇರಲಿದೆ.
– **ಬಿ.ಎಸ್.ಯಡಿಯೂರಪ್ಪ** ಮಾಜಿ ಸಿಎಂ

ಡಿಕೆಶಿಯವರಿಗೆ ಅಭಿನಂದನೆಗಳು. ತಮಗೆ ದೊರೆತಿರುವ ಅವಕಾಶವನ್ನು ಜನಪರ ಕೆಲಸಗಳಿಗೆ ಹಾಗೂ ಕರ್ನಾಟಕದ ಅಭಿವೃದ್ಧಿಗೆ ಉಪಯೋಗ ಮಾಡಿಕೊಳ್ಳಲಿ.
– **ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

ಗ್ಯಾರಂಟಿ ವೇಗ ಹೆಚ್ಚಿಸಿದ ನೂತನ ಸಿಎಂ

ಮುಖ್ಯಮಂತ್ರಿ ನೇತೃತ್ವದ ಚೊಚ್ಚಲ ಸಂಪುಟ ಸಭೆಯಲ್ಲಿ ಆರು ಪ್ರಮುಖ ತೀರ್ಮಾನ

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ತಮ್ಮ ಮೊದಲ ಪತ್ರಿಕಾಗೋಷ್ಠಿಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣವೂ ಸೇರಿದಂತೆ ಮತ್ತೆ ಆರು ಯೋಜನೆಗಳನ್ನು ಪ್ರಕಟಿಸಿದರು.

1. ವಿದ್ಯಾರ್ಥಿಗಳಿಗೂ ಫ್ರೀ ಬಸ್

'ಶಕ್ತಿ' ಗ್ಯಾರಂಟಿ ಯೋಜನೆಯಡಿ ಮಹಿಳೆಯರಿಗೆ ರಾಜ್ಯ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ವಿದ್ಯಾರ್ಥಿಗಳಿಗೂ ವಿಸ್ತರಣೆ ಮಾಡಲಾಗಿದೆ. ಅಂದರೆ, 1ನೇ ತರಗತಿಯಿಂದ ಸ್ನಾತಕೋತ್ತರ ಪದವಿ ವರೆಗೆ ವ್ಯಾಸಂಗ ಮಾಡುವ ಎಲ್ಲ ವಿದ್ಯಾರ್ಥಿಗಳು ಇನ್ನುಮುಂದೆ ರಿಯಾಯಿತಿ ಬಸ್ ಪಾಸ್ ಬದಲಿಗೆ ಉಚಿತವಾಗಿ ಪ್ರಯಾಣ ಮಾಡಬಹುದು. ಆದರೆ ಇದಕ್ಕೆ ಅರ್ಜಿ ಸಲ್ಲಿಸಿ ಪಾಸ್ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

2. ಯುವಜನರಿಗೆ ಉದ್ಯೋಗ ಗ್ಯಾರಂಟಿ

ಹಣಕಾಸು ಇಲಾಖೆ ಅನುಮೋದನೆಯೊಂದಿಗೆ ಒಟ್ಟು 56,432 ಹುದ್ದೆಗಳ ನೇಮಕ ಪ್ರಕ್ರಿಯೆ ಶುರುವಾಗಿದೆ. ಈ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು. ಅದಕ್ಕಾಗಿ ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಸಭೆ ನಡೆಸಿ, ಒಂದು ತಿಂಗಳೊಳಗೆ ಇಲಾಖಾವಾರು ವೇಳಾಪಟ್ಟಿ ಪ್ರಕಟಿಸಲಾಗುವುದು.

3. ಖಾಸಗಿಯಲ್ಲೂ ಉದ್ಯೋಗ ಅವಕಾಶ

ಮಾನವ ಸಂಪನ್ಮೂಲದಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. ಜತೆಗೆ, ಜಾಗತಿಕ ಕೈಗಾರಿಕಾ ಭೂಪಟದಲ್ಲಿ ರಾಜ್ಯ ಗುರುತಿಸಿಕೊಂಡಿದೆ. ಹಾಗಾಗಿ, ಐಟಿ, ಬಿಟಿ ಹೊರತಾಗಿಯೂ ನಾನಾ ಉದ್ಯಮ ವಲಯಗಳಲ್ಲಿ ಸ್ಥಳೀಯ ಯುವಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು ಸರಕಾರದ ಆದ್ಯತೆ. ಅದಕ್ಕಾಗಿ ಖಾಸಗಿ ಉದ್ಯೋಗವಕಾಶ ಪಡೆಯಲು ಸಾಧ್ಯವಾಗುವಂತೆ ರಾಜ್ಯ ಸರಕಾರದ ವತಿಯಿಂದ 'ಫೆಸಿಲಿಟೇಶನ್ ಸೆಂಟರ್' ಸ್ಥಾಪನೆ ಮಾಡಲಾಗುವುದು. ಹಿಂದಿನ ಉದ್ಯೋಗ ವಿನಿಮಯ ಕೇಂದ್ರಗಳ ಮಾದರಿಯಲ್ಲಿ ಯುವ ಜನರು ಇಲ್ಲಿ ನೋಂದಾಯಿಸಿ, ನಾನಾ ಉದ್ಯಮ ವಲಯಗಳಲ್ಲಿ ಉದ್ಯೋಗ ಪಡೆಯಲು ಸಾಧ್ಯವಾಗಲಿದೆ. ಜತೆಗೆ, ಖಾಸಗಿ ಉದ್ಯಮಗಳು ನಾನಾ ಹಂತದ ಹುದ್ದೆಗಳಲ್ಲಿ ಇಂತಿಷ್ಟು ಪ್ರಮಾಣದ ಉದ್ಯೋಗಗಳನ್ನು ಕನ್ನಡಿಗರಿಗೆ ಒದಗಿಸಬೇಕು ಎಂಬುದನ್ನು ಕಡ್ಡಾಯ ಮಾಡಲಾಗುವುದು. ಅಗತ್ಯ ಮತ್ತು ಅರ್ಹತೆ ಆಧರಿಸಿ ಕನ್ನಡಿಗ ಯುವಜನರಿಗೆ ಉದ್ಯೋಗ ಕಲ್ಪಿಸುವ ಈ ಆಶಯಕ್ಕೆ ಒಂದು ತಿಂಗಳ ಕಾಲಮಿತಿಯೊಳಗೆ ವ್ಯವಸ್ಥಿತ ಚೌಕಟ್ಟು ನಿರ್ಮಿಸುವ ಜವಾಬ್ದಾರಿಯನ್ನು ಮೂವರು ಸಚಿವರ ತಂಡಕ್ಕೆ ನೀಡಲಾಗಿದೆ.

4. ಭಾರತ್ ಜೋಡೋ ಯುವ ಸಂಘ

ಯುವ ಜನರನ್ನು ಸ್ವಾಭಿಮಾನಿ, ಸ್ವಾವಲಂಬಿಯಾಗಿ ರೂಪಿಸಲು ಹಾಗೂ ಸಮಾಜದ ಆಸ್ತಿಯಾಗಿ ಅವರನ್ನು ರೂಪಿಸಲು ರಾಜ್ಯಾದ್ಯಂತ 10 ಸಾವಿರ 'ಭಾರತ್ ಜೋಡೋ' ಯುವ ಸಂಘಗಳನ್ನು ರಚಿಸಲಾಗುವುದು. ಪ್ರತಿ ಪಂಚಾಯತ್‌ಗೆ ಒಂದರಂತೆ 6 ಸಾವಿರ ಸಂಘಗಳು ಹಾಗೂ ನಗರ ಪ್ರದೇಶಗಳಲ್ಲಿ ವಾರ್ಡ್‌ಗೆ ಒಂದರಂತೆ 4 ಸಾವಿರ ಸಂಘಗಳನ್ನು ಸ್ಥಾಪಿಸಲಾಗುವುದು. ಪ್ರತಿಯೊಂದು ಯುವ ಸಂಘಗಳಿಗೂ ಸರಕಾರದಿಂದ 10 ಲಕ್ಷ ರೂ. ಪ್ರೋತ್ಸಾಹಧನ ನೀಡಲಾಗುವುದು. ಈ ಉದ್ದೇಶಕ್ಕೆ ಸುಮಾರು 1 ಸಾವಿರ ಕೋಟಿ ರೂ. ವೆಚ್ಚವನ್ನು ಅಂದಾಜಿಸಲಾಗಿದೆ.

5. ಓಸಿ, ಸಿಸಿ ಭಾಗ್ಯ, ಭೂ ಗ್ಯಾರಂಟಿ ವಿಸ್ತರಣೆ

ರಾಜ್ಯಾದ್ಯಂತ 2,400 ಚದರಡಿವರೆಗಿನ (ಶೇ.10ರಷ್ಟು ಹೆಚ್ಚುವರಿ ವ್ಯತ್ಯಾಸ ಮಿತಿಯೊಂದಿಗೆ) ಅಳತೆಯ ನಿವೇಶನಗಳಲ್ಲಿ ನಿರ್ಮಾಣಗೊಂಡಿರುವ ಜಿ+2 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್+ 3 ಮಹಡಿ ಹೊಂದಿರುವ ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ 2026ರ ಮೇ 31ರೊಳಗಿನ ಅರ್ಜಿ ಸಲ್ಲಿಸಿದವರಿಗೆ ವಿದ್ಯುತ್ ಸಂಪರ್ಕ ಪಡೆಯಲು ಒಂದು ಬಾರಿಯ ಸ್ವಾಧೀನಾನುಭವ ಪ್ರಮಾಣ ಪತ್ರ ವಿನಾಯಿತಿ ಸೌಲಭ್ಯ ಕಲ್ಪಿಸಲು ತೀರ್ಮಾನ. ಸುಪ್ರೀಂ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಪರಿಹಾರ ರೂಪದಲ್ಲಿ ಈ ಪ್ರಯತ್ನ.

ರಾಜ್ಯಾದ್ಯಂತ ಗ್ರಾಮೀಣ ಹಾಗೂ ನಗರ ಪ್ರದೇಶ ವ್ಯಾಪ್ತಿಯಲ್ಲಿ ಕಾನೂನು ಮತ್ತು ನಿಯಮಾವಳಿಗಳನ್ನು ಸರಳೀಕರಣಗೊಳಿಸುವ ಮೂಲಕ ಅರ್ಹ ಆಸ್ತಿಗಳನ್ನು 'ಬಿ-ಖಾತಾ'ದಿಂದ 'ಎ-ಖಾತಾ'ಗೆ ಪರಿವರ್ತನೆಗೆ ಅವಕಾಶ ಕಲ್ಪಿಸುವ ಮಹತ್ವದ ನಿರ್ಧಾರ. ಆ ಮೂಲಕ ನಾಗರಿಕರಿಗೆ ಆಸ್ತಿಪತ್ರ ಪಡೆಯಲು ಸಾಧ್ಯವಾಗಲಿದ್ದು, ಭೂಮಿಯ ನೈಜ ಮೌಲ್ಯದ ಅರಿವಾಗುವ ನಿರೀಕ್ಷೆ.

6. ರಾಜಧಾನಿ ರಸ್ತೆಗಳಿಗೆ ಹೊಳಪು

ರಾಜಧಾನಿ ಬೆಂಗಳೂರಿನ ಪ್ರಮುಖ ರಸ್ತೆಗಳ ಜತೆಗೆ, ಉಳಿದೆಲ್ಲಾ ರಸ್ತೆಗಳನ್ನು ಸಂಪೂರ್ಣ ಡಾಂಬರೀಕರಣ ಮಾಡಲಾಗುವುದು. ಈ ಉದ್ದೇಶಕ್ಕೆ 2 ಸಾವಿರ ಕೋಟಿ ರೂ.ಗಳನ್ನು ಒದಗಿಸಲಾಗುವುದು. ಜಿಬಿಎ ಮತ್ತು ಬಿಡಿಎ ವ್ಯಾಪ್ತಿಯ ಎಲ್ಲ ರಸ್ತೆಗಳನ್ನು ಡಾಂಬರೀಕರಣ ಮಾಡುವ ಈ ಕಾರ್ಯವನ್ನು ಮುಂದಿನ 3 ತಿಂಗಳೊಳಗೆ ಪೂರ್ಣಗೊಳಿಸಲಾಗುವುದು.

ಮುಖ್ಯಮಂತ್ರಿ ಕುರ್ಚಿ ನನ್ನದಲ್ಲ, ಜನರದ್ದು

''ಸಿಎಂ ಕುರ್ಚಿ ನನ್ನ ವೈಯಕ್ತಿಕ ಸ್ವತ್ತಲ್ಲ, ಇದು ಜನರು ನೀಡಿದ ಅಧಿಕಾರ. ಬಾಕಿ ಇರುವ ಎರಡು ವರ್ಷಗಳ ಅವಧಿಯಲ್ಲಿ ನನ್ನ ಬೇರುಗಳನ್ನು ಮರೆಯದೆ, ರಾಜ್ಯದ ಕಲ್ಯಾಣಕ್ಕಾಗಿ ಹೊಸ ಅವಕಾಶಗಳನ್ನು ಹುಡುಕುತ್ತಾ ಜನರ ಸೇವೆಗೆ ಮುಡಿಪಾಗಿರುತ್ತೇನೆ,'' ಎಂದು ನೂತನ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಹೇಳಿದರು.

■ ನನ್ನ ನಂಬಿಕೆ ಮಾನವ ಧರ್ಮ, ಸರಕಾರದ ನಿರ್ಧಾರ ಸಾಮೂಹಿಕ

■ ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ: ಸಿಎಂ ಭಾವುಕ

ಅಧಿಕಾರ ಸ್ವೀಕರಿಸಿ, ಚೊಚ್ಚಲ ಸಂಪುಟ ಸಭೆ ನಡೆಸಿದ ಬಳಿಕ ಜಂಟಿ ಸುದ್ದಿಗೋಷ್ಠಿಯ ಮಾತನಾಡಿದರು. 1985ರಿಂದ ತಾವು ಕಂಡ ಏಳುಬೀಳುಗಳು, ಜೈಲು ವಾಸ ಸೇರಿದಂತೆ ಎದುರಿಸಿದ ರಾಜಕೀಯ ತಂತ್ರಗಳನ್ನು ಸ್ಮರಿಸಿದ ಅವರು, ''ಯಾವುದಕ್ಕೂ ಎದೆಗುಂದದೆ ಭರವಸೆಯ ಮೇಲೆ ಬದುಕಿ ಬಂದಿದ್ದೇನೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಮಾತ್ರ ಉಳಿಯುತ್ತವೆ,'' ಎಂದರು.

ಮಾನವ ಧರ್ಮವೇ ನಮ್ಮ ನೀತಿ: ''ನನಗೆ ಜಾತಿ-ಧರ್ಮಗಳ ರಾಜಕಾರಣದಲ್ಲಿ ನಂಬಿಕೆಯಿಲ್ಲ, ಮಾನವ ಧರ್ಮವೇ ದೊಡ್ಡದು. ಗ್ರಾಮೀಣ ರೈತರು ಮತ್ತು ನಗರದ ಬಡವರ ಬದುಕನ್ನು ಹತ್ತಿರದಿಂದ ಬಲ್ಲವನಾಗಿದ್ದು, ಸರಕಾರದ ಪ್ರತಿಯೊಂದು ತೀರ್ಮಾನವೂ ಸಾಮೂಹಿಕವಾಗಿರುತ್ತದೆ,'' ಎಂದರು.

''ಹಿರಿಯ ನಾಯಕರಾದ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದಾರೆ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿ, ಅತ್ಯಂತ ಸಂತೋಷದಿಂದ ನನಗೆ ಜಾಗ ಮಾಡಿಕೊಟ್ಟಿದ್ದಾರೆ ಎಂದು ಕೃತಜ್ಞತೆ ಸಲ್ಲಿಸಿದರು,'' ಎಂದರು.

ಉತ್ತರಮುಖಿ ಡಿಕೆಶಿ

ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ವಿಧಾನಸೌಧಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರು ಉತ್ತರ ದ್ವಾರದ ಮೂಲಕ ಶಕ್ತಿಸೌಧ ಪ್ರವೇಶಿಸಿದ್ದು ಗಮನ ಸೆಳೆಯಿತು.

ಸಾಮಾನ್ಯವಾಗಿ ಮುಖ್ಯಮಂತ್ರಿಗಳು, ಸಚಿವರು ವಿಧಾನಸೌಧದ ಪಶ್ಚಿಮ ದ್ವಾರದ ಮೂಲಕವೇ ಪ್ರವೇಶಿಸುವುದು ವಾಡಿಕೆ. ಪಶ್ಚಿಮ ಭಾಗದ ಮೂರನೇ ಮಹಡಿಯಲ್ಲೇ ಸಿಎಂ ಕಚೇರಿ ಇರುವ ಕಾರಣ ಬಹುತೇಕ ಮುಖ್ಯಮಂತ್ರಿಗಳು ಪಶ್ಚಿಮ ದ್ವಾರದ ಮೂಲಕವೇ ಓಡಾಡುತ್ತಾರೆ. ಆದರೆ ಶಿವಕುಮಾರ್ ಅವರು ಉತ್ತರ ದ್ವಾರವನ್ನೇ ಬಳಸಲು ಮುಂದಾಗಿದ್ದಾರೆ. ಉತ್ತರ ದ್ವಾರದ ಬಳಿ ತೆರಳಿ ಚಪ್ಪಲಿ ಕಳಚಿಟ್ಟು ಪ್ರವೇಶ ದ್ವಾರದ ಮೆಟ್ಟಿಲುಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕಿದರು. ಬಳಿಕ ವಿಧಾನಸೌಧ ಪ್ರವೇಶಿಸಿದರು. ಸಿಎಂ ಕೊಠಡಿಯಲ್ಲೂ ವಿಶೇಷ ಪೂಜೆ ಸಲ್ಲಿಸಿ ಆಸೀನರಾದರು.

ಮೊದಲ ಪತ್ರಿಕಾಗೋಷ್ಠಿ

ಮುಖ್ಯಮಂತ್ರಿಯಾದ ಬಳಿಕ ಚೊಚ್ಚಲ ಸಚಿವ ಸಂಪುಟ ಸಭೆ ನಡೆಸಿದ ಶಿವಕುಮಾರ್ ಅವರು ಬಳಿಕ ಆ ಬಗ್ಗೆ ಮಾಹಿತಿ ಹಂಚಿಕೊಳ್ಳಲು ವಿಧಾನಸೌಧದ ಸಮ್ಮೇಳನ ಸಭಾಂಗಣಕ್ಕೆ ಆಗಮಿಸಿದರು. ಪತ್ರಿಕಾಗೋಷ್ಠಿಗೆ ವ್ಯವಸ್ಥೆ ಮಾಡಲಾಗಿದ್ದ ಆಸನವು ದಕ್ಷಿಣಾಭಿಮುಖವಾಗಿದ್ದನ್ನು ಕಂಡ ಶಿವಕುಮಾರ್ ಅವರು ಉತ್ತರಾಭಿಮುಖವಾಗಿ ಕುಳಿತು ಪತ್ರಿಕಾಗೋಷ್ಠಿ ನಡೆಸಲು ಮುಂದಾದರು. ಆದರೆ ಮಾಧ್ಯಮ ಪ್ರತಿನಿಧಿಗಳು ಈಗಾಗಲೇ ವ್ಯವಸ್ಥೆ ಮಾಡಿಕೊಂಡಿರುವುದರಿಂದ ತೊಂದರೆಯಾಗಲಿದೆ ಎಂದು ಗಮನಕ್ಕೆ ತಂದ ಬಳಿಕ ದಕ್ಷಿಣಾಭಿಮುಖವಾಗಿಯೇ ಮಾಹಿತಿ ನೀಡಲು ಮುಂದಾದರು. ಆದರೆ ಮುಂದಿನ ಬಾರಿ ಉತ್ತರಾಭಿಮುಖವಾಗಿಯೇ ಪತ್ರಿಕಾಗೋಷ್ಠಿ ನಡೆಸಲು ವ್ಯವಸ್ಥೆ ಮಾಡಬೇಕು ಎಂದು ಸೂಚನೆ ನೀಡಿದ್ದು ಗಮನ ಸೆಳೆಯಿತು.

ನೂತನ ಸಿಎಂಗೆ ಅತೀಕ್ ಆರ್ಥಿಕ ಸಲಹೆಗಾರ

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಆರ್ಥಿಕ ಸಲಹೆಗಾರರಾಗಿ ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ.ಅತೀಕ್ ನೇಮಕಗೊಂಡಿದ್ದಾರೆ.



ಸುದೀರ್ಘ ಅವಧಿಗೆ ಹಣಕಾಸು ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದ ಅತೀಕ್ ನಿಕಟಪೂರ್ವ ಸಿಎಂ ಸಿದ್ದರಾಮಯ್ಯ ಅವರ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಯಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಇದೀಗ ಅತೀಕ್ ಅವರನ್ನು ಮುಖ್ಯಮಂತ್ರಿಯವರ ಹಣಕಾಸು ಸಲಹೆಗಾರರಾಗಿ ನಿಯೋಜಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಅಧಿಕೃತ ಆದೇಶ ಹೊರಡಿಸಲಾಗಿದೆ. ಜತೆಗೆ ಬೆಂಗಳೂರು ಬಿಜನಸ್ ಕಾರಿಡಾರ್ ಯೋಜನೆಯ ಚೇರ್ಮನ್ ಆಗಿ ಅತೀಕ್ ಮುಂದುವರಿಯಲಿದ್ದಾರೆ.

ತುಷಾರ್ ಎಸಿಎಸ್: ತುಷಾರ್ ಗಿರಿನಾಥ್ ಅವರನ್ನು ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ನಿಯೋಜಿಸಿ ಆದೇಶ ಹೊರಡಿಸಲಾಗಿದೆ.

ಡಿ.ಕೆ.ಶಿವಕುಮಾರ್ ಡಿಸಿಎಂ ಆಗಿದ್ದಾಗ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದ ರಾಜೇಂದ್ರ ಚೋಳನ್ ಅವರನ್ನು ಈಗ ಸಿಎಂ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಕೆಪಿಸಿಸಿಗೆ ಬಿ.ಕೆ. ಹರಿಪ್ರಸಾದ್ ನೂತನ ಸಾರಥಿ

ಸಚಿವ ಸ್ಥಾನದ ಬದಲು ಪಕ್ಷದ ಉನ್ನತ ಜವಾಬ್ದಾರಿ | ಹಿಂದುಳಿದ ವರ್ಗದ ನಾಯಕನಿಗೆ ಹೈಕಮಾಂಡ್ ಮಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ನೇಮಕಗೊಂಡಿದ್ದಾರೆ. ತಕ್ಷಣದಿಂದ ಜಾರಿಗೆ ಬರುವಂತೆ ಈ ನೇಮಕ ಮಾಡಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಬುಧವಾರ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಬಹುದಿನಗಳ ನಾಯಕತ್ವ ಬದಲಾವಣೆ ಚರ್ಚೆಯಂತೆ ಸರಕಾರದ ನಾಯಕತ್ವ ಬದಲಾದ ದಿನವೇ ಪಕ್ಷದ ಸಾರಥ್ಯವೂ ಬದಲಾಗಿದೆ. ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಪದಗ್ರಹಣ ಮಾಡಿದ ಕೆಲಹೊತ್ತಿನಲ್ಲೇ, ಪಕ್ಷದ ನೂತನ ಅಧ್ಯಕ್ಷರ ನೇಮಕವಾಗಿದೆ. ಕಳೆದ ಆರು ವರ್ಷಗಳಿಗೂ ಹೆಚ್ಚು ಕಾಲದಿಂದ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಅಧ್ಯಕ್ಷರಾಗಿದ್ದರು.

ನೂತನ ಸಂಪುಟದಲ್ಲಿ ಸಚಿವ ಸ್ಥಾನದ ಆಕಾಂಕ್ಷಿಯೂ ಆಗಿದ್ದ ಬಿ.ಕೆ.ಹರಿಪ್ರಸಾದ್ ಅವರಿಗೆ, ಅದಕ್ಕೆ ಬದಲಾಗಿ ಪಕ್ಷವನ್ನು ಮುನ್ನಡೆಸುವ ಅವಕಾಶ ಸಿಕ್ಕಿದೆ. ಇದೇ ತಿಂಗಳ 30ರಂದು ಹರಿಪ್ರಸಾದ್ ಅವರ ವಿಧಾನ ಪರಿಷತ್ ಸದಸ್ಯತ್ವ ಮುಗಿಯುತ್ತಿದ್ದು, ಮತ್ತೊಂದು ಅವಧಿಗೆ ಅವರನ್ನು ಮುಂದುವರಿಸಲು ಬಯಸಿರುವ ಪಕ್ಷವು ಅವರನ್ನು ಮತ್ತೆ ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ. ಈ ಅವಕಾಶದ ಜತೆಗೆ, ಎಐಸಿಸಿ ವರಿಷ್ಠರು ಹರಿಪ್ರಸಾದ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಪಟ್ಟವನ್ನೂ ನೀಡಿದ್ದಾರೆ.

ಜನಾರ್ದನ ಪೂಜಾರಿ ಅವರ ಬಳಿಕ ಹಿಂದುಳಿದ ವರ್ಗದ ಈಡಿಗ ಸಮುದಾಯದ ನಾಯಕರಾಗಿ ಹರಿಪ್ರಸಾದ್ ಅವರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸಾರಥ್ಯ ವಹಿಸಿಕೊಳ್ಳುತ್ತಿದ್ದಾರೆ. ಮೂರು ಬಾರಿ ರಾಜ್ಯಸಭಾ ಸದಸ್ಯರಾಗಿದ್ದ ಹರಿಪ್ರಸಾದ್ ಅವರು ಕಳೆದ ಆರು ವರ್ಷಗಳಿಂದ ರಾಜ್ಯ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ದೀರ್ಘ ಕಾಲ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ನಾನಾ ರಾಜ್ಯಗಳ ಉಸ್ತುವಾರಿ ನಿರ್ವಹಿಸಿದ್ದಾರೆ.

72ರ ಹರೆಯದ ಹರಿಪ್ರಸಾದ್ ಅವರು ಪಕ್ಷ ನಿಷ್ಠೆಗೆ ಹೆಸರಾಗಿದ್ದು, ಕಾಂಗ್ರೆಸ್‌ನ ತತ್ವ ಮತ್ತು ಸಿದ್ಧಾಂತಗಳ ಬಲವಾದ ಪ್ರತಿಪಾದಕರಾಗಿದ್ದಾರೆ. ವಿದ್ಯಾರ್ಥಿ ಸಂಘಟನೆಯಿಂದ ಎಐಸಿಸಿ ಮಟ್ಟದ ವರೆಗೆ ಪಕ್ಷದ ನಾನಾ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಸದ್ಯದಲ್ಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದ ಬಿ.ಕೆ. ಹರಿಪ್ರಸಾದ್ ಅವರು ಪಕ್ಷದ ಸಾರಥ್ಯ ವಹಿಸಿಕೊಳ್ಳಲಿದ್ದಾರೆ.

ಬಿಕೆಗೆ ಡಬಲ್ ಗಿಫ್ಟ್

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಆಡಳಿತಾರೂಢ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಬಿ.ಕೆ.ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ್, ಪಿ.ವಿ.ಮೋಹನ್ ಹಾಗೂ ಶಿವಣ್ಣ ಮಳವಳ್ಳಿ ಹೆಸರು ಪ್ರಕಟಿಸಲಾಗಿದೆ.

■ ಕೌನ್ಸಿಲ್‌ಗೆ ಕಾಂಗ್ರೆಸ್ ಅಭ್ಯರ್ಥಿಗಳು ಅಂತಿಮ

■ ತಿಪ್ಪಣ್ಣಪ್ಪ, ಪಿ.ವಿ. ಮೋಹನ್, ಶಿವಣ್ಣ ಮಳವಳ್ಳಿಗೆ ಮಣೆ

ಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ಘೋಷಣೆಯಾಗಿದೆ. ಈ ಪೈಕಿ ತನಗೆ ಲಭ್ಯವಾಗುವ 4 ಸ್ಥಾನಗಳಿಗೆ ಸಂಬಂಧಿಸಿ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ.

ಈ ಪೈಕಿ ಹರಿಪ್ರಸಾದ್, ತಿಪ್ಪಣ್ಣಪ್ಪ ಪರಿಷತ್‌ನ ಹಾಲಿ ಸದಸ್ಯರಾಗಿದ್ದು, ಮತ್ತೊಂದು ಅವಧಿಗೆ ಮುಂದುವರಿಯುವ ಅವಕಾಶ ಪಡೆದಿದ್ದಾರೆ. ಮೋಹನ್ ಮತ್ತು ಶಿವಣ್ಣ ಮಳವಳ್ಳಿ ಹೊಸ ಮುಖಗಳು.

ಶ್ರೀರಸ್ತು ಶಿವಮಸ್ತು...

ಅಧಿಕಾರ ಪದಗ್ರಹಣ ಎಂದರೆ ಡಿ.ಕೆ. ಶಿವಕುಮಾರ್ ಅವರಿಗೆ ಕೇವಲ ಪ್ರಮಾಣವಚನ ಸ್ವೀಕಾರವಷ್ಟೇ ಆಗಿರಲಿಲ್ಲ, ಅಲ್ಲಿ ಜೀವಮಾನದ ನೆನಪುಗಳಿದ್ದವು. ಹಿರಿಯರ ಆಶೀರ್ವಾದಗಳಿದ್ದವು. ಜನರ ಪ್ರೀತಿಯ ತೊರೆಗಳಿದ್ದವು.

ಚಿತ್ರ: ಕೆ.ಎಸ್. ಗಣೇಶ್

ಮಾ ತುಜೇ ಸಲಾಂ... ತಾಯಿ ಗೌರಮ್ಮನಿಂದ ಆಶೀರ್ವಾದ


ಹೂನಗು... ಕೈ ಸಾರಥಿಗಳ ಮುಗುಳ್ನಗೆ

ಇನ್ನು ನಿಮ್ಮದೇ ಸಾರಥ್ಯ... ಹೈಕಮಾಂಡ್‌ಗಳ ಆಶೀರ್ವಾದ ಪಡೆದ ಕ್ಷಣ

ಗೌಡರ ಪಾದಕ್ಕೆ ಎರಗಿ... ಮಾಜಿ ಪ್ರಧಾನಿಗೆ ಆತ್ಮೀಯ ಕರೆ

ಮುಖ್ಯಮಂತ್ರಿ ಆಸನವೇರುವ ಮುನ್ನ ಕಚೇರಿಗೆ ಪೂಜೆ, ಕುರ್ಚಿಗೆ ನಮಸ್ಕಾರ

ಶಕ್ತಿಸೌಧಕ್ಕೆ ಶಿರಬಾಗಿ... ವಿಧಾನಸೌಧದ ಮೆಟ್ಟಿಲುಗಳಿಗೆ ನೂತನ ಸಿಎಂ ಡಿಕೆಶಿ ನಮಸ್ಕರಿಸಿದರು.

ಬನ್ನಿ ಅಯ್ಯಾ..? ಬಿಎಸ್‌ವೈಗೆ ಪ್ರೀತಿಯ ಕರೆ

ಶ್ರೀವೃಂದದ ಸಾನ್ನಿಧ್ಯ... ವಿವಿಧ ಮಠದ ಸ್ವಾಮೀಜಿಗಳ ಗೌರವ ಉಪಸ್ಥಿತಿ.

ಶಾಲಿನಿ ರಜನೀಶ್ ಜತೆ...

ಬಾಬಾ ಸಾಹೇಬರಿಗೆ ನಮನ

ಕೆಂಪೇಗೌಡರಿಗೆ ಪುಷ್ಪಾರ್ಚನೆ

ಅಜ್ಜಯ್ಯನ ಆಗಮನ

ಕುಂಬ್ಳೆ ದಂಪತಿ ಕಾಣಿರೋ...

ರಾಗಿಣಿಯ ತುಪ್ಪದ ನಗು.

'ಪ್ರೀತಿಯಿಂದ' ರಮೇಶ್ ಬಂದರು...

ನಟಿ ರಮ್ಯಾ ದಿವ್ಯ ನೋಟ

ಸಡಗರದ ಪತಾಕೆ


ಕೇರಳ ಸಿಎಂ ಸತೀಶನ್, ತೆಲಂಗಾಣ ಸಿಎಂ ರೇವಂತ್, ಹಿಮಾಚಲ ಸಿಎಂ ಸುಖ್ವಿಂದರ್ ಸಿಂಗ್, ರಾಜ್ಯದ ಸಿಜೆ ವಿಭು ಬಖ್ರು.

ಲೋಕಭವನದ ಗಾಜಿನ ಮನೆಯಲ್ಲಿ ನೆರೆದಿದ್ದ ಜನಸ್ತೋಮ.

ಎಐ ಕಲಿಯದಿರುವ ದಂಡಪಿಂಡಗಳು!

ಫಣಿ ರಾಮಚಂದ್ರ ಅವರು ಏನಾದರೂ 'ದಂಡಪಿಂಡಗಳು' ಧಾರಾವಾಹಿಯ ಎರಡನೆಯ ಸೀಸನ್ ಶುರುಮಾಡಿದರೆ ಅದರ ಟೈಟಲ್ ಸಾಂಗ್ 'ಬಿಎ, ಬಿಎಸ್ಸಿ, ಬಿಕಾಮ್ ಮಾಡಿ ಎಐ ಕಲಿಯದೆ ಹೋದರೆ ದಂಡಪಿಂಡಗಳು...ಇವರು ದಂಡ ಪಿಂಡಗಳು' ಎಂದಿರುತ್ತಿತ್ತೇನೋ? ಕಲೆ, ಸಂಗೀತ, ವಾಣಿಜ್ಯ, ತಂತ್ರಜ್ಞಾನ, ಯಾವುದೇ ವಿಭಾಗವಿರಲಿ ಅಲ್ಲಿನ ಪಠ್ಯಕ್ರಮದ ಜೊತೆ ಕೃತಕ ಬುದ್ಧಿಮತ್ತೆಯ ವಿಷಯವನ್ನೂ ಹಾಗೂ ಆ

ವಿಕ AI ಲೋಕ

ಕ್ಷೇತ್ರದಲ್ಲಿನ ಎಐ ವೃತ್ತಿಪರ ಕೋರ್ಸ್‌ಗಳನ್ನು ಮಾಡುವ ಅಗತ್ಯತೆ ಇಂದು ಸೃಷ್ಟಿಯಾಗಿದೆ. ಈ ಪ್ರವೃತ್ತಿ ಹೊಸತಲ್ಲ, ಈಗಾಗಲೇ ವಾಣಿಜ್ಯ ವಿಭಾಗದ ಮಕ್ಕಳು ಹೊರಗಿನಿಂದ ಟ್ಯಾಲಿ ಕಲಿಯುತ್ತಾರೆ, ಸೈನ್ಸ್ ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಡಾಟಾ ಸೈನ್ಸ್ ಕೋರ್ಸ್ ಮಾಡುತ್ತಾರೆ, ಚಿತ್ರಕಲೆಗೆ ಸಂಬಂಧಿಸಿದ ವಿದ್ಯಾರ್ಥಿಗಳು ಕೂಡ ಕಂಪ್ಯೂಟರ್ ಆರ್ಟ್ ಕಲಿಯದೇ ಇರುವುದಿಲ್ಲ, ಹೀಗಾಗಿ ವಿದ್ಯಾರ್ಥಿಗಳು ಅಥವಾ ವೃತ್ತಿಪರರು ತಮ್ಮ ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಎಐ ಕಲಿಕೆಯನ್ನು ಮಾಡಲೇ ಬೇಕಾಗಿದೆ. ಉದಾಹರಣೆಗೆ ಕಲೆ ಅಥವಾ ವಾಣಿಜ್ಯದ ವಿದ್ಯಾರ್ಥಿಗಳು 'ಲೋ ಕೋಡ್, ನೋ ಕೋಡ್' ಸಾಫ್ಟ್‌ವೇರ್‌ಗಳನ್ನು ಕಲಿಯಬಹುದು, ಜೆನ್-ಎಐ ಕೋರ್ಸ್ ಇದೆ, ಡಿಜಿಟಲ್ ಕಂಟೆಂಟ್ ಕ್ರಿಯೆಷನ್ ಕೋರ್ಸ್ ಕೂಡ ಸೂಕ್ತ.

■ **ವಿಕ್ರಂ ಜೋಶಿ** ಎಐ ವಿಶ್ಲೇಷಕರು

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

ಅಧಿಕಾರಿಗಳು ಕಾನೂನಿನ ಪದಗಳನ್ನೇ ನಕಲು ಮಾಡಿ ಆಸ್ತಿ ಜಪ್ತಿಗೆ ಅವಕಾಶವಿಲ್ಲ: ಹೈಕೋರ್ಟ್

ಮುಡಾ ನಿವೇಶನ ಮುಟ್ಟುಗೋಲು ಆದೇಶ ರದ್ದು

■ **ವಿಕ ಸುದ್ದಿಲೋಕ** ಬೆಂಗಳೂರು

ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಕಾನೂನು ಪಾಲಿಸುತ್ತಿದ್ದೇವೆಂದು ತೋರಿಸಲು ಕಾನೂನಿನಲ್ಲಿರುವ ಪದಗಳನ್ನೇ ನಕಲು ಮಾಡಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅಕಾಶವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

''ಅಲ್ಲದೆ, ಹಣ ಅಕ್ರಮ ವರ್ಗಾವಣೆ ತಡೆ ಕಾಯಿದೆ (ಪಿಎಂಎಲ್ಎ) ಅಡಿಯಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಹೊರಡಿಸಲಾಗುವ ಇಂತಹ ತಾತ್ಕಾಲಿಕ ಜಪ್ತಿ ಆದೇಶಗಳು ಕಾನೂನು ಪ್ರಕಾರ ಸಮರ್ಥನೀಯವಲ್ಲ,'' ಎಂದು ನ್ಯಾಯಪೀಠ ಹೇಳಿದೆ.

ಮೈಸೂರಿನ ಕೆ.ಜಿ.ಕೊಪ್ಪಲಿನ 70 ವರ್ಷದ ಜಯಮ್ಮ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನಿಲ್‌ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ, ಇ.ಡಿ ಅಧಿಕಾರಿಗಳು 2025ರ ಜೂ. 9ರಂದು ಅರ್ಜಿದಾರರ ಆಸ್ತಿಯನ್ನು ತಾತ್ಕಾಲಿಕ ಮುಟ್ಟುಗೋಲು ಹಾಕಿಕೊಳ್ಳುವ ಆದೇಶ ಮತ್ತು ಅದರ ಮುಂದುವರಿದ ಎಲ್ಲಾ ಪ್ರಕ್ರಿಯೆ ರದ್ದುಗೊಳಿಸಿದೆ.

''ಅಧಿಕಾರಿಗಳು ಕೇವಲ ಕಾಯಿದೆಯ ಸೆಕ್ಷನ್ 5(1)ರಲ್ಲಿರುವ ಅಂಶಗಳನ್ನು ಯಾಂತ್ರಿಕವಾಗಿ ಆದೇಶದಲ್ಲಿ ನಕಲು ಮಾಡಿದರೆ ಸಾಲದು. ಆಸ್ತಿಯನ್ನು ತಕ್ಷಣವೇ ಜಪ್ತಿ ಮಾಡದಿದ್ದರೆ ತನಿಖಾ ಪ್ರಕ್ರಿಯೆಗೆ ಹಿನ್ನಡೆಯಾಗುತ್ತದೆಂಬುದಕ್ಕೆ ಅಧಿಕಾರಿ ಬಳಿ ಸ್ಪಷ್ಟವಾದ ವಸ್ತುನಿಷ್ಠ ದಾಖಲೆಗಳನ್ನು ಇಟ್ಟುಕೊಂಡಿರಬೇಕು. ಇ.ಡಿ ಮುಟ್ಟುಗೋಲು ಹಾಕಿಕೊಂಡಿದ್ದ ನಿವೇಶನಗಳ ಖಾತೆ ಇನ್ನೂ ಜಯಮ್ಮ ಹೆಸರಿಗೆ ವರ್ಗಾವಣೆಯಾಗಿರಲಿಲ್ಲ, ಖಾತೆಯೇ ಆಗದ ಸ್ಥಿರಾಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಲು ಅಥವಾ ಹಸ್ತಾಂತರಿಸಲು ಸಾಧ್ಯವೇ ಇಲ್ಲದಿರುವಾಗ ಆಸ್ತಿ ಹಸ್ತಾಂತರವಾಗಿ ತನಿಖೆಗೆ ಧಕ್ಕೆಯಾಗುತ್ತದೆ ಎಂಬ ಇ.ಡಿ ಆತಂಕಕ್ಕೆ ಆಧಾರವಿಲ್ಲ,'' ಎಂದು ನ್ಯಾಯಪೀಠ ಹೇಳಿದೆ.

''ಆರಂಭಿಕ ಹಂತದ ತಾತ್ಕಾಲಿಕ ಜಪ್ತಿ ಆದೇಶವೇ ಕಾನೂನುಬದ್ಧವಾಗಿ ದೋಷಪೂರಿತವಾಗಿದ್ದಾಗ ಅದರ ಆಧಾರದ ಮೇಲೆ ನಂತರದ ಪ್ರಾಧಿಕಾರಗಳು ನೀಡುವ ದೃಢೀಕರಣ ಆದೇಶಗಳೂ ಅಸಿಂಧುಗೊಳ್ಳುತ್ತವೆ,'' ಎಂದು ಅಭಿಪ್ರಾಯಪಟ್ಟ ಹೈಕೋರ್ಟ್, ಇ.ಡಿ ಆದೇಶವನ್ನು ರದ್ದುಗೊಳಿಸಿದೆ.

''ಅಲ್ಲದೆ, ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆಯ ಸೆಕ್ಷನ್ 5(1)ರಡಿ ಸೂಕ್ತ ಕಾರಣ ಮತ್ತು ಅಗತ್ಯ ಸಂದರ್ಭಗಳು ಎದುರಾದರೆ ಕಾನೂನು ಚೌಕಟ್ಟಿನಲ್ಲಿ ಅರ್ಜಿದಾರರ ವಿರುದ್ಧ ಹೊಸದಾಗಿ ವಿಚಾರಣಾ ಪ್ರಕ್ರಿಯೆ ಆರಂಭಿಸಬಹುದು,'' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನಡೆಸದೆ ಜಯನಗರ ಲೇಔಟ್ ನಿರ್ಮಾಣಕ್ಕೆ ಅರ್ಜಿದಾರರಾದ ಜಯಮ್ಮ ಅವರ ಜಮೀನನ್ನು ಬಳಸಿಕೊಂಡಿತ್ತು. ಅದಕ್ಕೆ ಪ್ರತಿಯಾಗಿ ಪರಿಹಾರದ ರೂಪದಲ್ಲಿ ಮುಡಾ ಜಯಮ್ಮಗೆ ಕೆಲವು ನಿವೇಶನಗಳನ್ನು ಕ್ರಯಪತ್ರದ ಮೂಲಕ ಮಂಜೂರು ಮಾಡಿತ್ತು. ಆದರೆ, ಈ ನಿವೇಶನಗಳ ಖಾತೆ ವರ್ಗಾವಣೆಗೆ ಕಂದಾಯ ಅಧಿಕಾರಿಗಳು ನಿರಾಕರಿಸಿದ್ದರು.

ಈ ನಡುವೆ, ಸ್ನೇಹಮಯಿ ಕೃಷ್ಣ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ದೂರಿನನ್ವಯ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದರು. ಅದರ ಬೆನ್ನಲ್ಲೇ ಇ.ಡಿ ಪ್ರಕರಣ ದಾಖಲಿಸಿಕೊಂಡು, ಜಯಮ್ಮಗೆ ಮಂಜೂರಾಗಿದ್ದ ನಿವೇಶನಗಳು 'ಅಪರಾಧದ ಮೂಲಕ ಗಳಿಸಿದ ಆಸ್ತಿ' ಎಂದು ಆರೋಪಿಸಿ ತಾತ್ಕಾಲಿಕ ಮುಟ್ಟುಗೋಲು ಆದೇಶ ಹೊರಡಿಸಿತ್ತು. ಅದನ್ನು ಪ್ರಶ್ನಿಸಿ ಜಯಮ್ಮ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಾರಿಗೆ ಮುಷ್ಕರಕ್ಕೆ ಹೇರಿದ್ದ ನಿರ್ಬಂಧ ವಿಸ್ತರಣೆ

ಬೆಂಗಳೂರು: ವೇತನ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ (ಕೆಎಸ್ಆರ್‌ಟಿಸಿ) ನೌಕರರ ಟ್ರೇಡ್ ಯೂನಿಯನ್ ಜಂಟಿ ಕ್ರಿಯಾ ಸಮಿತಿ ಮೇ 20ರಿಂದ ಕರೆ ನೀಡಿದ್ದ ಮುಷ್ಕರಕ್ಕೆ ನಿರ್ಬಂಧ ಹೇರಿ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಹೈಕೋರ್ಟ್ ಇದೇ 23ರವರೆಗೆ ವಿಸ್ತರಣೆ ಮಾಡಿದೆ.

ಅಲ್ಲದೆ, ಸಾರಿಗೆಯು ಅತ್ಯಗತ್ಯ ಸೇವೆಯಾಗಿದ್ದು, ಮುಷ್ಕರ ನಡೆಸಲು ಕಾನೂನಿನಲ್ಲಿ ಸಾರಿಗೆ ನಿಗಮದ ನೌಕರರಿಗೆ ಅನುಮತಿ ಇದೆಯೇ ಎಂಬ ಬಗ್ಗೆ ಉತ್ತರಿಸುವಂತೆ ಜಂಟಿ ಕ್ರಿಯಾ ಸಮಿತಿಗೆ ಮೌಖಿಕವಾಗಿ ಸೂಚಿಸಿದೆ.

ಮುಷ್ಕರ ಪ್ರಶ್ನಿಸಿ ಮನೆ ಕೆಲಸ ಮಾಡುತ್ತಿರುವ ಬೆಂಗಳೂರಿನ ಸಿ.ವೇದಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ. ಶ್ರೀಧರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠ, ''ಸಾರಿಗೆಯು ಅತ್ಯಗತ್ಯ ಸೇವೆಯಾಗಿದೆ. ಹೀಗಿದ್ದಾಗ ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾಗುವುದು ಏಕೆ? ಮುಷ್ಕರ ನಡೆಸಬಾರದು,'' ಎಂದು ಮೌಖಿಕವಾಗಿ ಹೇಳಿತು.

ಅದಕ್ಕೆ ಜಂಟಿ ಕ್ರಿಯಾ ಸಮಿತಿ ಪರ ವಕೀಲರು, ''ಕೈಗಾರಿಕಾ ಸಂಬಂಧ ಸಂಹಿತೆ ಪ್ರಕಾರ ಮುಷ್ಕರ ನಡೆಸುವ 14 ದಿನಗಳ ಮುನ್ನ ನೋಟಿಸ್ ನೀಡುವುದು ಕಡ್ಡಾಯ. ತದ ನಂತರವೇ ಮುಷ್ಕರ ನಡೆಸಬೇಕಾಗುತ್ತದೆ. ಅದರಂತೆ ಸಾರಿಗೆ ನಿಗಮಕ್ಕೆ ನೋಟಿಸ್ ನೀಡಲಾಗಿತ್ತು,'' ಎಂದರು.

ನಿಮಗೆ ಹಕ್ಕು ಎಲ್ಲಿದೆ?: ಆಗ ನ್ಯಾಯಪೀಠ, ''ಮುಷ್ಕರ ನಡೆಸಲು ಅನುಮತಿ ಇದೆಯೇ? ಸಾರಿಗೆಯು ಜನರ ಅತ್ಯಗತ್ಯ ಸೇವೆಯಾಗಿದೆ. ಈಗಾಗಲೇ ಹೈಕೋರ್ಟ್ ಮುಷ್ಕರ ನಡೆಸಬಾರದು, ಸರಕಾರದ ಜತೆ ಸಮಾಲೋಚನೆ ನಡೆಸುವಂತೆ ನಿಮಗೆ (ಜಂಟಿ ಕ್ರಿಯಾ ಸಮಿತಿ) ಸೂಚಿಸಿದೆ. ಅದರಂತೆ ನೀವು ನಿಮ್ಮ ಹಕ್ಕುಗಳ ಬಗ್ಗೆ ಸರಕಾರದೊಂದಿಗೆ ಸಮಾಲೋಚನೆ ನಡೆಸಬಹುದು. ಆದರೆ, ಮುಷ್ಕರ ನಡೆಸಲು ಕಾನೂನಿನಲ್ಲಿ ನಿಮಗೆ ಹಕ್ಕು ಎಲ್ಲಿದೆ?,'' ಎಂದು ಪ್ರಶ್ನಿಸಿತು. ಜಂಟಿ ಕ್ರಿಯಾ ಸಮಿತಿ ಪರ ವಕೀಲರು, ''ಹೈಕೋರ್ಟ್ ಆದೇಶದ ನಂತರ ಸಾರಿಗೆ ನೌಕರರು ಮುಷ್ಕರ ನಡೆಸಿಲ್ಲ, ಮುಷ್ಕರ ನಡೆಸುವ ಮುನ್ನ ಕೆಲವೊಂದು ಪ್ರಕ್ರಿಯೆ ಪಾಲಿಸಬೇಕಿದೆ. ಇನ್ನು ಸರಕಾರದ ಜತೆ ಸಮಾಲೋಚನೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸ್ವಲ್ಪ ಕಾಲಾವಕಾಶ ನೀಡಿದರೆ, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲಾಗುವುದು. ನ್ಯಾಯಾಲಯದ ಪ್ರಶ್ನೆಗಳಿಗೆ ಉತ್ತರಿಸಲಾಗುವುದು,'' ಎಂದು ತಿಳಿಸಿದರು.

ಅದನ್ನು ಪರಿಗಣಿಸಿದ ನ್ಯಾಯಪೀಠ, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಜಂಟಿ ಕ್ರಿಯಾ ಸಮಿತಿಗೆ ಎರಡು ವಾರ ಕಾಲಾವಕಾಶ ನೀಡಿ ವಿಚಾರಣೆಯನ್ನು ಜೂ.23ಕ್ಕೆ ಮುಂದೂಡಿತು.

'ಗೇಮ್ ಹಾಕಿ, ಕುಚ್ ನಹೀ ಬಾಕಿ'

ಖೇಲೋ ಮಾಸ್ಟರ್ ಸಂಸ್ಥೆ ವಿರುದ್ಧದ ಕ್ರಿಮಿನಲ್ ಕೇಸ್ ರದ್ದತಿಗೆ ನಕಾರ

ಬೆಂಗಳೂರು: ವಿದೇಶಗಳಲ್ಲಿ ನಡೆಯುವ ಹಾಕಿ ಪಂದ್ಯಾವಳಿಯಲ್ಲಿ ಆಡಿಸುವ ನೆಪದಲ್ಲಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ ಆರೋಪದ ಮೇರೆಗೆ ಖೇಲೊ ಮಾಸ್ಟರ್ ಸಂಸ್ಥೆಯ ಪದಾಧಿಕಾರಿಗಳ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದತಿಗೆ ಹೈಕೋರ್ಟ್ ಬುಧವಾರ ನಿರಾಕರಿಸಿದೆ.

ಖೇಲೊ ಮಾಸ್ಟರ್ ಸಂಸ್ಥೆಯ ಖಜಾಂಜಿ ಎ. ಎನ್.ಸೋಮಯ್ಯ, ಅಧ್ಯಕ್ಷ ಎಚ್. ಎಂ.ಪ್ರಸನ್ನ, ಕಾರ್ಯದರ್ಶಿ ಎನ್.ಮಧು ಮತ್ತು ತಂಡದ ಮ್ಯಾನೇಜರ್ ಪಿ.ಕೆ.ತೇಜಶ್ರೀ ಸಲ್ಲಿಸಿರುವ ಅರ್ಜಿ ಕುರಿತು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, ಅಂತಿಮ ವರದಿ ಸಲ್ಲಿಸಿದ ಬಳಿಕ ಅದನ್ನು ಪ್ರಶ್ನಿಸುವ ಸ್ವಾತಂತ್ರ್ಯ ಕಲ್ಪಿಸಿ ಅರ್ಜಿ ಹಿಂಪಡೆಯಲು ಅವಕಾಶ ಮಾಡಿಕೊಡಬೇಕು ಎಂಬ ಅರ್ಜಿದಾರರ ಮನವಿಯನ್ನು ಪುರಸ್ಕರಿಸಿ, ಅರ್ಜಿ ವಿಲೇವಾರಿ ಮಾಡಿತು.

ತನಿಖೆ ನಡೆಯಲೇಬೇಕಾದ ಪ್ರಕರಣ: ''ಬಡ ಹಾಕಿ ಆಟಗಾರರನ್ನು ವಂಚಿಸಿದ್ದೀರಿ. ಇದೇ ರೀತಿ ಕ್ರಿಕೆಟಿಗರನ್ನು ವಂಚಿಸಲು ಸಾಧ್ಯವೇ? ಇಲ್ಲ, ನಂಬಿಸಿ ಆಟಗಾರರನ್ನು ವಂಚಿಸಿರುವುದರಿಂದ ಇದು ತನಿಖೆ ನಡೆಯಲೇಬೇಕಾದ ಪ್ರಕರಣವಾಗಿದೆ. ಹಾಕಿ ಆಟ, ಆದರೆ, ಏನನ್ನೂ ಬಾಕಿ ಉಳಿಸಿಲ್ಲ (ಗೇಮ್ ಹಾಕಿ, ಕುಚ್ ನಹೀ ಬಾಕಿ),'' ಎಂದು ಪೀಠ ಮಾರ್ಮಿಕವಾಗಿ ನುಡಿಯಿತು.

''ಮೊದಲಿಗೆ ಕೊರಿಯಾದಲ್ಲಿ ನಡೆಯುವ ಹಾಕಿ ಟೂರ್ನಿಗೆ ಕರೆದೊಯ್ಯಲಾಗುವುದೆಂದು 15 ಆಟಗಾರರಿಂದ ತಲಾ 15,000 ರೂ. ವಸೂಲಿ ಮಾಡಲಾಗಿತ್ತು. ವೀಸಾಗೆ ಅಗತ್ಯ ದಾಖಲೆ ಒದಗಿಸಲು ಆಟಗಾರರು ವಿಫಲರಾಗಿದ್ದರಿಂದ ಅದು ಸಾಧ್ಯವಾಗಲಿಲ್ಲ, ಆನಂತರ ಆಸ್ಟ್ರೇಲಿಯಾದಲ್ಲಿ ಟೂರ್ನಿ ನಡೆಸಲಾಗುತ್ತದೆ ಎಂದು ಪ್ರತಿಯೊಬ್ಬ ಆಟಗಾರನಿಂದ 1.50 ಲಕ್ಷ ರೂ. ಸಂಗ್ರಹಿಸಲಾಗಿತ್ತು. ಅದಕ್ಕೂ ವೀಸಾ ಪಡೆಯಲು ಆಟಗಾರರು ದಾಖಲೆ ಒದಗಿಸಲು ಸಾಧ್ಯವಾಗಿರಲಿಲ್ಲ, ಆದರೆ, ಶ್ರೀಲಂಕಾ ಟೂರ್ನಿಗೆ ಆಟಗಾರರನ್ನು ಕರೆದೊಯ್ಯಲಾಗಿತ್ತು,'' ಎಂದು ಅರ್ಜಿದಾರರ ಪರ ವಕೀಲರು ನ್ಯಾಯಾಲಯಕ್ಕೆ ವಿವರಿಸಿದರು.

ಅದಕ್ಕೆ ಆಕ್ಷೇಪಿಸಿದ ದೂರುದಾರರ ಪರ ವಕೀಲರು, ''ಮೊದಲಿಗೆ ಕೊರಿಯಾಗೆ ಕರೆದೊಯ್ಯುವುದಾಗಿ ಹೇಳಿ 15 ಮಂದಿಯಿಂದ ತಲಾ 15 ಸಾವಿರ ರೂ. ಸಂಗ್ರಹಿಸಲಾಗಿತ್ತು. ಆನಂತರ ಆಸ್ಟ್ರೇಲಿಯಾಕ್ಕೆ ಕರೆದೊಯ್ಯುವುದಾಗಿ ಹೇಳಿ 17 ಮಂದಿಯಿಂದ ತಲಾ 1.30 ಲಕ್ಷ ಬ್ಯಾಂಕ್‌ಗೆ ವರ್ಗಾವಣೆ ಮಾಡಿಸಿಕೊಂಡಿದ್ದರ ಜತೆಗೆ, 1.70 ಲಕ್ಷ ರೂ. ನಗದನ್ನು ಸ್ವೀಕರಿಸಲಾಗಿದೆ. ಆಟಗಾರರ ಹೆಸರಿನಲ್ಲಿ ಪ್ರಾಯೋಜಕತ್ವದ ನೆಪದಲ್ಲೂ ಹಣ ಸಂಗ್ರಹಿಸಲಾಗಿದೆ. ಅದನ್ನು ಅರ್ಜಿದಾರರು ತಮ್ಮ ಖಾತೆಗೆ ಹಾಕಿಸಿಕೊಂಡಿದ್ದಾರೆ,'' ಎಂದು ಆರೋಪಿಸಿದರು.

ಆಗ ನ್ಯಾಯಪೀಠ,''ಎಷ್ಟು ಸಾರಿ ನೀವು ಜನರನ್ನು ವಂಚಿಸಲು ಸಾಧ್ಯ? ಕೊರಿಯಾ, ಆಸ್ಟ್ರೇಲಿಯಾ, ಶ್ರೀಲಂಕಾ.. ನಿಮ್ಮನ್ನು ಬಿಟ್ಟಿದ್ದರೆ ಅವರನ್ನು ನೀವು ಬೇರೆಯದೇ ಪ್ರದೇಶಕ್ಕೆ ಕರೆದೊಯ್ಯುತ್ತಿದ್ದಿರಿ ಎನಿಸುತ್ತದೆ,'' ಎಂದು ಟೀಕಿಸಿತು. ಅಲ್ಲದೆ, ''ಎಲ್ಲಾ ದೂರುದಾರರಿಗೂ ಹಣ ವಾಪಸ್ ನೀಡಬೇಕು,'' ಎಂದು ಸೂಚಿಸಿ ಅರ್ಜಿ ವಿಲೇವಾರಿ ಮಾಡಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ: ಬಿಡಿಎ/ಡಿಸಿಎಫ್/133/2026-27 ದಿನಾಂಕ:03.06.2026

ಇ-ಟೆಂಡರ್ ಪ್ರಕಟಣೆ

ನಾಡಪ್ರಭು ಕೆಂಪೇಗೌಡ ಬಡಾವಣೆಯ (ಮಾಗಡಿ ರಸ್ತೆ ಮತ್ತು ಮೈಸೂರು ರಸ್ತೆಗಳ ನಡುವೆ ಸಂಪರ್ಕ ಕಲ್ಪಿಸುವ ರಸ್ತೆ) ಎಂ.ಎ.ಆರ್.ರಸ್ತೆ ಉದ್ದಕ್ಕೂ 6000 ಅಲಂಕಾರಿಕ ಮರಗಳ ರಸ್ತೆ ಬದಿ ನೆಡುತೋಪು ನಿರ್ಮಾಣ ಮಾಡುವ ಕಾಮಗಾರಿಗೆ ಅಗತ್ಯವಿರುವ 14"X20" ಗಾತ್ರದ 10-12 ಅಡಿ ಉದ್ದದ ಎತ್ತರವಾದ ಸಸಿಗಳು, Bamboo Tree guards, ಆಧಾರ ಕಡ್ಡಿ (stakes) ಗಳನ್ನು ಸರಬರಾಜು ಮಾಡಿಕೊಳ್ಳುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ ಕೆಳಕಂಡಂತೆ ಇರುತ್ತದೆ.

ಕ್ರಸಂ.	ವಿವರ		ದಿನಾಂಕ
1	ಟೆಂಡರ್ ಲಭ್ಯವಾಗುವ ದಿನಾಂಕ		ದಿನಾಂಕ: 03.06.2026
2	ಟೆಂಡರ್ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಡೆಯ ದಿನಾಂಕ		ದಿನಾಂಕ: 08.06.2026 ಅಪರಾಹ್ನ 3.00 ಗಂಟೆಗೆ
3	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ		09.06.2026 ಅಪರಾಹ್ನ 3.00 ಗಂಟೆಗೆ
4	ಟೆಂಡರ್ ತೆರೆಯುವುದು	ತಾಂತ್ರಿಕ ಬಿಡ್	10.06.2026 ಅಪರಾಹ್ನ 3.10 ಗಂಟೆಗೆ
		ಆರ್ಥಿಕ ಬಿಡ್	ತಾಂತ್ರಿಕ ಬಿಡ್‌ಗಳ ಪರಿಶೀಲನೆಯ ನಂತರ
5	ಸದರಿ ದಿನದಂದು ಟೆಂಡರ್ ಪ್ರಕ್ರಿಯೆ ನಡೆಯದಿದ್ದಲ್ಲಿ/ಬಿಡ್ ಸ್ವೀಕರಿಸದಿದ್ದಲ್ಲಿ ಎರಡನೇ ಕರೆಯ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ		ದಿನಾಂಕ:16.06.2026 ಅಪರಾಹ್ನ 3.00 ಗಂಟೆಗೆ
6	ಟೆಂಡರ್ ತೆರೆಯುವುದು	ತಾಂತ್ರಿಕ ಬಿಡ್	ದಿನಾಂಕ:17.06.2026 ಅಪರಾಹ್ನ 3.10 ಗಂಟೆಗೆ
		ಆರ್ಥಿಕ ಬಿಡ್	ತಾಂತ್ರಿಕ ಬಿಡ್‌ಗಳ ಪರಿಶೀಲನೆಯ ನಂತರ

(ಎರಡನೇ ಟೆಂಡರ್ ಕರೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ)

ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆಯಿಂದ ಪರವಾನಗಿ ಪಡೆದಿರುವ ಅರ್ಹ ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಇ-ಪೋರ್ಟಲ್: https://kppp.karnataka.gov.in ಮೂಲಕ ವಿವರಗಳನ್ನು ವೀಕ್ಷಿಸಬಹುದಾಗಿದೆ. ಮತ್ತು ಹೆಚ್ಚಿನ ವಿವರಗಳಿಗೆ ಕಚೇರಿ ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಸಂಪರ್ಕಿಸಲು ಕೋರಿದೆ.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಅಪ್ರಾ, ಬೆಂಗಳೂರು

ನೇತಾಜಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.

ನಂ. 347-ಎಫ್, 1ನೇ ಮಹಡಿ, 10ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು-560011.

ಕಛೇರಿ ದೂರವಾಣಿ: 080-26658844 ಮೊಬೈಲ್: 93538 18284

ಮೊಬೈಲ್ ಮುಖ್ಯ ಕಾರ್ಯನಿರ್ಮಾಹಕ: 94485 13639

ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ ಹಾಗೂ ವಸೂಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ,

ಬೆಂಗಳೂರು

ಸ್ಥಿರ ಸ್ವತ್ತಿನ ಬಹಿರಂಗ ಹರಾಜು

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನೇತಾಜಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ಜಯನಗರ, ಬೆಂಗಳೂರು-11, ರಲ್ಲಿ ಸಾಲ ಪಡೆದು ಸುಸ್ತಿದಾರರಾಗಿ ಡಿಕ್ರಿಯಾಗಿರುವ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತನ್ನು ಬಹಿರಂಗ ಹರಾಜು ಮಾಡಲಾಗುವುದು. ಕೊಳ್ಳಲು ಇಚ್ಛಿಸುವವರು ಕೆಳಗೆ ಸೂಚಿಸಿರುವ ಸ್ವತ್ತಿನ ವಿಳಾಸದಲ್ಲಿ ಹಾಜರಿದ್ದು, ಕರ್ನಾಟಕ ಸಹಕಾರಿ ಸಂಘಗಳ ನಿಯಮ 38ರ ಮೇರೆಗೆ ಮಾರಾಟ ವಾಡಿಕೆಯಲ್ಲಿರುವ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದು.

ಕ್ರ ಸಂ	ಬಾಕಿದಾರರ ಹೆಸರು ಮತ್ತು ವಿಳಾಸ	ಸಿ.ಇ.ಪಿ. ಸಂಖ್ಯೆ	ಹರಾಜಾಗುವ ಸತ್ತಿನ ವಿವರ ಮತ್ತು ವಿಳಾಸ	ಚಕ್ಕುಬಂದಿ	ಬರಬೇಕಾದ ಮೊಬಲಗು
1.	1) ಶ್ರೀಮತಿ ಶೋಭ ಕೋಂ ಎಂ. ಸುಗುಮಾರ್ 2) ಶ್ರೀ ಕಲೈರಾಜ್ ಬಿನ್ ಎಲ್. ಮೊಜಪಿಳ್ಳೈ 3) ಶ್ರೀ ಮೋಹನ್ ರಾಜು ಕೆ.ಎಲ್ ಬಿನ್ ಲಕ್ಷ್ಮೀಪತಯ್ಯ ಕ್ರ.ಸಂ. 1 ಮತ್ತು 2ರ ವಿಳಾಸ ನಂ. 216, 4ನೇ ಮುಖ್ಯರಸ್ತೆ, ಕುಮಾರಸ್ವಾಮಿ ಲೇಔಟ್ 1ನೇ ಹಂತ, ಬೆಂಗಳೂರು-78 ಕ್ರ.ಸಂ. 3ರ ವಿಳಾಸ ನಂ. 1/1, 2ನೇ ಅಡ್ಡರಸ್ತೆ, ಒಬಳಯ್ಯ ಲೇನ್, ಲಕ್ಕಿ ಇನ್ ಹೋಟೇಲ್ ಹತ್ತಿರ, ಕಾಟನ್‌ಪೇಟೆ, ಬೆಂಗಳೂರು-53.	ಎಆರ್‌ಬಿ /50/ ಸಿ.ಇ.ಪಿ./ 01/ 2025-26	ಬಿ.ಡಿ.ಎ ನಿರ್ಮಿಸಿರುವ ಕುಮಾರಸ್ವಾಮಿ ಬಡಾವಣೆ 2ನೇ ಹಂತ, 4ನೇ ಮುಖ್ಯರಸ್ತೆ, ಗೋವಿನಾಯಕನ ಹಳ್ಳಿಯಲ್ಲಿ ಇರುವ ನಿವೇಶನ ಸಂಖ್ಯೆ 216, ವಾರ್ಡ್ ಸಂಖ್ಯೆ 182, ಪಿ.ಐ.ಡಿ ನಂ. 55-826-216, ಬೆಂಗಳೂರು-78	ಪೂರ್ವಕ್ಕೆ: ನಿವೇಶನ ಸಂಖ್ಯೆ 197 ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ನಿವೇಶನ ಸಂಖ್ಯೆ 217 ದಕ್ಷಿಣಕ್ಕೆ: ನಿವೇಶನ ಸಂಖ್ಯೆ 215 ಪೂರ್ವ-ಪಶ್ಚಿಮ 30ಅಡಿ ಮತ್ತು ಉತ್ತರ-ದಕ್ಷಿಣ 20ಅಡಿ ಒಟ್ಟು ವಿಸ್ತೀರ್ಣ : 600 ಚದರ ಅಡಿಗಳು	ರೂ. 44,74,547/- ದಿನಾಂಕ 12-6-2026 ಶುಕ್ರವಾರ ಬೆಳಗ್ಗೆ 12-00 ಗಂಟೆಗೆ

ಷರತ್ತುಗಳು: 1) ಬಹಿರಂಗ ಹರಾಜಿಗೆ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡುವುದಿಲ್ಲ, 2) ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹರಾಜಿಗೆ ಮುಂಚೆ ರೂ. 25,000/- ಗಳನ್ನು ಠೇವಣಿಯಾಗಿ (ಇ.ಎಂ.ಡಿ.) ಕಟ್ಟಬೇಕು, 3) ಹರಾಜಿನಲ್ಲಿ ಬಿಡ್ ನಿಂತ ತಕ್ಷಣ ಮೊಬಲಗಿನ ಶೇಕಡ 25 ರಷ್ಟು ಹಣವನ್ನು ತಕ್ಷಣ ಪಾವತಿ ಮಾಡಿ ರಸೀದಿಯನ್ನು ಪಡೆಯುವುದು, ಬಾಕಿ ಶೇಕಡ 75 ರಷ್ಟು ಮೊಬಲರು ಹಾಗೂ ನೋಂದಣಿ ವೆಚ್ಚವನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು, ತಪ್ಪಿದ್ದಲ್ಲಿ ಬಿಡ್‌ದಾರರು ಪಾವತಿ ಮಾಡಿದ ಮೊಬಲಗನ್ನು ವಾಪಸ್ಸು ಮಾಡಲಾಗುವುದಿಲ್ಲ. ಕಾನೂನು ಪ್ರಕಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು, 4) ಬಿಡ್ ಮೊಬಲಗು ಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವುದು ಅಥವಾ ತಿರಸ್ಕರಿಸುವುದು ಕೆ.ಸಿ.ಎಸ್. ರೂಲ್ಸ್ ಪ್ರಕಾರ ಮಾರಾಟಾಧಿಕಾರಿಯವರ ವಿವೇಚನೆಗೆ ಬಿಟ್ಟಿರುತ್ತದೆ, 5) ಹರಾಜಿನಲ್ಲಿ ಯೋಗ್ಯಬೆಲೆ ಬಾರದಿದ್ದಲ್ಲಿ ಸೊಸೈಟಿಯ ಪರವಾಗಿ ಬಿಡ್ ಮಾಡಿಕೊಂಡು ಕೊಳ್ಳುವ ಹಕ್ಕನ್ನು ಸೊಸೈಟಿ ಕಾಯ್ದಿರಿಸಿಕೊಂಡಿದೆ, 6) ಸ್ಥಿರಾಸ್ತಿಯು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು, 7) ಹರಾಜಿಗಿಟ್ಟ ಸ್ಥಿರಾಸ್ತಿಯ ವಿವರಣೆ ಮತ್ತು ವಿಸ್ತೀರ್ಣ ವಿಷಯದಲ್ಲಿ ಆಗಿರಬಹುದಾದ ಯಾವುದಾದರೂ ತಪ್ಪುಗಳಿಗೆ ಸಂಘದವರು ಜವಾಬ್ದಾರರಾಗಿರುವುದಿಲ್ಲ, 8) ಆಸ್ತಿ ತೆರಿಗೆ ಬಾಕಿ ಇದ್ದಲ್ಲಿ ಬಿಡ್ಡುದಾರರೆ ಭರಿಸತಕ್ಕದ್ದು, 9) ಹರಾಜಾದ ಆಸ್ತಿಗೆ ಸಂಬಂಧಪಟ್ಟ ವರ್ಗಾವಣೆಗೆ ತಗಲಬಹುದಾದ ಪೂರ್ತಿ ಖರ್ಚು-ವೆಚ್ಚಗಳನ್ನು ಅಧಿಕೃತ ಬಿಡ್ಡುದಾರರೆ ಭರಿಸತಕ್ಕದ್ದು.

ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ವಿವರಗಳನ್ನು ಸಂಘದ ಮುಖ್ಯ ಕಾರ್ಯ ನಿರ್ವಾಹಕರು ಹಾಗೂ ಮಾರಾಟಾಧಿಕಾರಿಯವರಿಂದ ಪಡೆಯಬಹುದು.

ಸಹಿ/- ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ ಹಾಗೂ ವಸೂಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.

ದಿನಾಂಕ : 17/04/2026
ಸ್ಥಳ : ಬೆಂಗಳೂರು

ಹೃದಯಾಘಾತ: ಯುವಕ ಸಾವು

ಧಾರವಾಡ: ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗಾಗಿ ಧಾರವಾಡಕ್ಕೆ ಬಂದಿದ್ದ ಯಾದಗಿರಿ ಜಿಲ್ಲೆ ಸುರಪುರ ಮೂಲದ ಯುವಕ ಮಾರುತಿ (25)ಬುಧವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಮೂರು ವರ್ಷಗಳ ಹಿಂದೆ ಧಾರವಾಡಕ್ಕೆ ಬಂದಿದ್ದ ಮಾರುತಿ, ರೂಮ್ ಮಾಡಿಕೊಂಡು ವ್ಯಾಸಾಂಗ ಮಾಡುತ್ತಿದ್ದರು. ಮಾರುತಿ ಮಂಗಳವಾರ ತಡರಾತ್ರಿ ಹೃಯಾಘಾತದಿಂದ ಮೃತಪಟ್ಟರು. ಸಂಬಂಧಿಕರು ಧಾರವಾಡಕ್ಕೆ ಬಂದಿದ್ದಾರೆ.

PM SHRI JAWAHAR NAVODAYA VIDYALAYA, MAVINAKERE,

HOLENARASIPURA TALUK, HASSAN DISTRICT - 573 211.

SHORT TERM TENDER NOTIFICATION - 2026-27

The sealed tenders are invited through two bid system (Technical & Financial) from the interested, reputed, registered, recognized firms/agencies, individuals having legal entity for the supply of 1) Rice 2) Bakery Items 3) Services of Barber (Hair Cutting) 4) Collection of Mess Waste. The tender forms can be obtained from the office of the undersigned on any working day from 05.06.2026 to 11.06.2026 between 10.00 AM to 4.00 PM on payment of Rs. 200/- (non-refundable). The sealed tenders will be received till 4.00 PM on 11.06.2026 and the same will be opened by the PAC of the Vidyalaya on 12.06.2026 at 11.30 A.M. in the Chamber of Principal, JNV, Hassan. The tender forms / details can also be downloaded from the Vidyalaya website: www.navodaya.gov.in/nvs/nvs-school/ HASSAN/en/home/

JNV, Mavinakere
Phone: 8116438494

Sd/- PRINCIPAL
JNV HASSAN

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ

(ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ)

ಅಧಿಸೂಚನೆ

ಬೆಂಗಳೂರು, 14 ಮೇ 2026

ಎಸ್.ಒ.2527(ಇ) ರೈಲ್ವೆ ಅಧಿನಿಯಮ, 1989 (1989ರ 24)ರ 20ಎ ಪ್ರಕರಣದ ಉಪ-ಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಾಗ ಕೇಂದ್ರ ಸರ್ಕಾರವು (ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಸಾರ್ವಜನಿಕ ಉದ್ದೇಶಕ್ಕಾಗಿ, ಭೂಮಿಯನ್ನು ಇಲ್ಲಿ ಲಗತ್ತಿಸಲಾದ ಅನುಸೂಚಿಯಲ್ಲಿ ನೀಡಲಾಗಿರುವ ಸಂಕ್ಷಿಪ್ತ ವಿವರಣೆ ಎಂದು ತೃಪ್ತಿಪಟ್ಟ ನಂತರ, ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾಗಿದೆ, ಅವುಗಳೆಂದರೆ. ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆಯ "ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ (ವಲಗೆರಹಳ್ಳಿ- ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ)" ನಡುವೆ ಕಿ.ಮೀ: 10/900 - 11/000 ರಲ್ಲಿ ಕಂದಾವಣೆ ಸಂಖ್ಯೆ 10 ರ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣ, ಈ ಮೂಲಕ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಘೋಷಿಸುತ್ತದೆ:

ಸದರಿ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್ ನಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಸದರಿ ಅಧಿನಿಯಮದ 20 ಡಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಂಥ ಭೂಮಿಯನ್ನು ಆಕ್ಷೇಪಣೆ ಸಲ್ಲಿಸಬಹುದು ಮತ್ತು ಅಂಥ ಭೂಮಿಯನ್ನು ಮೇಲೆ ಹೇಳಿದ ಉದ್ದೇಶಕ್ಕಾಗಿ ಬಳಸಬಹುದು:

ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು ಸಕ್ಷಮ ಪ್ರಾಧಿಕಾರ, ಬೆಂಗಳೂರು ವಿಶೇಷ ಭೂಸ್ವಾಧೀನ ಅಧಿಕಾರಿ ಮತ್ತು ಪ್ರಾದೇಶಿಕ ಆಯುಕ್ತರು, ಬೆಂಗಳೂರು ಪ್ರಾದೇಶಿಕ ಆಯುಕ್ತರಿಗೆ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನಕ್ಕಾಗಿ ಸಲ್ಲಿಸತಕ್ಕದ್ದು, ಅಂದರೆ "ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ (ವಲಗೆರಾಜಹಳ್ಳಿ- ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕು) ನಡುವೆ ಕಿ.ಮೀ.: 10/900 - 11/000 ರಲ್ಲಿ ಎಲ್.ಸಿ. ಸಂಖ್ಯೆ 10 ರ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣ, ಬೆಂಗಳೂರು ಜಿಲ್ಲೆ)" ಎಂದು ಲಿಖಿತವಾಗಿ ಮತ್ತು ಅದರ ಆಧಾರಗಳನ್ನು ನಿಗದಿಪಡಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರನಿಗೆ ವೈಯಕ್ತಿಕವಾಗಿ ಅಥವಾ ವಕೀಲರಿಂದ ಆಲಿಸಲ್ಪಡುವ ಅವಕಾಶವನ್ನು ನೀಡತಕ್ಕದ್ದು, ಮತ್ತು ಅಂಥ ಎಲ್ಲ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಅಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ, ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸಿದಂತೆ, ಆದೇಶದ ಮೂಲಕ, ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ನಿರಾಕರಿಸಬಹುದು:

ಸದರಿ ಅಧಿನಿಯಮದ 20 ಡಿ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರತಕ್ಕದ್ದು:

ಈ ಅಧಿಸೂಚನೆಯಡಿ ಬರುವ ಭೂ ಯೋಜನೆಗಳು ಮತ್ತು ಇತರ ವಿವರಗಳು ಲಭ್ಯವಿದ್ದು, ಆಸಕ್ತ ವ್ಯಕ್ತಿಯು ಸಕ್ಷಮ ಪ್ರಾಧಿಕಾರದ ಮೇಲೆ ತಿಳಿಸಿದ ಕಚೇರಿಯಲ್ಲಿ ಪರಿಶೀಲಿಸಬಹುದು.

ವೇಳಾಪಟ್ಟಿ

ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆಯಲ್ಲಿ ಕಿ.ಮೀ. 10/900 ರಿಂದ ಕಿ.ಮೀ. 11/000 ರವರೆಗಿನ ಭೂಮಿಯಲ್ಲಿ ಬರುವ ರಚನೆಗಳೊಂದಿಗೆ ಅಥವಾ ಇಲ್ಲದೆ ಸ್ವಾಧೀನಪಡಿಸಿ ಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ — ತಾಲ್ಲೂಕು: ಬೆಂಗಳೂರು ದಕ್ಷಿಣ
ಜಿಲ್ಲೆ: ಬೆಂಗಳೂರು — ಗ್ರಾಮ: ವಲಗೆರಹಳ್ಳಿ

ಕ್ರ ಸಂ.	ಸಮೀಕ್ಷೆ / ಪ್ಲಾಟ್ ನಂ.	ಭೂಮಿಯ ವಿಧ	ಭೂಮಿಯ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಘಟಕಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	69	ಒಣ	ಖಾಸಗಿ	0 ಜಿ-1.26 ಎ	0.0040
2	71	ಒಣ	ಖಾಸಗಿ	3 ಜಿ-0.21 ಎ	0.1532
3	72	ಒಣ	ಖಾಸಗಿ	9 ಜಿ-0.47 ಎ	0.4593
4	78	ಒಣ	ಖಾಸಗಿ	0 ಜಿ-1.26 ಎ	0.0040
		ಒಟ್ಟು		12 ಜಿ-3.20 ಎಎನ್	0.6205

ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2026-27/ಲ್ಯಾಂಡ್ ಎಸ್‌ಆರ್‌ಪಿ/1727

(ಪ್ರದೀಪ್ ಪುರಿ)
ಮುಖ್ಯ ಇಂಜಿನಿಯರ್-III/ನಿರ್ಮಾಣ/ಸಾಮಾನ್ಯ
ನೈಋತ್ಯ ರೈಲ್ವೆ, ಬೆಂಗಳೂರು ಕಂಟೋನ್ಮೆಂಟ್

PUB/176/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಕೌಟುಂಬಿಕ ಕೋರ್ಟ್‌ಗಳ ಅಧಿಕಾರ ವಿಸ್ತರಣೆ ಅಸಾಧ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

ಸಿವಿಲ್ ಪ್ರಕರಣಗಳ ವಿಚಾರಣೆ ನಡೆಸಿ ಪರಿಹಾರ ಕಂಡುಕೊಳ್ಳುವ ಅಧಿಕಾರವನ್ನು ಕೌಟುಂಬಿಕ ನ್ಯಾಯಾಲಯಕ್ಕೆ ವಿಸ್ತರಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಲ್ಲದೆ, ''ಕೌಟುಂಬಿಕ ನ್ಯಾಯಾಲಯದ ವ್ಯಾಪ್ತಿಯನ್ನು ಉತ್ತರಾಧಿಕಾರದ ಪ್ರಶ್ನೆ ಉದ್ಭವಿಸುವ ಪ್ರತಿಯೊಂದು ಆಸ್ತಿ ಹಕ್ಕು ಸಂಬಂಧಿತ ದಾವೆಗೂ ವಿಸ್ತರಿಸಿದರೆ, ಕೌಟುಂಬಿಕ ನ್ಯಾಯಾಲಯಗಳ ರಚನೆಯ ಉದ್ದೇಶವೇ ದುರ್ಬಲಗೊಳ್ಳುತ್ತದೆ. ಜತೆಗೆ, ಸಿವಿಲ್ ನ್ಯಾಯಾಲಯಗಳ ನಿಗದಿತ ಅಧಿಕಾರ ವ್ಯಾಪ್ತಿಯನ್ನು ಅತಿಕ್ರಮಣ ಮಾಡಿದಂತಾಗುತ್ತದೆ,'' ಎಂದು ತಿಳಿಸಿದೆ.

ಮೃತಪಟ್ಟ ಮಗನ ಆಸ್ತಿಗೂ ಅರ್ಜಿದಾರರಿಗೂ ಯಾವುದೇ ಸಂಬಂಧವಿಲ್ಲವೆಂದು ಘೋಷಿಸುವಂತೆ ಕೋರಿ ಮೃತರ ತಾಯಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಎಚ್.ಬಿ.ಶೋಭಾ (ಮೃತರ ಪತ್ನಿ) ಮತ್ತವರ ಮಕ್ಕಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ಮನ್ಮಥ ರಾವ್ ಅವರಿದ್ದ ಏಕಸದಸ್ಯ ಪೀಠ, ಈ ಆದೇಶ ನೀಡಿದೆ.

ಅಲ್ಲದೆ, ''ಕೌಟುಂಬಿಕ ನ್ಯಾಯಾಲಯಗಳ ಕಾಯಿದೆ ಕುಟುಂಬ ಸಂಬಂಧಿತ ವಿವಾದಗಳನ್ನು ಸರಳ ಹಾಗೂ ಸಂಧಾನದ ಮೂಲಕ ಇತ್ಯರ್ಥಪಡಿಸುವ ಉದ್ದೇಶದಿಂದ ರೂಪಿಸಲಾದ ವಿಶೇಷ ಕಾನೂನಾಗಿದೆ. ಸಿವಿಲ್ ಸ್ವರೂಪದ ಸಂಕೀರ್ಣ ವ್ಯಾಜ್ಯಗಳನ್ನು ನಿರ್ಧರಿಸಲು ಅದರ ಅಧಿಕಾರವನ್ನು ವಿಸ್ತರಿಸಲು ಸಾಧ್ಯವಿಲ್ಲ,'' ಎಂದು ಹೇಳಿದೆ.

''ಹಾಲಿ ಪ್ರಕರಣದಲ್ಲಿ ದಂಪತಿ ನಡುವಿನ ವೈವಾಹಿಕ ಕಲಹವನ್ನು ಬಗೆಹರಿಸುವ ಉದ್ದೇಶ ಇರಲಿಲ್ಲ, ಬದಲಾಗಿ, ಮೃತ ಜೆ.ಪಿ. ನಾರಾಯಣಸ್ವಾಮಿ ಅವರ ಆಸ್ತಿಯ ಮೇಲಿನ ಹಕ್ಕು ಪ್ರತಿಪಾದನೆಗಾಗಿ ವ್ಯಕ್ತಿಗಳ ಸ್ಥಾನಮಾನವನ್ನು ನಿರ್ಧರಿಸುವುದೇ ಮುಖ್ಯ ಉದ್ದೇಶವಾಗಿತ್ತು. ಹಾಗಾಗಿ, ಇದು ಕುಟುಂಬ ವಿವಾದವಲ್ಲ, ಸಂಕೀರ್ಣ ಸಿವಿಲ್ ವ್ಯಾಜ್ಯವಾಗಿದೆ,'' ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಈ ಹಿನ್ನೆಲೆಯಲ್ಲಿ ಕುಟುಂಬ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿದ ಹೈಕೋರ್ಟ್, ''ಪ್ರತಿವಾದಿಗಳ ಕಾನೂನು ಪ್ರತಿನಿಧಿಗಳು ಯಾವುದೇ ದೂರು ಹೊಂದಿದ್ದರೆ ಸಂಬಂಧಿತ ಸಿವಿಲ್ ನ್ಯಾಯಾಲಯದ ಮುಂದೆ ಹೊಸದಾಗಿ ದಾವೆ ಹೂಡಲು ಸ್ವತಂತ್ರರು,'' ಎಂದು ಹೇಳಿದೆ.

ಅರ್ಜಿದಾರರ ಪರ ವಕೀಲರು, ''ಪ್ರಕರಣ ಮೂಲತಃ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಸಿವಿಲ್ ವ್ಯಾಜ್ಯವಾಗಿದೆ. ಕುಟುಂಬ ನ್ಯಾಯಾಲಯಕ್ಕೆ ಇದರ ವಿಚಾರಣೆ ನಡೆಸುವ ಅಧಿಕಾರವಿಲ್ಲ, ಆದ್ದರಿಂದ ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು,'' ಎಂದು ಕೋರಿದರು.

ಪ್ರಕರಣದ ಹಿನ್ನೆಲೆ: ಮೃತರಾದ ಜೆ.ಪಿ. ನಾರಾಯಣಸ್ವಾಮಿ ಅವರ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ವಿವಾದ ಏರ್ಪಟ್ಟಿತ್ತು. ಮೃತರ ತಾಯಿಯು, ಅರ್ಜಿದಾರ ಮಹಿಳೆ ಮೃತ ನಾರಾಯಣ ಸ್ವಾಮಿ ಅವರ ಕಾನೂನುಬದ್ಧ ಪತ್ನಿಯಲ್ಲ ಹಾಗೂ ಆಕೆಯ ಇಬ್ಬರು ಮಕ್ಕಳು ಅವರ ಸಂತತಿಯವರಲ್ಲ, ನಾರಾಯಣಸ್ವಾಮಿ ಅವರ ಆಸ್ತಿಯಲ್ಲಿ ಯಾವುದೇ ಹಕ್ಕು ಕೇಳುವುದನ್ನು ತಡೆಯುವಂತೆ ಕೋರಿ ಶಾಶ್ವತ ತಡೆಯಾಜ್ಞೆಯನ್ನೂ ಕೋರಿದ್ದರು.

ಈ ಅರ್ಜಿಯನ್ನು ಕೌಟುಂಬಿಕ ನ್ಯಾಯಾಲಯ ವಿಚಾರಣೆಗೆ ಪರಿಗಣಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ ನಡೆಯುತ್ತಿದ್ದ ವೇಳೆ ಪಾರ್ವತಮ್ಮ 2020ರ ಫೆಬ್ರವರಿ 24ರಂದು ನಿಧನರಾದರು. ಬಳಿಕ ಅವರ ಇಬ್ಬರ ವಾರಸುದಾರರು ಪ್ರಕರಣವನ್ನು ಮುಂದುವರಿಸಿದ್ದರು.

ಹೈಕೋರ್ಟ್‌ಗೆ 6 ಜಸ್ಟೀಸ್‌ಗಳ ನೇಮಕಕ್ಕೆ ಶಿಫಾರಸು

■ **ವಿಕ ಸುದ್ದಿಲೋಕ** ಬೆಂಗಳೂರು

ಸೇವಾ ಜ್ಯೇಷ್ಠತೆ ಮತ್ತು ವೃತ್ತಿಪರತೆ ಆಧರಿಸಿ ಆರು ವಕೀಲರನ್ನು ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲು ತೀರ್ಮಾನಿಸಿದೆ.

ಸಿಜೆಐ ಸೂರ್ಯಕಾಂತ್ ನೇತೃತ್ವದಲ್ಲಿ ನಡೆದ ಕೊಲಿಜಿಯಂ ಸಭೆಯಲ್ಲಿ ವಕೀಲರಾದ ರಾಘವೇಂದ್ರ ಸೀತಾರಾಂ ಶ್ರೀವಾತ್ಸವ, ಹೇಮಾ ಕುಲಕರ್ಣಿ, ಸುಬ್ರಮಣ್ಯ ರಂಗಾರಾವ್, ಟಿ.ಪಿ.ವಿವೇಕಾನಂದ, ಬಿ.ಪ್ರಮೋದ್ ಮತ್ತು ಶಾಂತಿಭೂಷಣ್ ಅವರನ್ನು ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ನಿರ್ಧರಿಸಲಾಗಿದೆ. ಅದರಂತೆ ಕೇಂದ್ರ ಸರಕಾರಕ್ಕೆ ಅಧಿಕೃತ ನೇಮಕ ಪ್ರಕ್ರಿಯೆಗಳನ್ನು ಕೈಗೊಳ್ಳಲು ಆರು ಮಂದಿ ಹೆಸರುಗಳನ್ನು ಶಿಫಾರಸು ಮಾಡಿದೆ. ಆರು ಮಂದಿಯೂ ಹೈಕೋರ್ಟ್‌ನಲ್ಲಿ ಎರಡು ದಶಕಕ್ಕೂ ಅಧಿಕ ಕಾಲದಿಂದ ವಕೀಲಿಕೆ ಮಾಡುತ್ತಿದ್ದಾರೆ. ಆರ್.ಸುಬ್ರಮಣ್ಯ ಹಿಂದಿನ ಸರಕಾರದಲ್ಲಿ ಹೆಚ್ಚುವರಿ ಅಡ್ವೊಕೇಟ್ ಆಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ, ಬಿಬಿಎಂಪಿಯ ವಕೀಲರಾಗಿ ಹಲವು ಮಹತ್ವದ ಪ್ರಕರಣಗಳನ್ನು ಮುನ್ನಡೆಸಿದ್ದರು. ಎಚ್.ಶಾಂತಿಭೂಷಣ್ ಅವರು ಸದ್ಯ ಡೆಪ್ಯೂಟಿ ಸಾಲಿಸಿಟರ್ ಜನರಲ್ ಆಗಿ ಕರ್ನಾಟಕ ಹೈಕೋರ್ಟ್‌ನಲ್ಲಿ ಕೇಂದ್ರ ಸರಕಾರವನ್ನು ಪ್ರತಿನಿಧಿಸುತ್ತಿದ್ದಾರೆ.

ಕಳೆದ ವಾರವಷ್ಟೇ ಮೂವರು ನ್ಯಾಯಾಂಗ ಅಧಿಕಾರಿಗಳನ್ನು ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗಿದೆ. ಹೈಕೋರ್ಟ್‌ನ ಮೂರು ಪೀಠಗಳಿಗೆ ಒಟ್ಟು 62 ನ್ಯಾಯಮೂರ್ತಿಗಳ ಹುದ್ದೆಗಳು ಮಂಜೂರಾಗಿದ್ದು, ಶಿಫಾರಸುಗೊಂಡಿರುವ ವಕೀಲರ ಹೆಸರಿಗೆ ಒಪ್ಪಿಗೆ ದೊರೆತರೆ ನ್ಯಾಯಮೂರ್ತಿಗಳ ಸಂಖ್ಯೆ 54ಕ್ಕೆ ಏರಿಕೆಯಾಗಲಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/53/2024-25 ದಿನಾಂಕ: 02-06-2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ವಸತಿ ಮತ್ತು ಕೈಗಾರಿಕಾ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ವಸತಿ ಮತ್ತು ಕೈಗಾರಿಕಾ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ಅಂಕೋನಹಳ್ಳಿ ಗ್ರಾಮ			
1	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ. ಲಿ.,	09	01-05
2		11/1	01-02
ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ದೊಡ್ಡೇನಹಳ್ಳಿ ಗ್ರಾಮ			
3	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ. ಲಿ.,	77/1	01-00
4		81/2	02-00

ಷರಾ:- ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ / ಕೈಗಾರಿಕೆ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/956/ಅಡ್ವಟೋರ್/2026-27

ಮಲೆನಾಡು, ಕರಾವಳಿಯಲ್ಲಿ ತಂಪು ತಂದ ಮಳೆ

ಮಂಗಳೂರು / ಶಿವಮೊಗ್ಗ: ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗದ ಹಲವೆಡೆ ಮಂಗಳವಾರ ರಾತ್ರಿಯಿಂದ ಬುಧವಾರದವರೆಗೆ ಸಾಧಾರಣ ಮಳೆ ಸುರಿದಿದೆ. ಶಿವಮೊಗ್ಗ ಜಿಲ್ಲೆಯ ಅನೇಕ ಕಡೆ ಸೋನೆ ಮಳೆ ಆಗಿದೆ.

ಕಾಸರಗೋಡು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಬಹುತೇಕ ಭಾಗಗಳಲ್ಲಿ ಆಗಾಗ ಮಳೆ ಆಗಿದೆ.

ತಂಪು ಮೂಡಿಸಿದ ಸೋನೆ ಮಳೆ: ಶಿವಮೊಗ್ಗ ಜಿಲ್ಲಾದ್ಯಂತ ಬುಧವಾರ ಸೋನೆ ಮಳೆ ಸುರಿಯಿತು. ತೀರ್ಥಹಳ್ಳಿ, ಹೊಸನಗರ ಮತ್ತು ಸಾಗರದಲ್ಲಿ ಮಳೆಯ ತೀವ್ರತೆ ಸ್ವಲ್ಪ ಜಾಸ್ತಿ ಇತ್ತು. ಮೋಡ ಕವಿದ ವಾತಾವರಣ ಮತ್ತು ಸೋನೆ ಮಳೆಯಿಂದಾಗಿ ವಾತಾವರಣದಲ್ಲಿ ದಿಢೀರ್ ಬದಲಾವಣೆಯಾಗಿದೆ. ಕನಿಷ್ಠ ಉಷ್ಣಾಂಶ 21ಡಿಗ್ರಿ ಮತ್ತು ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದು ವಾತಾವರಣದಲ್ಲಿ ತಂಪು ಆವರಿಸಿದೆ. ಮಾಸ್ತಿಕಟ್ಟೆಯಲ್ಲಿ ಅತಿ ಹೆಚ್ಚು46 ಮಿ.ಮೀ. ಮಳೆಯಾಗಿದೆ.

ಸಿಡಿಲು ಬಡಿದು 2 ಎತ್ತು ಸಾವು: ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವ್ಯಾಸಾಪುರ ತಾಂಡಾದ ಮನೆಯ ಆವರಣದಲ್ಲಿ ಬುಧವಾರ ಸಿಡಿಲು ಬಡಿದು ಎರಡು ಎತ್ತುಗಳು ಮೃತಪಟ್ಟಿವೆ.

ಈ ಎತ್ತುಗಳು ವೆಂಕಟೇಶ್ ನಾಯ್ಕ ಅವರಿಗೆ ಸೇರಿದ್ದವು. ಸ್ಥಳಕ್ಕೆ ಉಪ ತಹಸೀಲ್ದಾರ್ ಜಿ.ಶಿವಕುಮಾರಗೌಡ ಭೇಟಿ ನೀಡಿದ್ದರು.

KSGEA
ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ
ಕಬ್ಬನ್ ಉದ್ಯಾನವನ, ಬೆಂಗಳೂರು
ರಾಜ್ಯದ ಮುಖ್ಯಮಂತ್ರಿಗಳಾದ
ಶ್ರೀ ಡಿ.ಕೆ.ಶಿವಕುಮಾರ್
ಅವರಿಗೆ ಹಾಗೂ ಉಪ ಮುಖ್ಯಮಂತ್ರಿಗಳಾದ
ಡಾ|| ಜಿ.ಪರಮೇಶ್ವರ್
ಅವರಿಗೆ ಹಾಗೂ ಸರ್ಕಾರದ ಎಲ್ಲಾ ಸಚಿವರಿಗೆ
ಹೃತ್ಪೂರ್ವಕ ಅಭಿನಂದನೆಗಳು
ಸಿ.ಎಸ್.ಷಡಾಕ್ಷರಿ
ರಾಜ್ಯಾಧ್ಯಕ್ಷರು
ಶುಭಾಶಯ ಕೋರುವವರು
ಜಿಲ್ಲಾಧ್ಯಕ್ಷರು, ರಾಜ್ಯ ಸಂಘದ ಪದಾಧಿಕಾರಿಗಳು, ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರು, ಜಿಲ್ಲೆಯ ಕಾರ್ಯದರ್ಶಿ, ಖಜಾಂಚಿ, ರಾಜ್ಯ ಪರಿಷತ್ ಸದಸ್ಯರು, ತಾಲ್ಲೂಕು/ಯೋಜನಾ ಶಾಖೆಯ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ರಾಜ್ಯ ಪರಿಷತ್ ಸದಸ್ಯರು, ಜಿಲ್ಲಾ-ತಾಲ್ಲೂಕು-ಯೋಜನಾ ಶಾಖೆಯ ಎಲ್ಲಾ ಪದಾಧಿಕಾರಿಗಳು ಮತ್ತು ನಿರ್ದೇಶಕರು, ರಾಜ್ಯದ ಎಲ್ಲಾ ಇಲಾಖೆಗಳ ವೃಂದ ಸಂಘಗಳ ಅಧ್ಯಕ್ಷರು-ಪದಾಧಿಕಾರಿಗಳು.
ಎಸ್. ಬಸವರಾಜು
ಪ್ರಧಾನ ಕಾರ್ಯದರ್ಶಿ
ವಿ.ವಿ.ಶಿವರುದ್ರಯ್ಯ
ರಾಜ್ಯ ಖಜಾಂಚಿ
ಮಲ್ಲಿಕಾರ್ಜುನ ಬಿ. ಬಳ್ಳಾರಿ
ಗೌರವಾಧ್ಯಕ್ಷರು
ಶಂಭುಗೌಡ ಎಸ್.
ಕಾರ್ಯಾಧ್ಯಕ್ಷರು
ನಾಗರಾಜು ಆರ್. ಜಮ್ಮನ್ನವರ
ಹಿರಿಯ ಉಪಾಧ್ಯಕ್ಷರು
ಸುರೇಶ್ ಸಿ. ಶೆಡಶ್ಯಾಳ
ಹಿರಿಯ ಉಪಾಧ್ಯಕ್ಷರು
ಆರ್. ಮೋಹನ್‌ಕುಮಾರ್
ಹಿರಿಯ ಉಪಾಧ್ಯಕ್ಷರು

ಟಿ20 ನಾಯಕತ್ವದಿಂದ ಸೂರ್ಯಗೆ ಕೊಕ್?

ಮುಲ್ಲಾನ್‌ಪುರ: ಸೂರ್ಯಕುಮಾರ್ ಯಾದವ್ ಅವರನ್ನು ಭಾರತ ಟಿ20 ಕ್ರಿಕೆಟ್ ತಂಡದಿಂದ ಕೆಳಗಿಳಿಸಲು ಬಿಸಿಸಿಐ ಯೋಜಿಸಿದೆ. ಈ ಸಂಬಂಧ ಮಂಡಳಿಯ ಅಪೆಕ್ಸ್ ಕೌನ್ಸಿಲ್ ಅವರಿಗೆ ಈ ಕುರಿತು ಮಾಹಿತಿ ನೀಡಿದೆ ಎಂದು ವರದಿಯಾಗಿದೆ. ಶ್ರೇಯಸ್ ಅಯ್ಯರ್ ಮತ್ತು ತಿಲಕ್ ವರ್ಮಾ ಟಿ20 ತಂಡದ ನಾಯಕತ್ವ ವಹಿಸಿಕೊಳ್ಳುವ ಆಕಾಂಕ್ಷಿಗಳಲ್ಲಿ ಪ್ರಮುಖರಾಗಿದ್ದಾರೆ. ಸೂರ್ಯಕುಮಾರ್ ಅವರನ್ನು ನಾಯಕತ್ವದಿಂದ ತೆಗೆದು ಹಾಕಿದರೆ, ಸುಮಾರು 18 ತಿಂಗಳಿಂದಲೂ ನಿಸ್ತೇಜ ಪ್ರದರ್ಶನ ನೀಡಿರುವ ಸೂರ್ಯಕುಮಾರ್ ತಂಡದಲ್ಲಿ ಸ್ಥಾನ ಕಳೆದುಕೊಳ್ಳುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

ಚೆಸ್: ಆನಂದ್ ದಾಖಲೆ ಸರಿಗಟ್ಟಿದ ಪ್ರಜ್ಞಾನಂದ

ಓಸ್ಲೊ(ನಾರ್ವೆ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ, ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್‌ನಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ 2ನೇ ಬಾರಿ ಜಯ ಗಳಿಸುವುದರೊಂದಿಗೆ ದಿಗ್ಗಜ ಆಟಗಾರ ವಿಶ್ವನಾಥ್ ಆನಂದ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ.

ಮೇ 27ರಂದು ಮೂರನೇ ಸುತ್ತಿನಲ್ಲಿ ಕಾರ್ಲ್‌ಸನ್ ಅವರನ್ನು ಬಿಳಿ ಕಾಯಿಗಳಿಂದ ಸೋಲಿಸಿದ್ದ ಚೆನ್ನೈನ 20 ವರ್ಷದ ಆಟಗಾರ ಬುಧವಾರ ನಡೆದ 8ನೇ ಸುತ್ತಿನಲ್ಲಿ ಕಪ್ಪು ಕಾಯಿಗಳೊಂದಿಗೆ ಹಿಂದಿನ ಸಾಧನೆಯನ್ನು ಪುನರಾವರ್ತಿಸಿದರು. ಈ ಮೂಲಕ ಒಂದೇ ಟೂರ್ನಿಯಲ್ಲಿ ಎರಡು ಬಾರಿ ಕಾರ್ಲ್‌ಸನ್ ವಿರುದ್ಧ ಗೆದ್ದ ಸಾಧನೆ ತೋರಿದರು. 2024 ರ ಆವೃತ್ತಿಯಲ್ಲೂ ಇದೇ ಪಂದ್ಯಾವಳಿ' ಯಲ್ಲಿ ಪ್ರಜ್ಞಾನಂದ ಕಾರ್ಲ್‌ಸನ್ ಅವರನ್ನು ಸೋಲಿಸಿದ್ದರು.

ಕಳೆದ 19 ವರ್ಷಗಳ ಶಾಸ್ತ್ರೀಯ ಚೆಸ್‌ನಲ್ಲಿ ಇದೇ ಮೊದಲ ಬಾರಿಗೆ, ಆಟಗಾರನೊಬ್ಬ ಒಂದೇ ಪಂದ್ಯಾವಳಿಯಲ್ಲಿ ಎರಡು ಬಾರಿ ನಾರ್ವೆಯ ಶ್ರೇಷ್ಠ ಆಟಗಾರರನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ವರದಿಯಾಗಿದೆ. ಇದಕ್ಕೂ ಮುನ್ನ ಸ್ವತಃ ಭಾರತೀಯ ದಂತಕಥೆ ವಿಶ್ವನಾಥನ್ ಆನಂದ್ ಅವರು, 2007ರಲ್ಲಿ ಲಿನಾರೆಸ್ ಅಂತಾರಾಷ್ಟ್ರೀಯ ಚೆಸ್ ಪಂದ್ಯಾವಳಿಯಲ್ಲಿ ಮ್ಯಾಗ್ನಸ್ ಅವರನ್ನು ಎರಡು ಬಾರಿ ಸೋಲಿಸಿದ್ದರು.

ಕ್ರೀಡಾ ಉತ್ತೇಜನಕ್ಕೆ ಪಿಎಸ್‌ಬಿ, ಶ್ರೀರಾಮ್ ಫೈನಾನ್ಸ್ ಒಪ್ಪಂದ

ಬೆಂಗಳೂರು: ದೇಶಾದ್ಯಂತ ಬ್ಯಾಡ್ಮಿಂಟನ್ ಸೇರಿದಂತೆ ಕ್ರೀಡೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್ ಬೆಂಗಳೂರಿನ ಪಡುಕೋಣೆ ಸ್ಕೂಲ್ ಆಫ್ ಬ್ಯಾಡ್ಮಿಂಟನ್ (ಪಿಎಸ್‌ಬಿ) ಜತೆ ಒಪ್ಪಂದ ಮಾಡಿಕೊಂಡಿದೆ.

ಈ ವೇಳೆ ಮಾತನಾಡಿದ ದಿಗ್ಗಜ ಆಟಗಾರ ಪ್ರಕಾಶ್ ಪಡುಕೋಣೆ, ''ದೇಶದಲ್ಲಿ ಬ್ಯಾಡ್ಮಿಂಟನ್ ಬೆಳವಣಿಗೆಗೆ ಇದು ಇನ್ನಷ್ಟು ಪೂರಕವಾಗಲಿದೆ,'' ಎಂದರು. ಇದಲ್ಲದೆ. ''ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮಲು ಭಾರತಕ್ಕೆ ಇದು ಅತ್ಯುತ್ತಮ ಸಮಯವಾಗಿದೆ. ಆಟಗಾರರಿಗೆ ಸದ್ಯ ಉತ್ತಮ ಬೆಂಬಲ ಸಿಗುತ್ತಿದ್ದು, ಇದನ್ನು ಸಮರ್ಥವಾಗಿ ಬಳಸಿಕೊಂಡು ಇನ್ನಷ್ಟು ಪರಿಣಾಮಕಾರಿ ಪ್ರದರ್ಶನ ನೀಡಬೇಕಿದೆ,'' ಎಂದು ಆಗ್ರಹಿಸಿದರು.

ಡಯಾನಾ ಶ್ನೈಡರ್ ಎದುರು ಮಂಡಿಯೂರಿದ ನಂ.1 ಆಟಗಾರ್ತಿ

ಸಬಲೆಂಕಾಗೆ ಬಿಗ್ ಶಾಕ್

ಪ್ಯಾರಿಸ್: ಅತ್ಯಂತ ನೀರಸ ಪ್ರದರ್ಶನ ನೀಡಿದ ವಿಶ್ವದ ನಂ. 1 ಆಟಗಾರ್ತಿ ಅರಿನಾ ಸಬಲೆಂಕಾ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ಸ್‌ನಲ್ಲಿ ಹೋರಾಟ ಕೊನೆಗೊಳಿಸಿದ್ದಾರೆ.

ರೋಲ್ಯಾಂಡ್ ಗ್ಯಾರೋಸ್‌ನ ಫಿಲಿಪ್ ಚಾಟ್ರಿಯಾರ್ ಕೋರ್ಟ್‌ನಲ್ಲಿ ಬುಧವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಅಂತಿಮ 8ರ ಘಟ್ಟದ ಪಂದ್ಯದಲ್ಲಿ ಬೆಲಾರಸ್‌ನ ಆಟಗಾರ್ತಿ ಅರಿನಾ 6-3, 5-7, 0-6 ಸೆಟ್‌ಗಳಿಂದ ರಷ್ಯಾದ ಡಯಾನಾ ಶ್ನೈಡರ್ ವಿರುದ್ಧ ದೊಡ್ಡ ಆಘಾತ ಅನುಭವಿಸಿದರು. ಇದರೊಂದಿಗೆ ಹಾಲಿ ಟೂರ್ನಿಯಲ್ಲಿ ಆಘಾತ ಕಂಡ ಪ್ರಮುಖ ಆಟಗಾರ್ತಿಯ ಸಾಲಿಗೆ ಅರಿನಾ ಕೂಡ ಸೇರ್ಪಡೆಯಾದರು.

28 ವರ್ಷದ ಅರಿನಾ, ಆರಂಭಿಕ ಸೆಟ್ ಗೆದ್ದು ಪ್ರಾಬಲ್ಯ ಸಾಧಿಸಿದರು. ಆದರೆ ನಂತರದ ಎರಡು ಸೆಟ್‌ಗಳಲ್ಲಿ 22 ವರ್ಷದ ಡಯಾನಾ, ಅಧಿಕಾರಯುತ ಪ್ರದರ್ಶನ ತೋರಿದರು. ಅದರಲ್ಲೂ ಮೂರನೇ ಸೆಟ್‌ನಲ್ಲಿ ಏಕೈಕ ಗೇಮ್ ಗೆಲ್ಲಲು ಅರಿನಾಗೆ ಅವಕಾಶ ಕಲ್ಪಿಸದ ಡಯಾನಾ ಪ್ರಶಸ್ತಿ ಫೇವರಿಟ್ ಆಗಿ ಹೊರಹೊಮ್ಮಿದರು. ಅರಿನಾ ಸ್ಪರ್ಧೆಯಿಂದ ಹೊರಬೀಳುವುದರೊಂದಿಗೆ 8ನೇ ಶ್ರೇಯಾಂಕಿತೆ ರಷ್ಯಾದ ಮಿರಾ ಆ್ಯಂಡ್ರೀವಾ ಮಹಿಳಾ ಸಿಂಗಲ್ಸ್‌ನಲ್ಲಿ ಕಣದಲ್ಲಿರುವ ಅತ್ಯಧಿಕ ಶ್ರೇಯಾಂಕಿತ ಆಟಗಾರ್ತಿಯಾಗಿದ್ದಾರೆ. ಡಯಾನಾ ನಾಲ್ಕರ ಘಟ್ಟದ ಪಂದ್ಯದಲ್ಲಿ ಶ್ರೇಯಾಂಕ ರಹಿತೆ ಮಜಾ ಚ್ವಾಲಿನ್ಸ್ಕಾ ಅವರ ಸವಾಲು ಎದುರಿಸಲಿದ್ದಾರೆ.

ಗೆಲುವಿನ ಸಂಭ್ರಮ: ವಿಶ್ವದ ನಂ. 1 ಆಟಗಾರ್ತಿ ಅರಿನಾ ಸಬಲೆಂಕಾ ವಿರುದ್ಧ ಗೆದ್ದ ಡಯಾನಾ ಶ್ನೈಡರ್.

ಈ ಮಧ್ಯೆ, ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 26ನೇ ಶ್ರೇಯಾಂಕಿತ ಆಟಗಾರ ಮೆನ್ಸಿಕ್ 6-4, 6-3, 7-6(7-3) ಸೆಟ್‌ಗಳಿಂದ ಫಾನ್ಸ್ಕಾ ಎದುರು ಗೆದ್ದು ನಾಲ್ಕರ ಘಟ್ಟಕ್ಕೆ ಹೆಜ್ಜೆ ಇಟ್ಟರು.

ಬಾಲಾಜಿ-ಡೆಮೊಲೈನರ್ ಜೋಡಿಗೆ ನಿರಾಸೆ: ಭಾರತದ ಟೆನಿಸ್ ಆಟಗಾರ ಎನ್.ಶ್ರೀರಾಮ್ ಬಾಲಾಜಿ ಮತ್ತು ಬ್ರೆಜಿಲ್‌ನ ಜತೆಗಾರ ಮಾರ್ಸೆಲೊ ಡೆಮೊಲೈನರ್ ಅವರ ಸ್ಫೂರ್ತಿದಾಯಕ ಪ್ರದರ್ಶನ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕೊನೆಗೊಂಡಿತು. ಭಾರತ-ಬ್ರೆಜಿಲ್ ಜೋಡಿ 3-6, 4-6 ನೇರ ಸೆಟ್‌ಗಳಿಂದ ಎರಡನೇ ಶ್ರೇಯಾಂಕಿತ ಹ್ಯಾರಿ ಹೆಲಿಯೋವಾರಾ ಮತ್ತು ಹೆನ್ರಿ ಪ್ಯಾಟನ್ ವಿರುದ್ಧ ಪರಾಭವಗೊಂಡಿತು. 1 ಗಂಟೆ 17 ನಿಮಿಷ ನಡೆದ ಹೋರಾಟದಲ್ಲಿ ಬಾಲಾಜಿ ಮತ್ತು ಮಾರ್ಸೆಲೊ ಸ್ಥಿರ ಆಟ ಪ್ರದರ್ಶಿಸಲು ವಿಫಲಗೊಂಡರು.

ಸಿರಾಜ್, ಪ್ರಸಿದ್ಧ್ ಕಠಿಣ ತಾಲೀಮು

ಆಫ್ಘನ್ ವಿರುದ್ಧ ಜೂ.6ರಿಂದ ಟೆಸ್ಟ್ ಶುರು

ಮುಲ್ಲಾನ್‌ಪುರ: ಅಫಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯ ಜೂನ್ 6ರಂದು ಇಲ್ಲಿ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಟೀಮ್ ಇಂಡಿಯಾ ಸದಸ್ಯರು ಬುಧವಾರ ಅಭ್ಯಾಸ ನಡೆಸಿದರು. ವಿಶೇಷವಾಗಿ ವೇಗಿಗಳಾದ ಮೊಹಮ್ಮದ್ ಸಿರಾಜ್ ಮತ್ತು ಪ್ರಸಿದ್ಧ್ ಕೃಷ್ಣ ತೀವ್ರ ತಾಪಮಾನದ ನಡುವೆಯೂ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಕಠಿಣ ತಾಲೀಮು ನಡೆಸಿದರು.

ಟೆಸ್ಟ್ ಪಂದ್ಯದ ಬಳಿಕ ಉಭಯ ತಂಡಗಳ ನಡುವೆ ಮೂರು ಪಂದ್ಯಗಳ ಏಕದಿನ ಸರಣಿ ನಡೆಯಲಿದೆ. ಈ ಮಧ್ಯೆ ಎರಡು ತಿಂಗಳಿಗೂ ಹೆಚ್ಚು ಕಾಲ ನಡೆದ ಐಪಿಎಲ್‌ನಲ್ಲಿ ಪಾಲ್ಗೊಂಡ ಬಳಿಕ ಬೌಲರ್‌ಗಳ ಕಾರ್ಯಒತ್ತಡದ ಬಗ್ಗೆ ಕೆಲವು ಪ್ರಶ್ನೆಗಳು ಎದ್ದಿವೆ. ತಂಡದ ಹಿರಿಯ ವೇಗಿ ಸಿರಾಜ್ ಅವರ ಫಿಟ್ನೆಸ್ ಕುರಿತು ಕಾಳಜಿ ಇಲ್ಲದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎನ್ನಲಾಗಿದೆ. ದೈಹಿಕವಾಗಿ ಸದೃಢರಿಲ್ಲದಿದ್ದರೆ ಸುಡು ಬಿಸಿಲನ್ನು ತಡೆದುಕೊಳ್ಳುವ ಸಾಮರ್ಥ್ಯ ಅವರಿಗೆ ಇರುತ್ತಿರಲಿಲ್ಲ ಎನ್ನಲಾಗಿದೆ.

ಕೆ.ಎಲ್. ರಾಹುಲ್ ಕೂಡ ನೆಟ್ಸ್‌ನಲ್ಲಿ ಸಾಕಷ್ಟು ಹೊತ್ತು ಬೆವರು ಹರಿಸಿದರು. ಮೀಸಲು ಬೌಲಿಂಗ್ ಬಳಗದಲ್ಲಿ ಕಾಣಿಸಿಕೊಂಡಿರುವ ವೇಗಿ ಔಕಿಬ್ ನಬಿ ದಾರ್, ಹಿರಿಯ ಆಟಗಾರರಿಗೆ ಕೆಲ ಸಮಯ ಬೌಲಿಂಗ್ ಮಾಡಿದರು.

ಪ್ರಿ ಕ್ವಾರ್ಟರ್‌ಫೈನಲ್ಸ್‌ಗೆ ಕನ್ನಡಿಗ ಆಯುಷ್

ಇಂಡೊನೇಷ್ಯಾ ಓಪನ್

ಸಾತ್ವಿಕ್-ಚಿರಾಗ್ ಜೋಡಿ ರಿಟೈರ್ ಹರ್ಟ್

ಜಕಾರ್ತ: ಆರಂಭಿಕ ಹಿನ್ನಡೆಯ ಹೊರತಾಗಿಯೂ ಭಾರತದ ಯುವ ಷಟ್ಲರ್ ಆಯುಶ್ ಶೆಟ್ಟಿ ಇಲ್ಲಿ ನಡೆಯುತ್ತಿರುವ ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಿ ಕ್ವಾರ್ಟರ್‌ಫೈನಲ್ಸ್ ತಲುಪಿದ್ದಾರೆ. ಈ ಮಧ್ಯೆ, ಪುರುಷರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಆರಂಭಿಕ ಪಂದ್ಯದಲ್ಲಿ ಗಾಯಗೊಂಡು ರಿಟೈರ್ ಹರ್ಟ್ ಆಗಿ ಹೊರಬಿದ್ದಿತು.

ಬುಧವಾರ ನಡೆದ ಪುರುಷರ ಸಿಂಗಲ್ಸ್‌ನ ಆರಂಭಿಕ ಪಂದ್ಯದಲ್ಲಿ 20 ವರ್ಷದ ಕನ್ನಡಿಗ ಆಯುಷ್, 8-21, 22-20, 21-15 ಗೇಮ್‌ಗಳಲ್ಲಿ 15ನೇ ಶ್ರೇಯಾಂಕಿತ ಚೀನಾದ ಹಾಂಗ್ ಯಾಂಗ್ ವೆಂಗ್ ವಿರುದ್ಧ ಜಯಭೇರಿ ಬಾರಿಸಿದರು. 66 ನಿಮಿಷ ನಡೆದ ಜಿದ್ದಾಜಿದ್ದಿನ ಹೋರಾಟದ ಆರಂಭಿಕ ಗೇಮ್‌ನಲ್ಲಿ ಹಿನ್ನಡೆ ಕಂಡ ಕರ್ನಾಟಕದ ಆಟಗಾರ ನಂತರ ಎರಡು ಗೇಮ್‌ಗಳಲ್ಲಿ ಸ್ಥಿರತೆ ಕಾಯ್ದುಕೊಂಡು ಸಂಪೂರ್ಣ ಹಿಡಿತ ಸಾಧಿಸಿದರು. ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಆಯುಷ್, ಮುಂದಿನ ಸುತ್ತಿನಲ್ಲಿ ಹಾಂಕಾಂಗ್‌ನ ಲೀ ಚೆಯುಕ್ ಯಿಯು ಅವರ ಸವಾಲು ಎದುರಿಸಲಿದ್ದಾರೆ.

ಸಾತ್ವಿಕ್-ಚಿರಾಗ್ ಹೋರಾಟ ಅಂತ್ಯ

ಸಿಂಗಲ್ಸ್‌ನಲ್ಲಿ ಭಾರತಕ್ಕೆ ಶುಭ ಶುದ್ದಿ ಸಿಕ್ಕರೂ ಪುರುಷರ ಡಬಲ್ಸ್‌ನಲ್ಲಿ ಅಶುಭವಾಯಿತು. ಪುರುಷರ ಡಬಲ್ಸ್‌ನ ಆರಂಭಿಕ ಪಂದ್ಯದಲ್ಲಿ ಆಡಿದ ಕೇವಲ 7 ನಿಮಿಷಗಳ ಅಂತರದಲ್ಲಿ ಹಿನ್ನಡೆ ಕಂಡಿತು. ಸಾತ್ವಿಕ್ ಬಲ ಭುಜದ ಗಾಯಕ್ಕೆ ಒಳಗಾದ ಕಾರಣ ಭಾರತದ ಜೋಡಿ ಹೋರಾಟದಿಂದ ಹಿಂದೆ ಸರಿಯಬೇಕಾಯಿತು. ಕಳೆದ ವಾರವಷ್ಟೇ ಸಿಂಗಾಪುರ ಓಪನ್ ಗೆದ್ದು ಎರಡು ವರ್ಷಗಳ ಪ್ರಶಸ್ತಿ ಬರ ನೀಗಿಸಿದ್ದ ಈ ಜೋಡಿ ಮಲೇಷ್ಯಾದ ಕಾಂಗ್ ಖಾಯಿ ಕ್ಸಿಂಗ್ ಮತ್ತು ಆರೋನ್ ತೈ ವಿರುದ್ಧ 6-11ರಲ್ಲಿ ಹೋರಾಟ ನಡೆಸುತ್ತಿದ್ದಾಗ ಗಾಯಗೊಂಡಿತು. ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ಕೂಡ ಐರ್ಲೆಂಡ್‌ನ ನ್ಹಾಟ್ ಗುಯೆನ್ ವಿರುದ್ಧ ವೀರೋಚಿತ ಸೋಲನುಭವಿಸಿ ಸ್ಪರ್ಧೆ ಮುಗಿಸಿದರು. ಆದರೆ ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಕಪೂರ್ ಮತ್ತು ರುತ್ವಿಕ್ ಗಾಡೆ 21-14, 21-14ರಲ್ಲಿ ಚೈನೀಸ್ ತೈಪೆ ಜೋಡಿಯನ್ನು ಸೋಲಿಸಿ ಎರಡನೇ ಸುತ್ತು ಪ್ರವೇಶಿಸಿದೆ.

ಆಯುಶ್ ಶೆಟ್ಟಿ

ಸೆಮಿಫೈನಲ್ಸ್‌ಗೆ ಭಾರತ ತಂಡಗಳು

ಏಷ್ಯಾ ಕಪ್ ಹಾಕಿ

ಕಕಮಿಗಹರ(ಜಪಾನ್): ಚೇತೋಹಾರಿ ಪ್ರದರ್ಶನ ನೀಡಿದ ಭಾರತ ಪುರುಷರ ಹಾಕಿ ತಂಡ 13-1 ಗೋಲ್‌ಗಳ ಅಂತರದಿಂದ ಚೈನೀಸ್ ತೈಪೆ ತಂಡವನ್ನು ಪರಾಭವಗೊಳಿಸಿತು. ಈ ಫಲಿತಾಂಶದೊಂದಿಗೆ ಭಾರತ 18 ವರ್ಷದೊಳಗಿನವರ ಏಷ್ಯಾ ಕಪ್‌ನಲ್ಲಿ ಸೆಮಿಫೈನಲ್ಸ್ ಪ್ರವೇಶಿಸಿದೆ.

ಬುಧವಾರ ನಡೆದ 'ಎ' ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಭಾರತ ಪ್ರಭುತ್ವ ಸಾಧಿಸಿತು. ಕಜಕಸ್ಥಾನ, ಕೊರಿಯಾ ಮತ್ತು ಚೈನೀಸ್ ತೈಪೆ ಎದುರು ಜಯ ಗಳಿಸಿದ ಭಾರತೀಯರು, ಆತಿಥೇಯ ಜಪಾನ್ ವಿರುದ್ಧ ಸೋತರು. ನಾಲ್ಕು ಪಂದ್ಯಗಳಿಂದ ಒಟ್ಟು 9 ಅಂಕ ಗಳಿಸಿದ ಭಾರತ ಉಪಾಂತ್ಯವನ್ನು ಖಚಿತಪಡಿಸಿಕೊಂಡಿತು.

ಆಕ್ರಮಣಕಾರಿ ಪ್ರದರ್ಶನ ತೋರಿದ ಭಾರತ ತಂಡದ ಪರ ಆಶಿಸ್ ತಾನಿ ಪೂರ್ತಿ(27, 35, 42ನೇ ನಿ.) ಹ್ಯಾಟ್ರಿಕ್ ಗೋಲ್ ಗಳಿಸಿದರು. ಗಾಜೀ ಖಾನ್, ಸಿದ್ದಾರ್ಥ್ ಬೆನ್, ರಾಹುಲ್ ಯಾದವ್ ತಲಾ ಎರಡು ಗೋಲ್ ಗಳಿಸಿ ತಂಡದ ಗೆಲುವಿನ ಅಂತರವನ್ನು ವಿಸ್ತರಿಸಿದರು. ಭಾರತ ಶುಕ್ರವಾರ ಸೆಮಿಫೈನಲ್‌ನಲ್ಲಿ ಆಡಲಿದೆ. ಆದರೆ 'ಎ' ಗುಂಪಿನ ಜಪಾನ್ ಮತ್ತು ಕಜಕಸ್ತಾನ ನಡುವಿನ ಪಂದ್ಯದ ನಂತರ ಎದುರಾಳಿ ತಿಳಿಯಲಿದೆ.

ಗೋಲಿನ ಮಳೆಗರೆದ ಮಹಿಳೆಯರ ತಂಡ: ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಭಾರತ ಮಹಿಳಾ ತಂಡ 18 ವರ್ಷದೊಳಗಿನವರ ಏಷ್ಯಾ ಕಪ್‌ನ ತನ್ನ ಅಂತಿಮ ಗುಂಪು ಪಂದ್ಯದಲ್ಲಿ ಸಿಂಗಾಪುರ ವಿರುದ್ಧ ಗೋಲಿನ ಮಳೆ ಗರೆದಿದೆ.

ಬುಧವಾರ ನಡೆದ ಪಂದ್ಯದಲ್ಲಿ ಭಾರತ 25-0 ಗೋಲ್‌ಗಳ ಅಂತರದಲ್ಲಿ ಅಧಿಕಾರಯುತ ಪ್ರದರ್ಶನ ನೀಡಿತು. ಎ ಗುಂಪಿನ ಎಲ್ಲಾ ಪಂದ್ಯಗಳಲ್ಲಿ ಜಯ ಗಳಿಸಿ ಅಗ್ರಸ್ಥಾನ ಪಡೆದ ಭಾರತ ಉಪಾಂತ್ಯಕ್ಕೆ ಮುನ್ನಡೆಯಿತು.

ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಅಭ್ಯಾಸ ಪಂದ್ಯ ಬಳಕೆ: ಕೌರ್

ಟೌಂಟನ್: ಮಹಿಳಾ ಟಿ20 ವಿಶ್ವಕಪ್‌ಗೆ ಮುನ್ನ ಆಡಲಿರುವ ಎರಡು ಅಭ್ಯಾಸ ಪಂದ್ಯಗಳನ್ನು ಭಾರತ ಇನ್ನೂ ಕೆಲವು ಸಂಯೋಜನೆಗಳನ್ನು ಪರೀಕ್ಷಿಸಲು ಮತ್ತು ರಾಧಾ ಯಾದವ್ ಮತ್ತು ಭಾರತಿ ಫುಲ್ಮಾಲಿ ಅವರಂತಹ ಆಟಗಾರ್ತಿಯರಿಗೆ ಅವಕಾಶ ನೀಡಲು ಬಳಸಿಕೊಳ್ಳಲಿದೆ ಎಂದು ನಾಯಕಿ ಹರ್ಮನ್‌ಪ್ರೀತ್ ಕೌರ್ ಹೇಳಿದ್ದಾರೆ.

ಮಹಿಳಾ ಟಿ20 ವಿಶ್ವಕಪ್ ಪ್ರಶಸ್ತಿಗಾಗಿ ತಮ್ಮ ಸುದೀರ್ಘ ಕಾಯುವಿಕೆಯನ್ನು ಕೊನೆಗೊಳಿಸುವ ಭರವಸೆಯೊಂದಿಗೆ ಭಾರತ ಇಂಗ್ಲೆಂಡ್‌ಗೆ ತಲುಪಿದೆ. ಆದರೆ, ಆತಿಥೇಯ ಇಂಗ್ಲೆಂಡ್ ತಂಡವು ಮೂರು ಪಂದ್ಯಗಳ ಟಿ20 ಸರಣಿಯನ್ನು 2-1 ಅಂತರದಿಂದ ಗೆದ್ದುಕೊಂಡ ನಂತರ ಐಸಿಸಿ ಟೂರ್ನಿಯ ಭಾರತದ ಸಿದ್ಧತೆಗೆ ಹಿನ್ನಡೆಯಾಗಿದೆ. ಆರಂಭಿಕ ಪಂದ್ಯದಲ್ಲಿ 38 ರನ್‌ಗಳ ಗೆಲುವು ದಾಖಲಿಸಿದ ನಂತರ, ಭಾರತ ಮಂಗಳವಾರ ನಿರ್ಣಾಯಕ ಪಂದ್ಯವನ್ನು ಆರು ವಿಕೆಟ್‌ಗಳಿಂದ ಸೋಲುವ ಮುನ್ನ 2ನೇ ಪಂದ್ಯದಲ್ಲಿ 26 ರನ್‌ಗಳಿಂದ ಸೋತಿತ್ತು.

ಜೂನ್ 8 ಮತ್ತು 10 ರಂದು ಕಾರ್ಡಿಫ್‌ನಲ್ಲಿ ಕ್ರಮವಾಗಿ ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ವಿರುದ್ಧ ಭಾರತ ಎರಡು ಅಭ್ಯಾಸ ಪಂದ್ಯಗಳನ್ನು ಆಡಲಿದೆ. ಜೂನ್ 14ರಂದು ಬರ್ಮಿಂಗ್‌ಹ್ಯಾಮ್‌ನಲ್ಲಿ ಪಾಕ್ ವಿರುದ್ಧ ಭಾರತ ಅಭಿಯಾನವನ್ನು ಪ್ರಾರಂಭಿಸಲಿದೆ.

ಇಂದಿನಿಂದ ಉದ್ಘಾಟನಾ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್

ಅಹಮದಾಬಾದ್: ಗುರುವಾರದಿಂದ ಇಲ್ಲಿ ಆರಂಭವಾಗಲಿರುವ ಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್ 2026 (ಡಬ್ಲ್ಯುವೈಸಿ 2026) ರಲ್ಲಿ 60ಕ್ಕೂ ಹೆಚ್ಚು ದೇಶಗಳ 400ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಡಬ್ಲ್ಯುವೈಸಿ 2026ರ ಉದ್ಘಾಟನಾ ಆವೃತ್ತಿಯು ಅಮೆರಿಕ, ಘಾನಾ, ಕೀನ್ಯಾ, ಮಲೇಷ್ಯಾ, ಶ್ರೀಲಂಕಾ ಮತ್ತು ಉಜ್ಬೇಕಿಸ್ತಾನ್ ಸೇರಿದಂತೆ ವಿಶ್ವದಾದ್ಯಂತದ ಕ್ರೀಡಾಪಟುಗಳು ಸ್ಪರ್ಧಿಸಲಿದ್ದಾರೆ.

ವಿಶ್ವ ಯೋಗಾಸನ ಚಾಂಪಿಯನ್‌ಷಿಪ್ 2026 ಅನ್ನು ಕ್ರೀಡಾ ಸಚಿವಾಲಯ, ಆಯುಷ್ ಸಚಿವಾಲಯ, ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್), ಗುಜರಾತ್ ಕ್ರೀಡಾ ಪ್ರಾಧಿಕಾರ, ಗುಜರಾತ್ ಪ್ರವಾಸೋದ್ಯಮ ಮತ್ತು ಗುಜರಾತ್ ಯೋಗಾಸನ ಕ್ರೀಡಾ ಸಂಘ ಬೆಂಬಲಿಸಿವೆ.



ಆತಿಥೇಯ ಭಾರತ 122 ಸದಸ್ಯರ ತಂಡವನ್ನು ಕಣಕ್ಕಿಳಿಸಲಿದ್ದು, ಸಬ್-ಜೂನಿಯರ್ ಪುರುಷರು ಮತ್ತು ಮಹಿಳೆಯರು (10-14 ವರ್ಷಗಳು), ಕಿರಿಯ ಪುರುಷರು ಮತ್ತು ಮಹಿಳೆಯರು (14-18 ವರ್ಷ), ಸೀನಿಯರ್ (18-28 ವರ್ಷ), ಸೀನಿಯರ್ 'ಎ' (28-35 ವರ್ಷ), ಸೀನಿಯರ್ 'ಬಿ' (35-45 ವರ್ಷಗಳು) ಮತ್ತು ಸೀನಿಯರ್ 'ಸಿ' (45-55 ವರ್ಷಗಳು) ಎಂಬ 6 ವಯೋಮಾನದ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ.

ಆರೋಗ್ಯವೆಂದರೆ ರೋಗಮುಕ್ತವಾಗಿರುವುದಲ್ಲ

ಒಂದೊಮ್ಮೆ ಮರಣ ಶಾಸನದಂತೆ ಕಂಡಿದ್ದ ಕಾಯಿಲೆಗಳು ಇಂದು ಚಿಕಿತ್ಸೆಗೊಳಗಾಗುತ್ತಿವೆ. ಅಂಗಾಂಗ ಬದಲಾವಣೆ, ಕೃತಕ ಬುದ್ಧಿಮತ್ತೆ ಆಧರಿತ ನಿರ್ಣಯ, ರೋಬೋಟಿಕ್ ಸರ್ಜರಿ ಗಮನ ಸೆಳೆಯುತ್ತಿವೆ. ಕ್ಯಾನ್ಸರ್ ವರ್ಷಗಳವರೆಗೆ ನಿಯಂತ್ರಣದಲ್ಲಿರುತ್ತದೆ. ಮಾರಕ ಏಡ್ಸ್, ಡಯಾಬಿಟಿಸ್ ಮತ್ತು ರಕ್ತದೊತ್ತಡದ ಹಾಗೆ ನಿಯಂತ್ರಣದಲ್ಲಿಡಬಹುದಾದ ಕಾಯಿಲೆ. ಇವೆಲ್ಲವೂ ವೈದ್ಯಕೀಯ ವಿಜ್ಞಾನವನ್ನು ಹೊಸ ಎತ್ತರಕ್ಕೆ ಕೊಂಡೊಯ್ದಿವೆ. ಆದರೆ ಒಂದು ಸಂಕಟ ನಿಧಾನವಾಗಿ ಮಾನವ ಸಮಾಜವನ್ನು ಆವರಿಸುತ್ತಿದೆ. ಮಾನವನ ದೇಹ ಹೆಚ್ಚು ದಿನ ಬದುಕುತ್ತಿರುವುದು ನಿಜ. ಆದರೆ ಮನ ಬೇಗ ಆಯಾಸಗೊಳ್ಳುತ್ತಿದೆ. ಹೊರಗೆ ಆರೋಗ್ಯವಾಗಿರುವಂತೆ ಕಾಣುವ ಜನರು ಒಳಗೊಳಗೆ ದಣಿದವರ ಹಾಗೆ ಕಾಣಿಸುತ್ತಿದ್ದಾರೆ. ಅವರಿಗೆ ಸ್ಪಷ್ಟ ಕಾಯಿಲೆಗಳಿಲ್ಲ; ಆದರೆ ಅವರೊಳಗೆ ಶಾಂತಿಯೂ ಇಲ್ಲ, ಅವರಿಗೆ ಬದುಕಲು ಅತ್ಯುನ್ನತ ಸಾಧನಗಳಿವೆ; ಆದರೆ ಒಳಗಿನ ಉಲ್ಲಾಸ ಕುಗ್ಗುತ್ತಿದೆ. ಇದು ಆಧುನಿಕತೆಯ ಹೊಸ ರೋಗಶಾಸ್ತ್ರ.

ಹಿಂದಿನ ಶತಮಾನದಲ್ಲಿ ವೈದ್ಯಕೀಯ ವಿಜ್ಞಾನ ಅಕಾಲ ಸಾವುಗಳ ವಿರುದ್ಧ ಹೋರಾಡುತ್ತಿತ್ತು. ಸಾಂಕ್ರಾಮಿಕ ರೋಗಗಳು, ಪೌಷ್ಟಿಕಾಂಶ ಕೊರತೆ, ಶಿಶು ಮರಣ, ಸೋಂಕುಗಳು ಇವು ಮಾನವ ಬದುಕಿನ ಪ್ರಮುಖ ಶತ್ರುಗಳಾಗಿದ್ದವು. ಇಂದು ವೈದ್ಯಕೀಯ ವಿಜ್ಞಾನ ಮರಣವನ್ನು ವರ್ಷಗಳವರೆಗೆ ಮುಂದೂಡಬಲ್ಲ ಮಟ್ಟಕ್ಕೆ ಬಂದಿದೆ. ಆದರೆ ಮನುಷ್ಯನೊಳಗಿನ ದಣಿವು ಹೆಚ್ಚಾಗಿದೆ. ಇಂದು ಸಮಾಜದಲ್ಲಿ ಹೆಚ್ಚು ಕಾಣಿಸುವ ಪದಗಳು ಒತ್ತಡ, ಖಿನ್ನತೆ, ಭಾವನಾತ್ಮಕ ದಣಿವು. ಇವು ಕೇವಲ ವೈದ್ಯಕೀಯ ಪದಗಳಲ್ಲ; ಇವು ಆಧುನಿಕ ಬದುಕಿನ ಹೊಸ ಲಕ್ಷಣಗಳು. ವಿಕಸನದುದ್ದಕ್ಕೂ ಮಾನವನ ಮಿದುಳು ಪ್ರಕೃತಿಯ ಸಹಜ ಲಯಕ್ಕೆ ರೂಪುಗೊಂಡಿತ್ತು. ಇಂದಿನ ಮನುಷ್ಯ ಡಿಜಿಟಲ್ ವೇಗದೊಳಗೆ ಸಿಕ್ಕಿಬಿದ್ದಿದ್ದಾನೆ. ಅವನ ದೇಹ ಒಂದು ಸ್ಥಳದಲ್ಲಿ ಇದೆ; ಆದರೆ ಅವನ ಗಮನ ನೂರಾರು ಪರದೆಗಳ ನಡುವೆ ಚದುರಿಹೋಗಿದೆ.



ಒತ್ತಡದ ಕಾಲ: ಮೊಬೈಲ್ ನೋಟಿಫಿಕೇಶನ್‌ಗಳು, ಸಾಮಾಜಿಕ ಜಾಲತಾಣಗಳು, ಉದ್ಯೋಗದ ಸ್ಪರ್ಧೆ, ಆರ್ಥಿಕ ಅನಿಶ್ಚಿತತೆ, ಡಿಜಿಟಲ್ ಹೋಲಿಕೆ, ಸುದ್ದಿಗಳ ಭೀತಿ ನಡುವೆ ಮಾನವನ ನರಮಂಡಲಕ್ಕೆ ವಿಶ್ರಾಂತಿಯೇ ಸಿಗುತ್ತಿಲ್ಲ. ನಿರಂತರ ಎಚ್ಚರಿಕೆಯ ಸ್ಥಿತಿಯನ್ನು ವೈದ್ಯಕೀಯ ವಿಜ್ಞಾನ chronic stress response ಎಂದು ಕರೆಯುತ್ತದೆ. ಈ ಸ್ಥಿತಿ ದೀರ್ಘಕಾಲ ಮುಂದುವರಿದಾಗ ದೇಹ ಮತ್ತು ಮನಸ್ಸು ಕುಗ್ಗುವ ಪರಿಣಾಮ ರಕ್ತದೊತ್ತಡ, ಮಧುಮೇಹ, ಹೃದಯ ಕಾಯಿಲೆಗಳು, ನಿದ್ರಾಹೀನತೆ, ಆತಂಕ ಹೆಚ್ಚಾಗುತ್ತಿವೆ. ಸಮಾಜ ಇದನ್ನೇ ಸಾಮಾನ್ಯ ಎಂದು ಒಪ್ಪಿಕೊಳ್ಳತೊಡಗಿದೆ.

ಆಧುನಿಕ ತಂತ್ರಜ್ಞಾನ ಮನುಷ್ಯನ ಗಮನವನ್ನೇ ಮಾರುಕಟ್ಟೆಯ ಉತ್ಪನ್ನವನ್ನಾಗಿ ಪರಿವರ್ತಿಸಿದೆ. ಸಣ್ಣ ವಿಡಿಯೊಗಳು, ಕ್ಷಣಿಕ ಮನರಂಜನೆ, ನಿರಂತರ ಸ್ಕ್ರೋಲಿಂಗ್ ಇವೆಲ್ಲವೂ ಮಿದುಳಿನ ಡೋಪಮಿನ್ ವ್ಯವಸ್ಥೆಯನ್ನು ಉದ್ದೀಪನಗೊಳಿಸುತ್ತವೆ. ಆದರ ಅತಿಯಾದ ಉದ್ರೇಕ ಮನುಷ್ಯನಲ್ಲಿ; ಏಕಾಗ್ರತೆ ಕುಗ್ಗಿಸುವುದಲ್ಲದೆ ತಾಳ್ಮೆ ಕಡಿಮೆ ಮಾಡುತ್ತದೆ. ಭಾವನಾತ್ಮಕ ಆಳವನ್ನು ಕುಗ್ಗಿಸುವುದಲ್ಲದೆ ಮೌನವನ್ನು ಅಸಹನೀಯಗೊಳಿಸುತ್ತದೆ.

ಏಕಾಂಗಿ ಬದುಕು: ಇಂದಿನ ಮನುಷ್ಯ ಗುಂಪಿನ ಮಧ್ಯೆ ಬದುಕುತ್ತಿದ್ದರೂ ಒಳಗೆ ಏಕಾಂಗಿ. ಕುಟುಂಬಗಳು ಸಣ್ಣವಾಗುತ್ತಿವೆ. ಸಂಬಂಧಗಳು ವೇಗವಾಗಿ ಮುರಿಯುತ್ತಿವೆ. ಸ್ನೇಹಗಳು ಡಿಜಿಟಲ್ ಸಂದೇಶಗಳಿಗೆ ಸೀಮಿತವಾಗುತ್ತಿವೆ. ವೈದ್ಯಕೀಯ ಅಧ್ಯಯನಗಳು ಈಗ ಒಂಟಿತನವನ್ನು ಹೃದಯ ಕಾಯಿಲೆ, ಖಿನ್ನತೆ, ಅಕಾಲಿಕ ಮರಣ ಇವುಗಳೊಂದಿಗೆ ಸಮೀಕರಿಸಿ ನೋಡುತ್ತಿವೆ. ಅಂದರೆ ಏಕಾಂತವು ಕೇವಲ ಮನಸ್ಸಿನ ನೋವಲ್ಲ; ಅದು ಜೀವಶಾಸ್ತ್ರೀಯ ಒತ್ತಡ. ಆಧುನಿಕ ಸಮಾಜ ಮನುಷ್ಯನಿಂದ ನಿರಂತರ ಕಾರ್ಯಕ್ಷಮತೆಯನ್ನು ನಿರೀಕ್ಷಿಸುತ್ತದೆ. ದೈಹಿಕವಾಗಿ ಆಕರ್ಷಕವಾಗಿರಬೇಕು, ಸಾಮಾಜಿಕವಾಗಿ ಚುರುಕಾಗಿರಬೇಕು, ಡಿಜಿಟಲ್ ಜಗತ್ತಿನಲ್ಲಿ ಕಾಣಿಸಿಕೊಳ್ಳಬೇಕು. ಇದರ ಪರಿಣಾಮ ಮನುಷ್ಯ ತನ್ನನ್ನು ತಾನು ಪ್ರಾಜೆಕ್ಟ್ ಆಗಿ ನೋಡಲು ಆರಂಭಿಸಿದ್ದಾನೆ. ವಿಶ್ರಾಂತಿ ಅಪರಾಧದಂತೆ, ಮೌನ ವ್ಯರ್ಥದಂತೆ, ವಯಸ್ಸಾಗುವುದು ವೈಫಲ್ಯದಂತೆ ಕಾಣುತ್ತಿದೆ. ಈ ನಿರಂತರ ಪ್ರದರ್ಶನದ ಬದುಕು ಒಳಗಿನ ಖಾಲಿತನವನ್ನು ಹೆಚ್ಚಿಸುತ್ತಿದೆ. ಆಧುನಿಕ ಸಮಾಜ ಆರೋಗ್ಯಕರ ಬದುಕನ್ನು ನಿರ್ಮಿಸುವುದಕ್ಕಿಂತ, ಅಸ್ವಸ್ಥ ಬದುಕನ್ನು ಸಹಿಸಬಲ್ಲ ಮನುಷ್ಯರನ್ನು ನಿರ್ಮಿಸುತ್ತಿದೆ. ಭವಿಷ್ಯದ ದೊಡ್ಡ ವೈದ್ಯಕೀಯ ಸವಾಲು ವೈರಸ್‌ಗಳ ವಿರುದ್ಧವಲ್ಲ, ಮನುಷ್ಯನ ಒಳಗಿನ ಶಾಂತಿಯನ್ನು ಉಳಿಸುವ ಹೋರಾಟ. ಆರೋಗ್ಯ ಎಂದರೆ ರೋಗವಿಲ್ಲದಿರುವುದಲ್ಲ, ಮನುಷ್ಯ ತನ್ನೊಳಗೆ ಕುಸಿಯದೆ ಉಳಿಯುವ ಸಾಮರ್ಥ್ಯವೂ ಆರೋಗ್ಯವೇ. ■

ನೋವಿಗೆ ಮನೆಮದ್ದು

ಮುಂಜಾನೆ ಎದ್ದ ತಕ್ಷಣ ಗಂಟಲು ಕಿರಿಕಿರಿ, ನುಂಗಲು ಕಷ್ಟ ಎಂಬಲ್ಲಿಗೆ ಗಂಟಲು ನೋವು ಶುರುವಾಗಿ ವಿಪರೀತ ಕಾಡುತ್ತದೆ. ನೋವು ಕಾಣಿಸಿಕೊಂಡ ಆರಂಭದಲ್ಲೇ ಕಾಳಜಿವಹಿಸಿದರೆ ಮಾತ್ರೆ, ಔಷಧಗಳಿಂದ ದೂರ ಇರಬಹುದು.

ಬಿಸಿ ನೀರಿಗೆ ಅರ್ಧ ಚಮಚ ಉಪ್ಪು ಹಾಕಿ ದಿನಕ್ಕೆ 2-3 ಬಾರಿ ಗಾರ್ಗ್ಲಿಂಗ್ ಮಾಡಿ. ಇದು ಗಂಟಲಿನ ಊತವನ್ನು ಕಡಿಮೆ ಮಾಡಿ, ಅಲ್ಲಿರುವ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ. ಜೇನುತುಪ್ಪದಲ್ಲಿ ನೈಸರ್ಗಿಕ ಬ್ಯಾಕ್ಟೀರಿಯಾ ವಿರೋಧಿ ಗುಣಗಳಿವೆ. ಒಂದು ಲೋಟ ಉಗುರುಬೆಚ್ಚಗಿನ ನೀರು ಅಥವಾ ಗಿಡಮೂಲಿಕೆ ಚಹಾಕ್ಕೆ ಒಂದು ಚಮಚ ಜೇನುತುಪ್ಪ ಬೆರೆಸಿ ಕುಡಿಯಿರಿ. ಇದು ಗಂಟಲಿಗೆ ರಕ್ಷಣಾ ಕವಚದಂತೆ ಕೆಲಸ ಮಾಡಿ ಕೆಮ್ಮನ್ನು ತಡೆಯುತ್ತದೆ. ಇದಕ್ಕೆ ಸ್ವಲ್ಪ ಶುಂಠಿ ರಸ ಸೇರಿಸಿದರೆ ಮತ್ತಷ್ಟು ವೇಗವಾಗಿ ನೋವು ಕಡಿಮೆಯಾಗುತ್ತದೆ. ಹವಾಮಾನ ಬದಲಾವಣೆಯಿಂದ ಅಥವಾ ಎಸಿ ರೂಮ್‌ನಲ್ಲಿ ಹೆಚ್ಚು ಹೊತ್ತು ಇರುವುದರಿಂದ ಗಂಟಲು ಒಣಗಿದ್ದರೆ ಹಬೆ ತೆಗೆದುಕೊಳ್ಳುವುದು ಉತ್ತಮ. ಬಿಸಿ ನೀರಿನ ಹಬೆಯನ್ನು 5 ನಿಮಿಷಗಳ ಕಾಲ ತೆಗೆದುಕೊಂಡು ಉಸಿರಾಡುವುದರಿಂದ ಶ್ವಾಸಕೋಶದ ಹಾದಿ ತೇವಗೊಂಡು ಗಂಟಲಿನ ಕಿರಿಕಿರಿ ನಿವಾರಣೆಯಾಗುತ್ತದೆ. ನೀರಿಗೆ 2-3 ಹನಿ ನೀಲಗಿರಿ ಎಣ್ಣೆ ಸೇರಿಸುವುದು ಒಳ್ಳೆಯದು. ಒಣಶುಂಠಿ ಮತ್ತು ತುಳಸಿ ಎಲೆಗಳು ಉರಿಯೂತ ನಿವಾರಕ ಗುಣಗಳನ್ನು ಹೊಂದಿವೆ. ಇವುಗಳನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ ಚಹಾದಂತೆ ಮಾಡಿ ಕುಡಿಯುವುದರಿಂದ ಗಂಟಲು ನೋವು ತಕ್ಷಣಕ್ಕೆ ಕಡಿಮೆಯಾಗುವುದಲ್ಲದೆ, ದೇಹದ ರೋಗನಿರೋಧಕ ಶಕ್ತಿಯೂ ಹೆಚ್ಚುತ್ತದೆ. ■

ಮಣ್ಣು ಒಂದೇ ಇದ್ದರೆ ಸಾಕೇ?

ಲವಲVK GARDEN ಲೋಕ

ಸಣ್ಣ ಸಸಿಗಳನ್ನು ಬೆಳೆಚೀಲಕ್ಕೆ ಅಥವಾ ಕುಂಡಕ್ಕೆ ಸ್ಥಳಾಂತರಿಸುವ ಮೊದಲು ಅದರಲ್ಲಿ ಸಸ್ಯಗಳಿಗೆ ಪೂರಕವಾದ ಘನ ಪದಾರ್ಥ ಅಥವಾ ಮಾಧ್ಯಮವನ್ನು ತುಂಬಬೇಕು. ತುಂಬಾ ಗಟ್ಟಿಯಾಗಿ ಅಥವಾ ಸಡಿಲವಾಗಿ ಇರದೆ ಸ್ಥಿರವಾಗಿ ಇರುವಂತೆ ನೋಡಿಕೊಳ್ಳಬೇಕು.

ಇದರ ಉಪಯೋಗ ಅಂದರೆ ಸಸ್ಯವನ್ನು ಹಿಡಿದಿಟ್ಟುಕೊಳ್ಳುವುದು, ತೇವಾಂಶವನ್ನು ಕಾಪಾಡಿಕೊಳ್ಳುವುದು, ಗಾಳಿ ಆಡುವಂತೆ ನೋಡಿಕೊಳ್ಳುವುದು, ಪೋಷಕಾಂಶಗಳನ್ನು ಒದಗಿಸುವುದು ಅಥವಾ ಹಿಡಿದಿಟ್ಟುಕೊಳ್ಳುವುದು. ಇವೆಲ್ಲ ಲಕ್ಷಣಗಳು ಇರುವ ಮಾಧ್ಯಮವೆಂದರೆ ಅದು ಬರಿ ಮಣ್ಣು ಆಗಿರಬಹುದು. ಆದರೆ ಕೈತೋಟ ಮಾಡುವಾಗ ಮಣ್ಣು ಒಂದನ್ನೇ ಬಳಸುವುದು ಅಷ್ಟೊಂದು ಸೂಕ್ತ ಅಲ್ಲ, ಯಾಕೆಂದರೆ ಕುಂಡದ ಒಳಗಡೆ ಕಾಲಕ್ರಮೇಣವಾಗಿ ಅದು ಗಟ್ಟಿಯಾಗಿಬಿಡುತ್ತದೆ. ಆಗ ನೀರು ಸರಿಯಾಗಿ ಹೊರಗೆ ಹರಿದು ಹೋಗುವುದಿಲ್ಲ, ಇದರಿಂದಾಗಿ ಗಾಳಿ ಆಡದೆ ಬೇರುಗಳು ಕೊಳೆತು ಹೋಗುವ ಸಂಭವ ಇರುತ್ತದೆ. ಇಳುವರಿ ಕೂಡ ಕುಂಠಿತಗೊಳ್ಳುತ್ತದೆ. ಅದಕ್ಕೆ ಉಪಾಯ ಎಂದರೆ ಮಣ್ಣಿನ ಜೊತೆಗೆ ಬೇರೆ ಕೆಲವು ಪದಾರ್ಥಗಳನ್ನು ಮಿಶ್ರಣ ಮಾಡಿ ಬಳಸುವುದು. ಅಂತಹ ಕೆಲವು ಪರ್ಯಾಯಗಳೆಂದರೆ ಕೋಕೋ ಪೀಟ್, ಪರಲೈಟ್, ವರ್ಮಿಕ್ಯುಲೈಟ್ ಹಾಗೂ ಉಸುಕು. ಇವುಗಳ ಜೊತೆಗೆ ಬಳಸಬಹುದಾದ ಇನ್ನೆರಡು ಮಾಧ್ಯಮಗಳು ಕೊಂಪೋಸ್ಟ್ ಹಾಗೂ ಎರೆ ಗೊಬ್ಬರ.

ಕೋಕೋ ಪೀಟ್ ಅನ್ನು ತೆಂಗಿನ ನಾರು ಹಾಗೂ ಚಿಪ್ಪಿನಿಂದ ತಯಾರಿಸಿರುತ್ತಾರೆ. ಅವುಗಳ ಮಿಶ್ರಣ ಪ್ರಮಾಣ ಬೇರೆ ಬೇರೆ ಆಗಿರುತ್ತದೆ. ತೆಂಗಿನ ನಾರು ಸಸ್ಯವನ್ನು ಹಿಡಿದಿಟ್ಟುಕೊಳ್ಳಲು ಸಹಾಯ ಮಾಡಿದರೆ, ಚಿಪ್ಪಿನ ಚಿಕ್ಕ ಚಿಕ್ಕ ತುಂಡುಗಳು ನೀರನ್ನು / ತೇವಾಂಶವನ್ನು ಹಿಡಿದಿಟ್ಟುಕೊಳ್ಳುತ್ತವೆ. ಇದರಲ್ಲಿ ಗಾಳಿ ಕೂಡ ಆಡುವುದರಿಂದ ಬೇರುಗಳ ಬೆಳವಣಿಗೆ ತುಂಬಾ ಚೆನ್ನಾಗಿ ಆಗುತ್ತದೆ. ಇದು ಪುಡಿ ರೂಪದಲ್ಲಿ ಹಾಗೂ ಇಟ್ಟಿಗೆ ರೂಪದಲ್ಲಿ ಮಾರುಕಟ್ಟೆಯಲ್ಲಿ ದೊರೆಯುತ್ತದೆ. ಆದರೆ ಸಸ್ಯಕ್ಕೆ ಬೇಕಾದ ಎಲ್ಲ ಪೋಷಕಾಂಶಗಳು ಇದರಲ್ಲಿ ಇರುವುದಿಲ್ಲ, ಅದನ್ನು ಹೊರಗಿನಿಂದ ಗೊಬ್ಬರದ ಮೂಲಕ ನೀಡಬೇಕು. ■



-ಗುರುಪ್ರಸಾದ ಕುರ್ತಕೋಟಿ

ವಿಜಯಬಂಧ - 7966



ಎಡದಿಂದ ಬಲಕ್ಕೆ

1 ಅನುಮಾನವಿಲ್ಲ ಇದು ಹಾಡಿನಲ್ಲಿ ಮೂಡಿದ ಪ್ರೀತಿ 4
3 ಅಂದು ಡೋಲು ಹೊಡೆಯುವಾಗ ನಡೆದ ಕ್ರಾಂತಿ 4
5 ಅಂಕಿತವನ್ನು ಬರಹ ರೂಪದಲ್ಲಿರಿಸಿ 3
6 ಸರಮಾಲೆಯನ್ನು ಧರಿಸಿ ನಿಂದ ಹಣದೊಡತಿ 2
8 ಕೋಸಂಬರಿಗೆ ಉಪಯೋಗ ಮಾಡದ ತರಕಾರಿ 2
9 ಕಲಿಗಾಲದಲ್ಲಿದ್ದರೂ ಅಸಲಿಯಂತೂ ಅಲ್ಲ 3
11 ಕಳಿಸಿ ಬಂದು ನೋಡಿದರೆ ಬಾಳೆಯ ಫಲ ಸಿಕ್ಕಿತು 3
13 ಪಶು ಮುಂದೆ ಭಾರ್ಗವ ಹಿಡಿದು ತಂದ ಆಯುಧ 3
15 ಅರಳಿ ಮರದ ಕೆಳಗೆ ಆಸರೆ ಪಡೆದ ರಾಜ 3
17 ಅತ್ತೆಯ ಮಾತು ಕೇಳಲು ಬಂದ ಗಾರ್ದಭ 2
18 ವಿಷಯ ಪೂರ್ತಿ ತುಂಬಿದ ಹಾಲಾಹಲ 2
20 ಕಳವಳದಿಂದ ಧರಿಸಿದ ಹೊದಿಕೆ 3
21 ರಾತ್ರಿಯಲ್ಲಿ ಸಂಚರಿಸುವಂತಹ ಕಳ್ಳ 4
22 ನೆತ್ತರಿನಲ್ಲಿರುವ ಕೆಂಪು ಅಥವಾ ಬಿಳಿಯ ಬಿಂದು 4

ಮೇಲಿನಿಂದ ಕೆಳಕ್ಕೆ

1 ಅಕ್ಷದ ಮೇಲೆ ಮೂಡಿದ ವರ್ಣ 3
2 ನಗಲಿ ಬಿಡಲಿ ಗೊಂದಲವಂತೂ ಇದ್ದೇ ಇದೆ 4
3 ಒಳ ಮನಸ್ಸಿಗೆ ಸಂಬಂಧಿಸಿದ್ದು ಒಳಗಿನದು 4
4 ನಸು ನಾಚುತ್ತಾ ಇರುವಾಗ ಕನಸು ನಿಜವಾಗಿದೆ 3
7 ಸಮಾನವಾದ ಮರ್ಯಾದೆ 2
8 ಬೆಳಗಿನ ಸಮಯದಲ್ಲಿ ಕೇಳುವಂತೆ ಕೂಗಿ ಎಚ್ಚರಿಸುವ ಪಕ್ಷಿ 2
10 ಮಂಗಳಾರತಿ ಸಮಯದಲ್ಲಿ ಬೆಳಗಿಸಿದ ದ್ರವ್ಯ 3
12 ಸರ ಧರಿಸಿ ಆಚರಿಸಿದ ಹತ್ತು ದಿನಗಳ ಹಬ್ಬ 3
13 ಪಾರುಪತ್ತೆದಾರ ಕಂಡು ಹಿಡಿದದ್ದು 2
14 ಶುಕದ ಜೊತೆ ಭರತ ಬಂದ ಸಮಯ ಮಂಗಳಮಯ 4
15 ಕಣ್ಣಿಗೆ ಕಾಣಿಸದಂತೆ ನಡೆದದ್ದು 4
16 ಮೋಸವಿದ್ದ ಕಡೆ ಸಿಹಿಯೂ ಇದೆ 2
17 ದನಕ್ಕೆ ಬಡಿದಂತೆ ಬಡಿದಾಗ ನಡೆದ ಯುದ್ಧ 3
19 ಕಾಮ ಕ್ರೋಧ ಮುಂತಾದ ಆರು ಸ್ವಭಾವಗಳು 3

ವಿಜಯಬಂಧ | 7965

ಎಡದಿಂದ ಬಲಕ್ಕೆ: 1.ಚಂದಾದಾರ 3.ಗೊರವಂಕ 6.ಕರ 8.ಬೇಲ 9.ಮರ 11.ಜಾಗಟೆ 13.ಹಗೆ 14.ಜಟ್ಟಿ 15.ಸಾನು 16.ಮಂಕ 17.ವನಜ 21.ಮನ 22.ನಗ 24.ಲವಾಜಮೆ 25.ತಾಪತ್ರಯ.

ಮೇಲಿನಿಂದ ಕೆಳಕ್ಕೆ: 1.ಚಂದಮಾಮ 2.ದಾಕ್ಷಿಣ್ಯ 4.ರಸಾಲ 5.ಕರಡಿಗೆ 7.ರಜಾ 8.ಬೇಟೆ 10.ರಜಕ 12.ಗಗನ 13.ಹನುಮ 16.ಮಂದಾನಿಲ 17.ವನ 18.ಜನ 20.ದಯಾಮಯ 21.ಮನುಜ 23.ಗಣಪ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.
ದೂ: 9513747474

ಕಟಕ, ಮೀನ-ಈ ರಾಶಿಯವರಿಗೆ ವಜ್ರನಖ ಯೋಗ

ಮೇಷ: ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ನೂತನ ವಾಹನ ಖರೀದಿಸಬೇಕೆಂಬ ಕನಸು ನನಸಾಗುವುದು. ಮನರಂಜನೆಗಿಂತ ಕೆಲಸದ ಬಗ್ಗೆ ಗಮನವಿರಲಿ. **ಶುಭ ಸಂಖ್ಯೆ:** 5, **ಬಣ್ಣ:** ಆಕಾಶನೀಲಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಕೆಲವು ವಿಚಾರಗಳನ್ನು ತೀರ್ಮಾನಿಸುವ ಸಂದರ್ಭದಲ್ಲಿ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವುದು ಉತ್ತಮ. ಪದವಿ ವಿದ್ಯಾರ್ಥಿಗಳಿಗೆ ಯಶಸ್ಸು ದೊರೆತು ಆನಂದವಿರುವುದು. ಹಣ್ಣು, ಹೂ ವ್ಯಾಪಾರಿಗಳಿಗೆ ಲಾಭ ಇರುವುದು. **ಶುಭ ಸಂಖ್ಯೆ:** 1, **ಬಣ್ಣ:** ಗುಲಾಬಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಧಾರ್ಮಿಕ ಮಾರ್ಗದರ್ಶಕರ ಸಹಾಯದಿಂದ ಬದುಕನ್ನು ಅರ್ಥಪೂರ್ಣವಾಗಿಸುವ ಬಗ್ಗೆ ತಿಳಿದುಕೊಳ್ಳುವಿರಿ. ಸಂಬಂಧ ಮತ್ತು ಒಪ್ಪಂದಗಳತ್ತ ಗಮನ ನಿಶ್ಚಿತವಾಗಿ ತೆಗೆದುಕೊಳ್ಳಬೇಕಾಗಲಿದೆ. **ಶುಭ ಸಂಖ್ಯೆ:** 6, **ಬಣ್ಣ:** ಕೇಸರಿ
(ಕ, ಕಿ, ಕು, ಘ, ಙ, ಚ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಕೌಟುಂಬಿಕ ವಿಷಯಗಳತ್ತ ಅದರಲ್ಲೂ ಮಡದಿಯ ಆರೋಗ್ಯ ವಿಚಾರದಲ್ಲೂ ಗಮನಹರಿಸಬೇಕಾಗುವುದು. ಸಂಬಂಧಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದಲ್ಲಿ ಹೊಸ ಬದಲಾವಣೆಯ ಸೂಚನೆಯು ಸಿಗಲಿದೆ. **ಶುಭ ಸಂಖ್ಯೆ:** 4, **ಬಣ್ಣ:** ಕೆಂಪು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಸಂತಸವಿದ್ದು ಹೊಸ ಸಂಸ್ಥೆಯಲ್ಲಿನ ಕೆಲಸಗಳು ಸುಲಭ ಮತ್ತು ಸಂತೋಷಮಯ ಎನಿಸುವುವು. ವ್ಯಾಪಾರ-ವ್ಯವಹಾರಗಳಲ್ಲಿ ಆರೋಗ್ಯಕರ ಪೈಪೋಟಿ ನಡೆಸಲು ತೀರ್ಮಾನಿಸಿ. **ಶುಭ ಸಂಖ್ಯೆ:** 8, **ಬಣ್ಣ:** ಬಿಳಿ
(ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯವು ಮತ್ತು ಯೋಚನೆಗಳು ಮೂಡಿ ಬರಲಿವೆ. ವಿದ್ಯಾ ಕ್ಷೇತ್ರದವರಿಗೆ ಹೆಚ್ಚಿನ ಮನ್ನಣೆ ದೊರಕಲಿದೆ. **ಶುಭ ಸಂಖ್ಯೆ:** 3, **ಬಣ್ಣ:** ಕಂದು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಹಣಕಾಸು ಪರಿಸ್ಥಿತಿ ಉತ್ತಮವಿರುವುದರಿಂದ ಆಸ್ತಿ ಕೊಳ್ಳುವ ಬಗ್ಗೆ ಹಿರಿಯರೊಂದಿಗೆ ಚರ್ಚಿಸುವಿರಿ. ಧೈರ್ಯ ಮಾಡಿ ಕಾರ್ಯೋನ್ಮುಖವಾದರೆ ಅಭಿವೃದ್ಧಿ ಹೊಂದುವಿರಿ. ಗೌರವದ ಸ್ಥಾನಮಾನಗಳು ಸಿಗಲಿವೆ. **ಶುಭ ಸಂಖ್ಯೆ:** 9, **ಬಣ್ಣ:** ಖಾಕಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಆಸ್ತಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ಮನೆಯವರೊಂದಿಗೆ ಚರ್ಚಿಸಿ ಕೈಗೊಳ್ಳುವುದು ಉತ್ತಮ. ಲೆಕ್ಕಪತ್ರಗಳ ವ್ಯವಹಾರ ನೋಡಿಕೊಳ್ಳುವವರಿಗೆ ಸಂದಿಗ್ಧ ಪರಿಸ್ಥಿತಿಗಳು ಎದುರಾಗಲಿವೆ. ಸಾಲ ಮಾಡಬೇಡಿ. **ಶುಭ ಸಂಖ್ಯೆ:** 2, **ಬಣ್ಣ:** ಹಸಿರು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಮಿತ್ರರೊಂದಿಗಿನ ಕಲಹ ಸಹನೆಯ ಪರೀಕ್ಷೆಯಾಗಿರುತ್ತದೆ. ವೃತ್ತಿಗೆ ಹೊರತಾದ ಕೆಲಸ ಮಾಡುವುದರಲ್ಲಿ ಆಸಕ್ತಿ ಹೆಚ್ಚಲಿದೆ. ಜವಾಬ್ದಾರಿ ಸ್ವೀಕರಿಸುವ ಮೊದಲು ನಿಭಾಯಿಸುವ ಬಗ್ಗೆ ಯೋಚಿಸಿಕೊಳ್ಳುವುದು ಉತ್ತಮ. **ಶುಭ ಸಂಖ್ಯೆ:** 7, **ಬಣ್ಣ:** ನೀಲಿ
(ಯ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಗುರು-ಹಿರಿಯರ ಮಾತುಗಳನ್ನು ಅಲ್ಲಗಳೆಯುವುದು ಅಥವಾ ಅವರಲ್ಲಿ ವಾದ-ವಿವಾದಗಳನ್ನು ಬೆಳೆಸುವುದು ಸರಿಯಲ್ಲ, ಕಬ್ಬಿಣದ ವ್ಯವಹಾರದ ನಿರ್ವಹಣೆಗೆ ಸಾಲ ಮಾಡಬೇಕಾಗುವುದು. **ಶುಭ ಸಂಖ್ಯೆ:** 5, **ಬಣ್ಣ:** ಕಂಚು
(ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಅನಾರೋಗ್ಯದ ಲಕ್ಷಣಗಳು ಗಮನಕ್ಕೆ ಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಿ, ಧಾರ್ಮಿಕತೆಯ ಫಲವಾಗಿ ಮನಸ್ಸು ನಕರಾತ್ಮಕ ಭಾವನೆಯಿಂದ ಹೊರ ಬರಲಿದೆ. **ಶುಭ ಸಂಖ್ಯೆ:** 1, **ಬಣ್ಣ:** ಕಪ್ಪು
(ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಯೋಜನೆಯ ಬೆಳವಣಿಗೆಗೆ ಸಂಬಂಧಿಸಿದವರ ಜತೆ ಚರ್ಚೆ ನಡೆಸಿ ಬಾಕಿ ಇದ್ದ ಯೋಜನೆ ಪೂರ್ಣಗೊಳಿಸುವ ಬಗ್ಗೆ ಗಮನ ಹರಿಸಿ. ಬಿಡುವಿಲ್ಲದ ಕೆಲಸದಲ್ಲೂ ಮನಸ್ಸಿಗೆ ನೆಮ್ಮದಿ ಇರುವುದು ಆಶ್ಚರ್ಯವೆನಿಸಲಿದೆ. **ಶುಭ ಸಂಖ್ಯೆ:** 4, ಬಣ್ಣ: ಹಳದಿ
(ದಿ, ದು, ಖ, ಝ, ಥ, ದೆ, ದೊ, ಚ, ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ದಿಲ್ಲಿ ಹೋಟೆಲ್‌ನಲ್ಲಿ ಅಗ್ನಿ ದುರಂತ: 21 ಸಾವು

ವಿದೇಶಿಯರೂ ದುರ್ಮರಣ | ಅಗ್ನಿ ಸುರಕ್ಷತಾ ನಿಯಮ ಉಲ್ಲಂಘನೆ ಆರೋಪ

ಧಗಧಗಿಸಿ ಹೊತ್ತಿ ಉರಿದ ಹೋಟೇಲ್ ಕಟ್ಟಡ.

ಪೊಲೀಸರಿಗೆ ರಕ್ಷಣಾ ಕಾರ್ಯದಲ್ಲಿ ನೆರವಾದ ಸ್ಥಳೀಯರು.

ಹೊಸದಿಲ್ಲಿ: ದಕ್ಷಿಣ ದಿಲ್ಲಿಯ ಮಾಳವೀಯ ನಗರದಲ್ಲಿರುವ ಐದು ಮಹಡಿಗಳ ಹೋಟೆಲ್‌ನಲ್ಲಿ ಬುಧವಾರ ಬೆಳಗ್ಗೆ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ17 ವಿದೇಶಿ ಪ್ರಜೆಗಳೂ ಸೇರಿದಂತೆ 21 ಮಂದಿ ಮೃತಪಟ್ಟಿದ್ದಾರೆ.

ಮೃತ ವಿದೇಶಿಯರಲ್ಲಿ ಮಧ್ಯ ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳಿಗೆ ಸೇರಿದವರಾಗಿದ್ದಾರೆಂದು ತಿಳಿದುಬಂದಿದೆ. ದುರ್ಘಟನೆಯಲ್ಲಿ 40 ಮಂದಿ ಗಾಯಗೊಂಡಿದ್ದಾರೆ. ಆ ಪೈಕಿ ಸುಮಾರು 13 ಜನರನ್ನು ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಹಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಮೂಲಗಳು ತಿಳಿಸಿವೆ.

ಮಾಳವೀಯ ನಗರದ ಕಿಷ್ಕಿಂದೆಯಂಥ ರಸ್ತೆಯ ಹೌಜ್ ರಾಣಿ ಪ್ರದೇಶದಲ್ಲಿರುವ 'ಫ್ಲರಿಷ್ ಸ್ಟೇ ಬಿ ಆ್ಯಂಡ್ ಬಿ' ಹೋಟೆಲ್‌ನಲ್ಲಿಬೆಳಗ್ಗೆ9.45ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ನೆಲಮಹಡಿಯಲ್ಲಿ ಕಾಣಿಸಿಕೊಂಡ ಬೆಂಕಿಯು ಕೆಲವೇ ಕ್ಷಣಗಳಲ್ಲಿ ಹತ್ತಿರದ ಕಟ್ಟಡಕ್ಕೂ ವ್ಯಾಪಿಸಿದೆ. ಘಟನಾ ಸ್ಥಳಕ್ಕೆ ತಕ್ಷಣವೇ ಅಗ್ನಿ ಶಾಮಕ ವಾಹನಗಳೊಂದಿಗೆ ಆಗಮಿಸಿದ ಇಲಾಖೆಯ ಸಿಬ್ಬಂದಿ ದಟ್ಟ ಹೊಗೆಯ ಸವಾಲಿನ ನಡುವೆಯೂ ಕಾರ್ಯಾಚರಣೆ ನಡೆಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಅಗ್ನಿಶಾಮಕ ದಳದ ಅಧಿಕಾರಿ ಎ.ಕೆ. ಮಲಿಕ್ ಅವರ ಪ್ರಕಾರ ಈ ಕಟ್ಟಡದ ನೆಲಮಹಡಿಯಲ್ಲಿ ರೆಸ್ಟೋರೆಂಟ್ ಕಾರ್ಯನಿರ್ವಹಿಸುತ್ತಿತ್ತು. ಉಳಿದ ಮಹಡಿಗಳಲ್ಲಿ ರೂಮ್‌ಗಳಿದ್ದವು. ಹೋಟೆಲ್‌ಗೆ ಒಂದೇ ಪ್ರವೇಶ ಮತ್ತು ನಿರ್ಗಮನ ದ್ವಾರವಿತ್ತು. ಅಲ್ಲದೇ ಅಗ್ನಿ ಶಾಮಕ ದಳದಿಂದ ನಿರಕ್ಷೇಪಣಾ ಪತ್ರ ಹೊಂದಿರಲಿಲ್ಲ ಎಂಬ ಮಾಹಿತಿ ಇದ್ದು, ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಗ್ನಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ, ಶಾರ್ಟ್ ಸರ್ಕ್ಯೂಟ್ ಇಲ್ಲವೇ ಸಿಲಿಂಡರ್ ಸ್ಫೋಟದಿಂದ ಈ ದುರಂತ ಸಂಭವಿಸಿರುವ ಶಂಕೆ ವ್ಯಕ್ತಪಡಿಸಲಾಗಿದ್ದು, ಎಲ್ಲ ಆಯಾಮಗಳಿಂದಲೂ ತನಿಖೆ ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಂಕಿಯಿಂದಾಗಿ ಕಟ್ಟಡಕ್ಕೆ ಭಾರಿ ಹಾನಿಯಾಗಿದ್ದು, ಸುತ್ತಮುತ್ತಲಿನ ಪ್ರದೇಶದಲ್ಲಿ ಗಾಜಿನ ಚೂರುಗಳು ಮತ್ತು ಸುಟ್ಟ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಧಿಕಾರಿಗಳು ಸ್ಥಳವನ್ನು ಸುತ್ತುವರಿದು ರಕ್ಷಣಾ ಕಾರ್ಯಾಚರಣೆಗೆ ಅನುಕೂಲವಾಗುವಂತೆ ಸಂಚಾರ ಮಾರ್ಗವನ್ನು ಬದಲಾಯಿಸಿದ್ದರಿಂದ ಸ್ಥಳದಲ್ಲಿ ಅಪಾರ ಜನಸ್ತೋಮ ಜಮಾಯಿಸಿತ್ತು.

ಮೋದಿ ಸಂತಾಪ: ದುರ್ಘಟನೆಗೆ ಪ್ರಧಾನಿ ಮೋದಿ, ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಸಂತಾಪ ಸೂಚಿಸಿದ್ದಾರೆ. ಪ್ರಧಾನಿ ಮೋದಿ ಅವರು ಮೃತರಿಗೆ ತಲಾ 2 ಲಕ್ಷ ರೂ. ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ.

ಮಗುವಿನೊಂದಿಗೆ ಜಿಗಿದ ತಾಯಿ

ಅಗ್ನಿ ದುರಂತದಿಂದಾಗಿ ಕೊಠಡಿಯೊಳಗೆ ಸಿಲುಕಿದ್ದ ಕೆಲವರು ಪ್ರಾಣ ಉಳಿಸಿಕೊಳ್ಳಲು ಕಿಟಕಿಯ ಗಾಜು ಒಡೆದು ಕೆಳಕ್ಕೆ ಜಿಗಿದ ಬೆಚ್ಚಿಬೀಳಿಸುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಪರಿಸ್ಥಿತಿಯ ಭೀಕರತೆಗೆ ಸಾಕ್ಷಿಯಾಗಿವೆ. ಪಕ್ಕದಲ್ಲೇ ಇದ್ದ ಹಾಸಿಗೆ ಮಾರಾಟದ ಅಂಗಡಿ ಮಾಲೀಕರು, ಸಂತ್ರಸ್ತರು ಕೆಳಕ್ಕೆ ಜಿಗಿಯುವ ಮುನ್ನ ನೆಲದ ಮೇಲೆ ಬೆಡ್ ಹಾಸಿ ನೆರವಿಗೆ ಬಂದಿದ್ದರು. ತಾಯಿಯೊಬ್ಬಳು ಮಗುವಿನ ಜತೆ ಕೆಳಕ್ಕೆ ಜಿಗಿದಿದ್ದು, ಇಬ್ಬರಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಪ್ರವೇಶ-ನಿರ್ಗಮನಕ್ಕೆ ಒಂದೇ ದ್ವಾರ

ಅಗ್ನಿ ದುರಂತ ಸಂಭವಿಸಿದ ಫ್ಲರಿಷ್ ಸ್ಟೇ ಹೋಟೆಲ್‌ಗೆ ಒಂದೇ ಪ್ರವೇಶ ಮತ್ತು ನಿರ್ಗಮನ ದ್ವಾರವಿತ್ತು. ಬೆಡ್ ಆ್ಯಂಡ್ ಬ್ರೇಕ್ ಫಾಸ್ಟ್ ವರ್ಗದಡಿ ಹೋಟೆಲ್‌ಗೆ ಕೇವಲ 6 ಕೊಠಡಿಗಳನ್ನು ಹೊಂದಲು ಪರವಾನಗಿ ನೀಡಲಾಗಿತ್ತು. ಆದರೆ ಅಕ್ರಮವಾಗಿ 25 ಕೊಠಡಿಗಳನ್ನು ಹೊಂದಲಾಗಿತ್ತು. ಕಟ್ಟಡವು ಬೇಸ್‌ಮೆಂಟ್, ನೆಲಮಹಡಿ ಹಾಗೂ ಅದರ ಮೇಲೆ ಐದು ಮಹಡಿಗಳನ್ನು ಹೊಂದಿತ್ತು. ಅಲ್ಲದೇ ಅಗ್ನಿ ಶಾಮಕ ದಳದಿಂದ ನಿರಕ್ಷೇಪಣಾ ಪತ್ರ ಪಡೆದಿರಲಿಲ್ಲ ಎಂದು ತನಿಖಾ ತಂಡಗಳು ಹೇಳಿವೆ.

ಉದ್ದೇಶಪೂರ್ವಕವಲ್ಲದ ನರಹತ್ಯೆ ಕೇಸ್: ಈ ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ದಿಲ್ಲಿ ಪೊಲೀಸರು ಅಪರಿಚಿತರ ವಿರುದ್ಧ ಉದ್ದೇಶಪೂರ್ವಕವಲ್ಲದ ನರಹತ್ಯೆ ಮತ್ತು ಭಾರತೀಯ ನ್ಯಾಯ ಸಂಹಿತೆಯ ಇತರ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

ಪಕ್ಷದ ಚಿಹ್ನೆ ಕಳೆದುಕೊಳ್ಳುವ ಭೀತಿ, ಸುಮ್ಮನಾದ ದೀದಿ

ಉಚ್ಚಾಟಿತ ಟಿಎಂಸಿ ಶಾಸಕನೇ ಈಗ ಪ್ರತಿಪಕ್ಷ ನಾಯಕ!

ಕೋಲ್ಕೊತಾ: ಇತ್ತೀಚಿನ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಸೋಲಿನ ಬಳಿಕ ಟಿಎಂಸಿಯಲ್ಲಿ ಬಂಡಾಯ ತೀವ್ರಗೊಂಡಿದ್ದು, 'ದೀದಿ'ಗೆ ಹಿನ್ನಡೆಯಾಗುವಂಥ ಬೆಳವಣಿಗೆ ಬುಧವಾರ ನಡೆದಿದೆ. ತೃಣಮೂಲ ಕಾಂಗ್ರೆಸ್‌ನಿಂದ ಉಚ್ಚಾಟನೆಗೊಂಡಿರುವ ರಿತಬ್ರತಾ ಬ್ಯಾನರ್ಜಿ ಅವರನ್ನು ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ರಿತಬ್ರತಾ ಬ್ಯಾನರ್ಜಿ ಅವರು ಬೆಳಗ್ಗೆ ಸ್ಪೀಕರ್ ರತೀಂದ್ರ ಬೋಸ್ ಅವರನ್ನು ಭೇಟಿಯಾಗಿ, ''ಟಿಎಂಸಿಯ 80 ಶಾಸಕರ ಪೈಕಿ 58 ಶಾಸಕರ ಬೆಂಬಲ ನನಗಿದೆ,'' ಎಂದು ಹೇಳಿ 58 ಶಾಸಕರ ಸಹಿ ಇರುವ ಪತ್ರವನ್ನು ನೀಡಿದರು. ಇದಾದ ಬಳಿಕ ಸ್ಪೀಕರ್ ಅವರು ರಿತಬ್ರತಾ ಬ್ಯಾನರ್ಜಿ ಅವರನ್ನು ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರನ್ನಾಗಿ ನೇಮಿಸಲು ಒಪ್ಪಿಗೆ ಸೂಚಿಸಿದರು.

ನಂತರ ಸುದ್ದಿಗೋಷ್ಠಿ ನಡೆಸಿದ ರಿತಬ್ರತಾ ಅವರು, ''ಟಿಎಂಸಿ ಶಾಸಕಾಂಗ ಪಕ್ಷದ ಈ ಪರಿಷ್ಕೃತ ಬದಲಾವಣೆಗೆ ಸ್ಪೀಕರ್ ಅನುಮೋದನೆ ನೀಡಿದ್ದಾರೆ. ಪ್ರತಿಪಕ್ಷ ನಾಯಕರಿಗಾಗಿ ನಿಗದಿಪಡಿಸಲಾದ ಕಚೇರಿಯನ್ನು ನಮಗೆ ಹಸ್ತಾಂತರಿಸಲಾಗಿದೆ. ನಾವು ರಚನಾತ್ಮಕ ಪ್ರತಿಪಕ್ಷವಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತೇವೆ,'' ಎಂದು ಹೇಳಿದರು.

ಇದೇ ವೇಳೆ, ಬಂಡಾಯ ಬಣವು ಶಾಸಕಾಂಗ ಪಕ್ಷಕ್ಕಾಗಿ ಹೊಸ ನಾಯಕತ್ವದ ತಂಡವನ್ನು ಸಹ ಪ್ರಕಟಿಸಿದೆ. ಅಖ್ರುಜ್ಜಮಾನ್ ಅವರನ್ನು ಮುಖ್ಯ ಸಚೇತಕರನ್ನಾಗಿ ಹೆಸರಿಸಲಾಗಿದ್ದು, ಹಿರಿಯ ಶಾಸಕರಾದ ಜಾವೇದ್ ಅಹಮದ್ ಖಾನ್, ಸಂದೀಪನ್ ಸಹಾ, ಸಬೀನಾ ಯಾಸ್ಮಿನ್ ಮತ್ತು ಶಿಯುಲಿ ಸಹಾ ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಮಮತಾ ನಾಯಕಿ, ಅಭಿಷೇಕ್‌ಗೆ ಪಾತ್ರವಿಲ್ಲ: ಸ್ಪೀಕರ್‌ಗೆ ಸಲ್ಲಿಸಿದ ಪತ್ರದಲ್ಲಿ ರಿತಬ್ರತಾ ಬ್ಯಾನರ್ಜಿ ಅವರು ತಮ್ಮದೇ 'ನಿಜವಾದ' ತೃಣಮೂಲ ಕಾಂಗ್ರೆಸ್ ಎಂದು ಪ್ರತಿಪಾದಿಸಿದೆ. ಕುತೂಹಲದ ಸಂಗತಿ ಎಂದರೆ ಮಮತಾ ಬ್ಯಾನರ್ಜಿ ಅವರೇ ಈ ಬಣದ ನಾಯಕಿ ಎಂದೂ ಉಲ್ಲೇಖಿಸಿದ್ದಾರೆ ಎಂದು ಆಂಗ್ಲ ಮಾಧ್ಯಮವೊಂದು ವರದಿ ಮಾಡಿದೆ. ''ನಮ್ಮ ಈ ಪ್ರತಿಪಕ್ಷ ರಂಗಕ್ಕೆ ಮುಖ್ಯ ಸಲಹೆಗಾರರಾಗುವಂತೆ ಮಮತಾ ಬ್ಯಾನರ್ಜಿ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇವೆ,'' ಎಂದಿರುವ ರಿತಬ್ರತಾ ಅವರು, ''ಮಮತಾ ಅವರ ಸೋದರಳಿಯ ಹಾಗೂ ಸಂಸದ ಅಭಿಷೇಕ್ ಬ್ಯಾನರ್ಜಿ ಅವರಿಗೆ ಇಲ್ಲಿ ಯಾವ ಪಾತ್ರವೂ ಇಲ್ಲ, ಅವರೊಂದಿಗೆ ನಮ್ಮ ಬಣವು ಅಂತರ ಕಾಯ್ದುಕೊಳ್ಳಲು ಬಯಸುತ್ತದೆ,'' ಎಂದೂ ಹೇಳಿದ್ದಾರೆ.

ಕೋಲ್ಕೊತಾ ಮೇಯರ್ ಸ್ಥಾನ ತೊರೆದ ದೀದಿ ಆಪ್ತ

ಪಶ್ಚಿಮ ಬಂಗಾಳ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಆಪ್ತ ಫಿರ್ಹಾದ್ ಹಕೀಮ್ ಅವರು ಬುಧವಾರ ಕೋಲ್ಕೊತಾ ಮೇಯರ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪಕ್ಷದೊಳಗೆ ಭಿನ್ನಮತ ತೀವ್ರಗೊಂಡಿರುವ ಹೊತ್ತಲ್ಲೇ ಹಕೀಮ್ ಅವರಿಂದ ರಾಜೀನಾಮೆ ಹೊರಬಿದ್ದಿದೆ. ''ಇದು ದಿಢೀರ್ ನಿರ್ಧಾರವಲ್ಲ, ಪಕ್ಷದೊಳಗಿನ ಅಸಮಾಧಾನವೂ ಅಲ್ಲ, ರಾಜ್ಯದ ಬಿಜೆಪಿ ಆಡಳಿತದಲ್ಲಿ ಮೇಯರ್ ಸ್ಥಾನದಲ್ಲಿ ಕೆಲಸ ಮಾಡಲು ಕಷ್ಟವಾಗುತ್ತಿದ್ದು, ಹೊರಬರಲು ಫಿರ್ಹಾದ್ ಹಕೀಮ್ ಬಯಸಿದ್ದರು. ಹಾಗಾಗಿ, ಅವರು ರಾಜೀನಾಮೆ ನೀಡಿದ್ದಾರೆ,'' ಎಂದು ಟಿಎಂಸಿ ಶಾಸಕ ಕುನಾಲ್ ಘೋಷ್ ಹೇಳಿದ್ದಾರೆ.

ಬ್ರೀಫ್ ಕಾರ್ನರ್

ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯ ಕರೆಯ ಪಾಲನೆಗಾಗಿ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಸಿ.ಆರ್. ಪಾಟೀಲ್, ಜಿ. ಕಿಶನ್ ರೆಡ್ಡಿ ಅವರು ಬುಧವಾರ ಸಚಿವ ಸಂಪುಟ ಸಭೆಗೆ ಒಂದೇ ಕಾರಿನಲ್ಲಿ (ಕಾರ್ ಪೂಲಿಂಗ್) ಒಟ್ಟಾಗಿ ಪ್ರಯಾಣಿಸಿದರು. ಮತ್ತೊಂದೆಡೆ, ಸಚಿವರಾದ ಪ್ರಲ್ಹಾದ್ ಜೋಶಿ, ಗಜೇಂದ್ರ ಸಿಂಗ್ ಶೇಖಾವತ್ ಒಟ್ಟಾಗಿ ಒಂದೇ ಕಾರಿನಲ್ಲಿ ಪ್ರಯಾಣಿಸಿದರು.

ಕೇರಳ ವಿಧಾನಸಭೆಯಲ್ಲಿ ಬಸವಣ್ಣರ ವಚನ ಪಠಿಸಿದ ಮುಸ್ಲಿಂ ಶಾಸಕ

ತಿರುವನಂತಪುರಂ: ಕೇರಳದ ಗಡಿನಾಡು ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಮುಸ್ಲಿಂ ಲೀಗ್ ಶಾಸಕ ಎ.ಕೆ.ಎಂ. ಅಶ್ರಫ್ ಅವರು ಕೇರಳ ವಿಧಾನಸಭೆಯಲ್ಲಿ ಬಸವಣ್ಣನವರ ವಚನ ಪಠಿಸಿದ್ದಾರೆ. ಕೇರಳ ವಿಧಾನಸಭಾ ಚುನಾವಣೆಯ

ಬಳಿಕ ನಡೆದ ಮೊದಲ ಅಧಿವೇಶನದಲ್ಲಿ ಆಡಳಿತಾರೂಢ ಯುಡಿಎಫ್ ಮೈತ್ರಿಕೂಟದ ಭಾಗವಾಗಿರುವ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮಂಜೇಶ್ವರ ಕ್ಷೇತ್ರದ ಶಾಸಕ ಎ.ಕೆ.ಎಂ. ಅಶ್ರಫ್ ಅವರು ಕನ್ನಡದಲ್ಲಿ ಬಸವಣ್ಣನ ವಚನ ಹೇಳಿ ಎಲ್ಲರ ಗಮನ ಸೆಳೆದಿದ್ದಾರೆ. ಗಡಿನಾಡನ್ನು ಪ್ರತಿನಿಧಿಸುವ ಅಶ್ರಫ್ ಅವರು ಈ ಹಿಂದೆ ಸದನದಲ್ಲಿ ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದಿದ್ದರು. ಸದ್ಯಕ್ಕೆ, ಸದನದ ಕಲಾಪದ ವೇಳೆ ಬಸವಣ್ಣನವರ, ''ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ,'' ಎಂಬ ಸಾಮಾಜಿಕ ಸಾಮರಸ್ಯದ ವಚನವನ್ನು ಕನ್ನಡದಲ್ಲೇ ಉಲ್ಲೇಖಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೊ ವೈರಲ್ ಆಗಿದೆ.

ವಿಮಾನಯಾನ ಕ್ಷೇತ್ರಕ್ಕೆ 10 ಸಾವಿರ ಕೋಟಿ ರೂ. ಆರ್ಥಿಕ ಬೆಂಬಲ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ತತ್ತರಿಸಿರುವ ಭಾರತೀಯ ವಿಮಾನಯಾನ ಸಂಸ್ಥೆಗಳ ನೆರವಿಗೆ ಧಾವಿಸಿರುವ ಕೇಂದ್ರ ಸರಕಾರವು, ದೊಡ್ಡ ಆರ್ಥಿಕ ನೆರವನ್ನು ಪ್ರಕಟಿಸಿದೆ.

ಸರಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳಿಗೆ 10 ಸಾವಿರ ಕೋಟಿ ರೂ.ಗಳ ಬಡ್ಡಿ ರಹಿತ ಹಣಕಾಸು ಬೆಂಬಲ ನೀಡುವ ನಿರ್ಧಾರವನ್ನು ಬುಧವಾರ ನಡೆದ ಸಚಿವ ಸಂಪುಟ ಸಭೆ ಕೈಗೊಂಡಿದೆ. ತೈಲ ಕಂಪನಿಗಳು ಈ ಹಣವನ್ನು ಬಳಸಿ ವಿಮಾನ ಇಂಧನದ ಬೆಲೆಯನ್ನು ನಿಯಂತ್ರಣದಲ್ಲಿಡಲಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಹೆಚ್ಚಾದಾಗ ಆ ಹೊರೆಯನ್ನು ನೇರವಾಗಿ ವಿಮಾನಯಾನ ಸಂಸ್ಥೆಗಳ ಮೇಲೆ ಹಾಕದಿರಲು ಈ ನಿಧಿ ನೆರವಾಗುತ್ತದೆ.

''ಮಧ್ಯಪ್ರಾಚ್ಯದಲ್ಲಿನ ಯುದ್ಧದ ಪರಿಸ್ಥಿತಿಯಿಂದಾಗಿ ಜಾಗತಿಕ ಕಚ್ಚಾ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಇಂಧನ ಬೆಲೆಗಳು ಗಗನಕ್ಕೇರುತ್ತಿವೆ. ಪಹಲ್ಗಾಮ್ ಉಗ್ರರ ದಾಳಿಯ ನಂತರ ಪಾಕಿಸ್ತಾನವು ತನ್ನ ವಾಯುಪ್ರದೇಶವನ್ನು ಭಾರತದ ವಿಮಾನಗಳ ಸಂಚಾರಕ್ಕೆ ಮುಚ್ಚಿದೆ. ಇದರಿಂದಾಗಿ ಭಾರತೀಯ ವಿಮಾನಗಳು ಯುರೋಪ್ ಮತ್ತು ಮಧ್ಯಪ್ರಾಚ್ಯ ದೇಶಗಳಿಗೆ ತಲುಪಲು ಬಳಸು ದಾರಿಯಲ್ಲಿ ಸಂಚರಿಸಬೇಕಾಗಿದೆ. ಇದು ಇಂಧನ ಬಳಕೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದೆ,'' ಎಂದು ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು. ''ಸರಕಾರದ ಈ 10 ಸಾವಿರ ಕೋಟಿ ರೂ.ಗಳ ಪ್ಯಾಕೇಜ್‌ನಿಂದಾಗಿ ವಿಮಾನಯಾನ ಸಂಸ್ಥೆಗಳು ನಷ್ಟಕ್ಕೆ ಸಿಲುಕುವುದನ್ನು ತಪ್ಪಿಸಲಿದೆ. ದೇಶೀಯ ಮತ್ತು ಅಂತಾರಾಷ್ಟ್ರೀಯ ವಿಮಾನ ಇಂಧನ ಬೆಲೆಗಳು ಸ್ಥಿರಗೊಳ್ಳುವುದರಿಂದ, ಅಂತಾರಾಷ್ಟ್ರೀಯ ವಿಮಾನಗಳ ರದ್ದತಿ ನಿಲ್ಲಲಿದ್ದು, ಪ್ರಯಾಣಿಕರಿಗೆ ಟಿಕೆಟ್ ದರದಲ್ಲಿ ದೊಡ್ಡಮಟ್ಟದ ಸಮಾಧಾನ ಸಿಗಲಿದೆ,'' ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

ಕುವೈತ್, ಬಹರೇನ್ ಸೇನಾ ನೆಲೆಗಳ ಮೇಲೆ ಇರಾನ್ ದಾಳಿ

ಟೆಹ್ರಾನ್: ಅಮೆರಿಕ ಹಾಗೂ ಇಸ್ರೇಲ್ ನಡುವಿನ ಸಂಘರ್ಷವು ದಿನೇದಿನೆ ಹೆಚ್ಚುತ್ತಲೇ ಇದೆ. ಕುವೈತ್ ಮತ್ತು ಬಹರೇನ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ಕ್ಷಿಪಣಿ, ಡ್ರೋನ್ ದಾಳಿ ನಡೆಸಿದೆ. ಪ್ರತಿಯಾಗಿ ಅಮೆರಿಕದ ಸೇನಾಪಡೆಗಳು ಇರಾನ್ ಹಾರಿಸಿದ ಕ್ಷಿಪಣಿ, ಡ್ರೋನ್‌ಗಳನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿವೆ. ''ದೇಶದ ವಿವಿಧ ಭಾಗಗಳಲ್ಲಿ ಭಾರಿ ಸ್ಫೋಟದ ಶಬ್ದ ಕೇಳಿಬಂದಿದೆ. ವೈಮಾನಿಕ ಬೆದರಿಕೆ ತಡೆಯಲು ವಾಯು

ರಕ್ಷಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಲಾಗಿದೆ. ಇರಾನ್‌ನ ಕ್ಷಿಪಣಿ, ಡ್ರೋನ್‌ಗಳನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿದ್ದೇವೆ,'' ಎಂದು ಕುವೈತ್ ಸರಕಾರ ಹೇಳಿದೆ. ಏತನ್ಮಧ್ಯೆ, ಅಮೆರಿಕ ಮತ್ತು ಇಸ್ರೇಲ್ ಜತೆಗಿನ ಕದನ ವಿರಾಮದ ವಿಸ್ತರಣೆಗೆ ಸಂಬಂಧಿಸಿದಂತೆ ಮಧ್ಯಸ್ಥಿಕೆಗಾರರೊಂದಿಗಿನ ಸಂವಹನವನ್ನು ಇರಾನ್ ಸ್ಥಗಿತಗೊಳಿಸಿದೆ ಎಂದು ಅಂತಾರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿದ್ದವು. ಆದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ವರದಿಗಳನ್ನು ತಳ್ಳಿಹಾಕಿದ್ದು, ಮಾತುಕತೆ ಇನ್ನೂ ಮುಂದುವರಿದಿದೆ ಎಂದು ಒತ್ತಿ ಹೇಳಿದ್ದಾರೆ.

ಒಬ್ಬ ಭಾರತೀಯ ಸಾವು: ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದು, ದಾಳಿಯಲ್ಲಿ ಭಾರತೀಯ ನಾಗರಿಕರೊಬ್ಬರು ಮೃತಪಟ್ಟಿದ್ದಾರೆ. ಘಟನೆಯ ನಂತರ, ಭಾರತದ ಅತಿದೊಡ್ಡ ವಿಮಾನಯಾನ ಸಂಸ್ಥೆ ಇಂಡಿಗೊ, ಜೂನ್ 4ರಂದು ಮಧ್ಯಾಹ್ನ 12 ಗಂಟೆಯವರೆಗೆ ಕುವೈತ್‌ಗೆ ಮತ್ತು ಅಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ಸ್ಥಗಿತಗೊಳಿಸಿದೆ.

ರಷ್ಯಾದಿಂದ ಬಂತು 4ನೇ ಎಸ್-400 ಸುದರ್ಶನ ಚಕ್ರ

ಹೊಸದಿಲ್ಲಿ: ರಷ್ಯಾ ನಿರ್ಮಿತ ಎಸ್-400 ಟ್ರಯಂಫ್ (ಸುದರ್ಶನ ಚಕ್ರ) ವಾಯು ರಕ್ಷಣಾ ವ್ಯವಸ್ಥೆಯ ನಾಲ್ಕನೇ ಸ್ಕ್ವಾಡ್ರನ್ ಭಾರತ ತಲುಪಿದೆ ಎಂದು ರಕ್ಷಣಾ ಮೂಲಗಳನ್ನು ಉಲ್ಲೇಖಿಸಿ ಎಎನ್‌ಐ ಸುದ್ದಿಸಂಸ್ಥೆ ವರದಿ ಮಾಡಿದೆ. ಇದು ದೇಶದ ದೀರ್ಘ ವ್ಯಾಪ್ತಿಯ ವೈಮಾನಿಕ ರಕ್ಷಣಾ ಸಾಮರ್ಥ್ಯಕ್ಕೆ ಭಾರಿ ಬಲ ತುಂಬಿದೆ.

ಕ್ಷಿಪಣಿ, ಡ್ರೋನ್ ಸೇರಿದಂತೆ ಇತರೆ ಬಗೆಯ ವಾಯುದಾಳಿಯನ್ನು ತಡೆಯಬಲ್ಲ ಸಾಮರ್ಥ್ಯ ಹೊಂದಿರುವ ಅತ್ಯಾಧುನಿಕ 4ನೇ 'ಸುದರ್ಶನ ಚಕ್ರ' ವಾಯು ರಕ್ಷಣಾ ವ್ಯವಸ್ಥೆಯು ರಷ್ಯಾದಿಂದ ಭಾರತಕ್ಕೆ ಕೆಲವು ದಿನಗಳ ಹಿಂದೆ ಬಂದಿಳಿದಿದೆ. ಶೀಘ್ರದಲ್ಲೇ ಅದನ್ನು ಆಯಕಟ್ಟಿನ ಗಡಿ ಭಾಗದಲ್ಲಿ ನಿಯೋಜಿಸಲಾಗುತ್ತದೆ ಎಂದು ವರದಿ ಹೇಳಿದೆ. ಭಾರತವು ಐದು 'ಸುದರ್ಶನ ಚಕ್ರ' ಖರೀದಿಸುವ ಸಂಬಂಧ ರಷ್ಯಾ ಜತೆಗೆ 2018ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಅದರ ಅನುಸಾರ ಈ ಪೂರೈಕೆ ನಡೆದಿದೆ. ಮೊದಲ ಮೂರು ಸುದರ್ಶನ ಚಕ್ರಗಳು ನಿಗದಿತ ಅವಧಿಯೊಳಗೆ ಭಾರತದ ಕೈ ಸೇರಿದ್ದವು. ಆದರೆ, ರಷ್ಯಾ-ಉಕ್ರೇನ್ ಯುದ್ಧದ ಪರಿಣಾಮ ಬಾಕಿ ಉಳಿದ ಎರಡು 'ಸುದರ್ಶನ ಚಕ್ರ'ಗಳ ಪೂರೈಕೆಯಲ್ಲಿ ವಿಳಂಬವಾಗಿತ್ತು.

ಪರೀಕ್ಷೆ ತರಬೇತಿ ಕೇಂದ್ರದ ಮೇಲೆ ದಾಳಿ

ಪಟನಾ: ನಗರದಲ್ಲಿರುವ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರಗಳ ನಡುವಿನ ತೀವ್ರ ಪೈಪೋಟಿ ಮತ್ತೆ ಭುಗಿಲೆದ್ದಿದ್ದು, 'ಖಾನ್ ಸರ್' ಅವರ ತರಬೇತಿ ಕೇಂದ್ರ 'ಗ್ಲೋಬಲ್ ಸ್ಟಡೀಸ್' ಮೇಲೆ ದಾಳಿ ಮಾಡಲಾಗಿದೆ. ಇತ್ತೀಚೆಗೆ ಪ್ರಕಟವಾದ ಬಿಹಾರ ಪೊಲೀಸ್ ಕಾನ್‌ಸ್ಟೆಬಲ್ ಪರೀಕ್ಷೆ ಫಲಿತಾಂಶದಲ್ಲಿ ಗ್ಲೋಬಲ್ ಸ್ಟಡೀಸ್ ಸಂಸ್ಥೆಯ ಅತಿ ಹೆಚ್ಚು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು.

ಇದರ ಯಶಸ್ಸನ್ನು ಆಚರಿಸಲು ಮೇ 31ರಂದು ಸಂಸ್ಥೆಯ ಆವರಣದಲ್ಲಿ ದೊಡ್ಡ ಬ್ಯಾನರ್‌ಗಳು ಮತ್ತು ಸ್ವಾಗತ ಕಮಾನುಗಳನ್ನು ಅಳವಡಿಸಲಾಗಿತ್ತು. ಮಂಗಳವಾರ ತಡರಾತ್ರಿ ಸಿಬ್ಬಂದಿ ಹೊರಡಲು ಸಿದ್ಧರಾಗುತ್ತಿದ್ದಾಗ, ಅಲ್ಲಿಗೆ ಬಂದ 10 ರಿಂದ 12 ಜನರ ಗುಂಪೊಂದು ಸಂಸ್ಥೆಯ ಮೇಲೆ ಮುಗಿಬಿದ್ದಿದೆ. ಕೋಚಿಂಗ್ ಸೆಂಟರ್‌ನ ಬೋರ್ಡ್‌ಗಳನ್ನು ಧ್ವಂಸಗೊಳಿಸಿ, ಅಲ್ಲಿದ್ದವರ ಮೇಲೆ ಹಲ್ಲೆ ನಡೆಸಿದೆ. ''ಇದು ವ್ಯವಸ್ಥಿತ ಶಸ್ತ್ರಾಸ್ತ್ರ ದಾಳಿಯಾಗಿರದೆ, ಕೇವಲ ಗಲಾಟೆ ಮತ್ತು ಧ್ವಂಸ ಕೃತ್ಯವಾಗಿದೆ.

ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, ದಾಳಿ ಮಾಡಿದವರಲ್ಲಿ ಮತ್ತೊಂದು ಖಾಸಗಿ ಶಿಕ್ಷಣ ಸಂಸ್ಥೆಯ ಭದ್ರತಾ ಸಿಬ್ಬಂದಿ ಸೇರಿರುವುದು ಪತ್ತೆಯಾಗಿದೆ,'' ಎಂದು ಡಿಎಸ್‌ಪಿ ರಾಜೇಶ್ ರಂಜನ್ ಸ್ಪಷ್ಟಪಡಿಸಿದ್ದಾರೆ.

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಚಿಟ್‌ಫಂಡ್ ವಿಭಾಗ,
ಎಂಎಸ್‌ಐಎಲ್ ಹೌಸ್, ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052.
ದೂರವಾಣಿ: 080-22264021-25 ಇ-ಮೇಲ್: msil.chitfund@msilonline.com
ಸಂಖ್ಯೆ: ಎಂಎಸ್‌ಐಎಲ್/ಚಿ.ಫಂ/02/2026-27/ಕರೆ-3 ದಿನಾಂಕ: 03.06.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ-ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಎಂಎಸ್‌ಐಎಲ್, ಚಿಟ್ ಫಂಡ್ ವಿಭಾಗಕ್ಕೆ ಒಂದು ವರ್ಷದ ಅವಧಿಗೆ ಹಣಕಾಸಿನ ಪರಿಶೀಲನೆ ಮತ್ತು ಲೆಕ್ಕಪತ್ರ ಸೇವೆಗಳನ್ನು ಒದಗಿಸಲು ಅರ್ಹ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಕೆಲಸದ ವ್ಯಾಪ್ತಿ, ಅರ್ಹತಾ ಮಾನದಂಡಗಳು ಮತ್ತು ನಿಯಮ ಮತ್ತು ನಿಬಂಧನೆಗಳನ್ನು ಒಳಗೊಂಡ ವಿವರವಾದ ಟೆಂಡರ್ ದಾಖಲೆಪತ್ರಗಳನ್ನು ಇ-ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮ್ಯಾನ್ಯುಯಲ್ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 11ನೇ ಜೂನ್ 2026, ಮಧ್ಯಾಹ್ನ 3.30 ಗಂಟೆಯೊಳಗೆ.**
ಅಗತ್ಯತೆಗೆ ಅನುಗುಣವಾಗಿ ಅರ್ಹತಾ ಮಾನದಂಡಗಳನ್ನು ತಿದ್ದುಪಡಿ ಮಾಡುವ ಅಥವಾ ಮಾರ್ಪಡಿಸುವ ಹಕ್ಕನ್ನು ಕಂಪನಿಯು ಕಾಯ್ದಿರಿಸಿಕೊಂಡಿದೆ.
ಸಹಿ/-
ಮುಖ್ಯ ಪ್ರಧಾನ ವ್ಯವಸ್ಥಾಪಕರು (ಚಿಟ್ ಫಂಡ್)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಚೇರಿ ಬೆಂಗಳೂರು
ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 3 ದಿನಾಂಕ:03.06.2026
ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ (ಪೂರ್ವ ಅರ್ಹತೆ ಮತ್ತು ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ-ಪೋರ್ಟಲ್ ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ @17.00 ಗಂಟೆ
KSRTC/2026-27/IND0304	ಸಿಂಥೆಟಿಕ್ ರಬ್ಬರ್ ಅಡ್ಹೆಸಿವ್ ಖರೀದಿ	0.40	22/06/2026
KSRTC/2026-27/IND0305	ಟೈರಾಡ್, ಡ್ರ್ಯಾಂಗ್‌ಲಿಂಕ್ ಮತ್ತು ರಿಪೇರ್ ಕಿಟ್‌ಗಳ ಖರೀದಿ	5.00	06/07/2026

ತಿದ್ದುಪಡಿ: ಟೆಂಡರ್ ಸಂಖ್ಯೆ KSRTC/2026-27/IMD0299 ಆಯಿಲ್ ಸೀಲ್‌ಗಳ ಖರೀದಿಯನ್ನು KSRTC/2026-27/IND0299 ಎಂದು ಹಾಗೂ ಟೆಂಡರ್ ಸಂಖ್ಯೆ KSRTC/2026-27/IMD0300 ಪಿಯೂ ಅಡ್ಹೆಸಿವ್ ಸೀಲೇಂಟ್‌ಗಳ ಖರೀದಿಯನ್ನು KSRTC/2026-27/IND0300 ಎಂದು ತಿದ್ದುಪಡಿ ಮಾಡಲಾಗಿದೆ.
ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು. ಸೂಚನೆ:-ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ: 080-46010000/ 080-68948777 ಕರೆಮಾಡಿ/ Support@eprochelpdesk.com ಮೇಲ್ ಮಾಡಿ ಮಾಹಿತಿಪಡೆಯಬಹುದಾಗಿರುತ್ತದೆ. ಬಿಡ್ಡುದಾರರಿಗೆ ಟೆಂಡರ್ ಸಂಬಂದ ಯಾವುದೇ ಅಗತ್ಯವಿದರೆ cosp@ksrtc.org, ನಲ್ಲಿ ಸಂಪರ್ಕಿಸಬಹುದಾಗಿದೆ. (ಸಂಪರ್ಕಿಸಿ:7760990224).
ಸಹಿ/-
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು (ಟೆಂಡರ್ ಕರೆಯುವ ಪ್ರಾಧಿಕಾರಿ)
DIPR/CP/964/Zen/2026-27

ನಗರ ಯೋಜನಾ ಪ್ರಾಧಿಕಾರ, ಸಿಂದಗಿ
ರೈತ ಭವನ ಕಟ್ಟಡ, ಎ.ಪಿ.ಎಂ.ಸಿ. ಮಾರುಕಟ್ಟೆ, ಸಿಂದಗಿ. ಇ-ಮೇಲ್: tpasindagi@gmail.com
ಸಂಖ್ಯೆ: ನಯೋಪ್ರಾಸಿಂ:ಭೂ.ಉ.ಬ:ಪ್ರಕಟಣೆ:01/2026-27 ದಿನಾಂಕ: 01.06.2026
ಪತ್ರಿಕಾ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 69 (3) ಪ್ರಕಾರ)
ಸಿಂದಗಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಯಾದ ಮಹಾಯೋಜನೆಯಲ್ಲಿ ಸಿಂದಗಿ ತಾಲೂಕು ಸಿಂದಗಿ ಗ್ರಾಮದ ಕೆಳಕಂಡ ಜಮೀನು ಉದ್ಯಾನವನ ಹಾಗೂ ಬಯಲುಜಾಗೆ ಮತ್ತು ಸಾರ್ವಜನಿಕ-ಅರೆಸಾರ್ವಜನಿಕ ವಲಯದಲ್ಲಿ ಬರುತ್ತದೆ. ಅನುಮೋದಿತ ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಉದ್ಯಾನವನ ಹಾಗೂ ಬಯಲುಜಾಗೆ ಮತ್ತು ಸಾರ್ವಜನಿಕ-ಅರೆಸಾರ್ವಜನಿಕ ಜಾಗೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 69(2) ಪ್ರಕಾರ, 5 ವರ್ಷಗಳ ಅವಧಿಯಲ್ಲಿ ಭೂ ಉಪಯೋಗದಂತೆ ಪ್ರಾಧಿಕಾರ ಭೂ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಪಡಿಸಲು ವಿಫಲವಾದಲ್ಲಿ ಕಾಯ್ದಿರಿಸಿದ ಭೂ ಉಪಯೋಗ ರದ್ದಾಗುತ್ತದೆ. ಸದರಿ ಜಮೀನನ್ನು ಪ್ರಾಧಿಕಾರವು ನಿಗದಿತ ಅವಧಿಯಲ್ಲಿ ಕಾಯ್ದೆಯಂತೆ ಭೂ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸಲು ಆರ್ಥಿಕ ಸ್ಥಿತಿಗತಿಯಿಂದ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಅರ್ಜಿದಾರರು ನಿಗದಿತ 5 ವರ್ಷ ಕಾಲಾವಧಿ ಮುಗಿದಿರುವುದರಿಂದ ಪ್ರಸ್ತಾಪಿತ ಜಮೀನನ್ನು ವಸತಿ/ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ. ನಗರಕ್ಕೆ ವಲಸೆ ಬರುವ ಕರಕುಶಲ ಕಾರ್ಮಿಕರಿಗೆ ಹಾಗೂ ಸಾರ್ವಜನಿಕರಿಗೆ ನಿವೇಶನ/ಕೆಲಸ ಸಿಗುವ ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಹಾಗೂ ಅರ್ಜಿದಾರರೇ ಎಲ್ಲಾ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಯೋಗ್ಯ ದರದಲ್ಲಿ ನಿವೇಶನ ಮಾರಾಟ ಮಾಡುವ ಸಾರ್ವಜನಿಕ ಹಿತದೃಷ್ಟಿಯಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಭೂ ಉಪಯೋಗ ಬದಲಾವಣೆ ಮಾಡುವ ವಿವರ ಕೆಳಗಿನಂತಿದೆ.

ಕ್ರ. ಸಂ.	ಗ್ರಾಮದ ಹೆಸರು	ಸ.ನಂ.	ವಿಸ್ತೀರ್ಣ	ಭೂ ಮಾಲೀಕರ ಹೆಸರು	ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಭೂ ಉಪಯೋಗ	ಅರ್ಜಿದಾರರು ಬದಲಾವಣೆ ಕೋರಿರುವ ಭೂ ಉಪಯೋಗ
1	ಸಿಂದಗಿ	280/1ಅ	0ಎ-19 ಗುಂಟೆ	ಶ್ರೀ ಮಹ್ಮದ ಸಲೀಮ ಮೈನುದ್ದೀನ ಗುಂದಗಿ	ಸಾರ್ವಜನಿಕ - ಅರೆಸಾರ್ವಜನಿಕ	ವಾಣಿಜ್ಯ
2	ಸಿಂದಗಿ	848/1	0ಎ-20 ಗುಂಟೆ	ಶ್ರೀ ಜಗದೀಶ ಸಿದ್ದಪ್ಪ ಭೂಸನೂರ	ಉದ್ಯಾನವನ ಹಾಗೂ ಬಯಲುಜಾಗೆ ವಲಯ	ವಸತಿ

ಆದ್ದರಿಂದ ಪ್ರಸ್ತಾವನೆಯ ಕುರಿತು ಸಾರ್ವಜನಿಕರಿಂದ ಯಾವುದೇ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ, ಸದರಿ ಸಲಹೆ/ಸೂಚನೆ/ಆಕ್ಷೇಪಣೆಗಳು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 16 ದಿವಸಗಳೊಳಗೆ ಈ ಕಚೇರಿಗೆ ಖುದ್ದಾಗಿಯಾಗಲಿ ಅಥವಾ ನೋದಾಯಿತ ಅಂಚೆ ಮುಖಾಂತರವಾಗಲಿ ಲಿಖಿತವಾಗಿ ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಸಿಂದಗಿ ಇವರಿಗೆ ಸಲ್ಲಿಸತಕ್ಕದ್ದು. ನಂತರ ಬಂದ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/- ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ, ಸಿಂದಗಿ
ವಾಸಾಸಂಇ/ವಿಜಯಪುರ/123/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು
ಉರ್ವಾಸ್ಟೋರ್ಸ್, ಅಶೋಕನಗರ ಅಂಚೆ, ಮಂಗಳೂರು-575006.
ದೂ: 2459555 (ಅಧ್ಯಕ್ಷರು): 2459565 (ಕಛೇರಿ)ಫ್ಯಾಕ್ಸ್: 2459545
E-mail: muda_comissioner@yahoo.co.in
ಉಲ್ಲೇಖ: ಮನಪ್ರಾ/ಲೆಕ್ಕ/ಹರಾಜು(01)/2026-27 ದಿನಾಂಕ: 02-06-2026
ಈ-ಹರಾಜು ಪ್ರಕಟಣೆ
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ತನ್ನ ಯೋಜನಾ ನಿಧಿಯಲ್ಲಿ ಲಭ್ಯವಿರುವ ನಿಧಿಯ ಹೂಡಿಕೆಗಾಗಿ ಇ-ಹರಾಜು ಠೇವಣಿ ಮಾಡುವ ಮೂಲಕ ಹೂಡಿಕೆಗಾಗಿ ಅರ್ಹ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಮತ್ತು ಖಾಸಗಿ ಸಹಭಾಗಿತ್ವದ ಶೆಡ್ಯೂಲ್ ಬ್ಯಾಂಕ್ ಭಾಗವಹಿಸಲು ಕೆಪಿಪಿ ಪೋರ್ಟಲ್ ಮೂಲಕ ಇ ಹರಾಜು ಟೆಂಡರ್‌ನ್ನು ಆಹ್ವಾನಿಸುತ್ತಿದೆ. ಅರ್ಹ ಬ್ಯಾಂಕುಗಳು ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಸಲ್ಲಿಸಬಹುದು. ಇ-ಪೋರ್ಟಲ್‌ನಲ್ಲಿ ಅನುಬಂಧ ಎ ಮತ್ತು ಅನುಬಂಧ ಬಿ ಘೋಷಣೆಯಲ್ಲಿನ ಅರ್ಹತಾ ಮಾನದಂಡಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 17-06-2026 ರಂದು ಸಾಯಂಕಾಲ 4.00 ಘಂಟೆಗೆ ಮುಂಚಿತವಾಗಿ. ಲೈವ್ ಬಿಡ್ಡಿಂಗ್ ದಿನಾಂಕ: 22-06-2026ರ ಬೆಳಿಗ್ಗೆ 10.30 ಘಂಟೆಯಿಂದ ಪ್ರಾರಂಭವಾಗಿ ಸಾಯಂಕಾಲ 5.30 ಘಂಟೆಗೆ ಮುಕ್ತಾಯವಾಗುತ್ತದೆ. ಆಸಕ್ತ ಬಿಡ್‌ದಾರರು ಆನ್‌ಲೈನ್ ಮೂಲಕ ಭಾಗವಹಿಸಬೇಕಾಗುತ್ತದೆ ವೆಬ್‌ಸೈಟ್ ಮುಖಾಂತರ ಇ-ಹರಾಜು ದಾಖಲೆಗಳನ್ನು ಹರಾಜು ದಾಖಲೆಗಳನ್ನು ನೋಡಬಹುದು ಮತ್ತು ಪಡೆಯಬಹುದು.
ಸೂಚನೆ: ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ http://kppp.karnataka.gov.in ರಲ್ಲಿರುವ ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಹರಾಜು ಕುರಿತಾದ ಯಾವುದೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ. ಹರಾಜು ಕ್ಯಾಲೆಂಡರ್ ಅನ್ನು ಮುಂದೂಡುವುದು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಸಲಾಗುವುದು.
ಸಹಿ/-, ಆಯುಕ್ತರು
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು
DIPR/DK/KSMCA/313/26-27 dt. 03.06.2026

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳ ಕಛೇರಿ
#308, ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಶ್ರೀ ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ ಜಿಲ್ಲೆ - 571313
Email ID: dpdochamarajanagar@gmail.com ದೂ.ಸಂಖ್ಯೆ: 08226-355162
ಸಂಖ್ಯೆ : ಜಿಆಕುಕ/ಚಾ.ನ/ಸಿ.ಪಿ.ಹೆಚ್.ಸಿ-ಯು.ಹೆಚ್.ಸಿ/01/2026-27 ದಿನಾಂಕ: 01/06/2026
ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ರಾಷ್ಟ್ರೀಯ ಆರೋಗ್ಯ ಅಭಿಯಾನ 15ನೇ ಹಣಕಾಸು ಆಯೋಗದಡಿಯಲ್ಲಿ ಚಾಮರಾಜನಗರ ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಔಷಧಿಗಳನ್ನು 2026-2027ನೇ ಸಾಲಿಗೆ ಪೂರೈಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆ ಇ.ಎಂ.ಡಿ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ https://kppp.karnataka.gov.in/ ನಲ್ಲಿ ನೋಡಬಹುದಾಗಿದೆ.

ಟೆಂಡರ್ ಹೆಸರು	15ನೇ ಹಣಕಾಸು ಆಯೋಗದಡಿಯಲ್ಲಿ ಚಾಮರಾಜನಗರ ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಔಷಧಿಗಳನ್ನು ಖರೀದಿಸಲು.
ಟೆಂಡರ್ ಅರ್ಜಿ ಹಾಕಲು ಆರಂಭದ ದಿನಾಂಕ	ದಿನಾಂಕ: 01.06.2026 ವೇಳೆ:10:30AM
ಪ್ರೀ ಬಿಡ್ ಮೀಟಿಂಗ್	ದಿನಾಂಕ: 09.06.2026 ವೇಳೆ:11:00AM
ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ	ದಿನಾಂಕ: 16.06.2026 ವೇಳೆ: 04.00PM
ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: 17.06.2026 ವೇಳೆ: 04.10 PM
ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: 19.06.2026 ವೇಳೆ: 11.00AM
ಟೆಂಡರ್ ತೆರೆಯುವುದು/ಪ್ರೀ ಬಿಡ್ ಮೀಟಿಂಗ್	ಜಿಲ್ಲಾ ಆಡಳಿತ ಭವನ ಮೂರನೇ ಮಹಡಿ # 307 ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಸಭಾಂಗಣ, ಚಾಮರಾಜನಗರ

ಸಹಿ/- ಸದಸ್ಯ ಕಾರ್ಯದರ್ಶಿ
ಜಿಲ್ಲಾ ಆರೋಗ್ಯ ಮತ್ತು .ಕು.ಕ.ಸೊಸೈಟಿ, ಚಾಮರಾಜನಗರ.
ಸಂ:ವಾಸಾಸಂಇ:ಚಾನಗರ:148:2026-27

ಹೃತ್ಪೂರ್ವಕ ಅಭಿನಂದನೆಗಳು
GOVERNMENT OF KARNATAKA
ಕರ್ನಾಟಕದ ನೂತನ ಮಾನ್ಯ ಮುಖ್ಯಮಂತ್ರಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಡಾ.ಜಿ. ಪರಮೇಶ್ವರ ಹಾಗೂ
ನೂತನ ಸಚಿವರುಗಳಿಗೆ ಹಾರ್ದಿಕ ಶುಭಾಶಯಗಳು.
ಜನರ ಆಶೋತ್ತರಗಳಿಗೆ ಸ್ಪಂದಿಸುವ, ಅಭಿವೃದ್ಧಿಯ ಹೊಸ ಅಧ್ಯಾಯ ನಿಮ್ಮ ನಾಯಕತ್ವದಲ್ಲಿ ಆರಂಭವಾಗಲಿ. ನಿಮ್ಮ ದೂರದೃಷ್ಟಿಯ ನಾಯಕತ್ವದಲ್ಲಿ ಕರ್ನಾಟಕವು ಇನ್ನಷ್ಟು ಪ್ರಗತಿ, ಸಮೃದ್ಧಿ ಮತ್ತು ಜನಕಲ್ಯಾಣದ ಪಥದಲ್ಲಿ ಮುನ್ನಡೆಯಲಿ.
ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಮುಖ್ಯಮಂತ್ರಿ
ಶ್ರೀ ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿ
ಶ್ರೀ ಕೆ.ಎಚ್. ಮುನಿಯಪ್ಪ
ಶ್ರೀ ಕೆ.ಜೆ. ಜಾರ್ಜ್
ಶ್ರೀ ಎಂ.ಬಿ. ಪಾಟೀಲ್
ಶ್ರೀ ರಾಮಲಿಂಗಾ ರೆಡ್ಡಿ
ಶ್ರೀ ಸತೀಶ್ ಜಾರಕಿಹೊಳಿ
ಶ್ರೀ ಕೃಷ್ಣ ಬೈರೇಗೌಡ
ಶ್ರೀ ಪ್ರಿಯಾಂಕ್ ಖರ್ಗೆ
ಶ್ರೀ ಯು.ಟಿ. ಖಾದರ್
ಶ್ರೀ ಈಶ್ವರ ಖಂಡ್ರೆ
ಡಾ. ಯತೀಂದ್ರ ಸಿದ್ದರಾಮಯ್ಯ
ಶ್ರೀ ಬೈರತಿ ಸುರೇಶ್
ಡಾ. ಶರಣ ಪ್ರಕಾಶ್ ಪಾಟೀಲ್
ಬಲಿಷ್ಠ ನಾಯಕತ್ವ - ಅಭಿವೃದ್ಧಿಯ ಕರ್ನಾಟಕ
ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಶುಭಾಶಯಗಳು
ಡಾ. ಎಂ. ಎನ್. ರಾಜೇಂದ್ರ ಕುಮಾರ್
ಅಧ್ಯಕ್ಷರು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು
ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು
ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು
ನಿರ್ದೇಶಕರು ಇಫ್ಕೋ ಹೊಸದಿಲ್ಲಿ
ಸಂಸ್ಥಾಪಕರು ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ.), ಮಂಗಳೂರು